ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಇಂದಿರಾ ಲಂಕೇಶ್
ಹುಳಿಮಾವು ಮತ್ತು ನಾನು
ಆರಂಭ

ಆಗಸ್ಟ್ 17, 2011 ಪುಟ 20 ರೂ. 14/-



ಸದಾನಂದನೂ ಭೂಗಳ್ಳ


ಭಂಡ ಯಡ್ಡಿ ವೈರಿಗಳ ತಲೆ ತರಿದ

ಹಿಂದೂತ್ವಕ್ಕಿಂತ ಜಾತಿಯೇ ಮುಖ್ಯ

ಗುಲಾಮ


ಬಿಎಂಪಿ ಭ್ರಷ್ಟರಿಗೆ ಕಷ್ಟ ಕಷ್ಟ!

ಬೇಲೇಕೇರಿ: ಖಾರಾಪುಡಿ ಮಹೇಶನೇ ಕಿಂಗ್ ಪಿನ್



ಬಿದ್ದ ಹೆಣಗಳನ್ನು ಇರಿದು ಒದ್ದರು

ಪಿ. ಲಂಕೇಶರ ಪತ್ನಿ ಇಂದಿರಾ ಅವರ ಬಗ್ಗೆ ಜನರಿಗೆ ಹೆಚ್ಚು ಗೊತ್ತಿಲ್ಲ. ಇವರಿಬ್ಬರೂ ಪ್ರೀತಿಸಿ ಮದುವೆಯಾಗಿದ್ದರೂ, ನಾಲ್ಕು ದಶಕಗಳ ಕಾಲ ದಂಪತಿಗಳಾಗಿದ್ದರೂ ಇಂದಿರಾ ಅವರು ಲಂಕೇಶರೊಂದಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾಗಲಿ, ಲಂಕೇಶರನ್ನು ಕುರಿತು ಮಾತನಾಡಿದ್ದಾಗಲಿ ಬಹಳ ಕಡಿಮೆ. ಬದಲಾಗಿ ಗಂಡ, ಮಕ್ಕಳು, ಮನೆ ಎಂದು ಆರಂಭದಲ್ಲಿ ತನ್ನ ಬದುಕನ್ನು ಸೀಮಿತಗೊಳಿಸಿಕೊಂಡಿದ್ದ ಇಂದಿರಾ ಆನಂತರ ತಮ್ಮದೇ ಆದ ವ್ಯಕ್ತಿತ್ವವನ್ನು ಕಂಡುಕೊಂಡು ಯಶಸ್ವಿ ಬಿಸಿನೆಸ್ ವುಮೆನ್ ಆಗಿದ್ದವರು. ಲೇಖಕನಾಗಿ, ಚಿಂತಕನಾಗಿ, ಮಾರ್ಗದರ್ಶಿಯಾಗಿ ಲಂಕೇಶರನ್ನು ನೋಡಿರುವ ಓದುಗರಿಗೆ ಈ ಅಂಕಣದ ಮೂಲಕ ಈಗ ಅವರನ್ನು ಕುರಿತ ಅನೇಕ ಹೊಸ ವಿಚಾರಗಳು ಹಾಗೂ ವೈಯಕ್ತಿಕ ಆಯಾಮಗಳೂ ಪರಿಚಯವಾಗಲಿವೆ.




ತಂದೆ ಸೋಮಸುಂದರ್ ಮತ್ತು ಅಜ್ಜಿ ಚೆನ್ನಮ್ಮ

'ಟೈಮ್ ಎಷ್ಟೀ?' ಎಂದು ಕೇಳಿದ ಲಂಕೇಶಪ್ಪ


ನನ್ನ ಹೆಸರು ಇಂದಿರಾ.

ನನ್ನ ಅಪ್ಪಯ್ಯನಿಗೆ ಜವಾಹರಲಾಲ್ ನೆಹರೂ ಅವರ ಬಗ್ಗೆ ಅಪಾರ ಅಭಿಮಾನ. ಅದಕ್ಕೇ ನೆಹರೂ ಅವರ ಮಗಳ ಹೆಸರನ್ನೇ ನನಗೆ ಇಟ್ಟರು. ನಾನು ನನ್ನ ಅಪ್ಪಯ್ಯನ ನೆಚ್ಚಿನ ಮಗಳು. ನಮ್ಮ ಮನೆಯವರೆಲ್ಲ ನನ್ನನ್ನು ಪ್ರೀತಿಯಿಂದ ಇಂದೂ ಎಂದೇ ಕರೆಯುತ್ತಿದ್ದರು. ನಾನು ಬೆಳೆದದ್ದು ದಾವಣಗೆರೆಯಲ್ಲಿ, ಎಸ್‌ಎಸ್‌ಎಲ್‌ಸಿ ತನಕ ಓದಿದ್ದು ಅಲ್ಲಿನ ಸೇಂಟ್ ಪಾಲ್ ಶಾಲೆಯಲ್ಲಿ.

ನನ್ನ ಅಪ್ಪಯ್ಯನ ಹೆಸರು ಎಚ್.ಕೆ. ಸೋಮಸುಂದರ್. ಆಗ ಅಪ್ಪಯ್ಯ ಭಾರತ್ ಇನ್ಶೂರೆನ್ಸ್ ಕಂಪನಿ(ಇದು ಆನಂತರ ಎಲ್‌ಐಸಿಯೊಂದಿಗೆ ವಿಲೀನಗೊಂಡಿತು)ಯಲ್ಲಿ ಏಜೆಂಟ್ ಆಗಿದ್ದರು. ನಮ್ಮ ದಾವಣಗೆರೆ ಮನೆಯಲ್ಲಿ ಅಪ್ಪಯ್ಯ, ನಾನು, ನನ್ನ ತಮ್ಮ ಶಿವಕುಮಾರ್ ಮತ್ತು ದೊಡ್ಡಪ್ಪನ ಮಗ ಉಮಾಪತಿ ವಾಸಿಸುತ್ತಿದ್ದೆವು. ನನ್ನ ಅಕ್ಕ ಸುಶೀಲಾಗೆ ನಾನು ಚಿಕ್ಕವಳಾಗಿದ್ದಾಗಲೇ ಮದುವೆ ಮಾಡಿಕೊಡಲಾಗಿದ್ದು ಆಕೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಳು.

ನನ್ನ ತಮ್ಮ ಹುಟ್ಟಿದ ಹಲವು ತಿಂಗಳಲ್ಲೇ ನಮ್ಮ ತಾಯಿ ತೀರಿಕೊಂಡಿದ್ದರು. ನನಗಾಗ ಎರಡೂವರೆ ವರ್ಷ ವಯಸ್ಸಾಗಿದ್ದರಿಂದ ಅಮ್ಮನ ನೆನಪೂ ನನಗಿಲ್ಲ, ಕೆಲಸದ ಮೇಲೆ ಅಪ್ಪಯ್ಯ ಸದಾ ಊರೂರು ಸುತ್ತುತ್ತಿದ್ದರಿಂದ ಆಗಿನ್ನೂ ಚಿಕ್ಕವರಾಗಿದ್ದ ನನ್ನನ್ನು ಮತ್ತು ನನ್ನ ತಮ್ಮನನ್ನು ನಮ್ಮ ಅಜ್ಜಿ ಮನೆಯಲ್ಲಿ ಬಿಟ್ಟಿರಬಹುದಿತ್ತು, ಆದರೆ ನಮ್ಮ ಅಪ್ಪಯ್ಯನಿಗೆ ನಮಗೆಲ್ಲ ಚೆನ್ನಾಗಿ ಓದಿಸುವ ಆಸೆ. ಆದ್ದರಿಂದ ದಾವಣಗೆರೆಯಲ್ಲಿ ಮನೆ ಮಾಡಿದ್ದರು. ಮನೆಯನ್ನು ನೋಡಿಕೊಳ್ಳಲು ಕೆಲಸದವರನ್ನೂ ನೇಮಿಸಿದ್ದರು.

ನನ್ನ ಅಪ್ಪಯ್ಯನ ಊರು ಕುಸ್ನೂರು. ಶಿಕಾರಿಪುರ ತಾಲೂಕಿನಲ್ಲಿರುವ ಕುಸ್ನೂರು ಅಕ್ಕಮಹಾದೇವಿ ಹುಟ್ಟಿದ್ದ ಉಡತಡಿಯ ಹತ್ತಿರವಿದೆ. ಅದು ಅಪ್ಪಟ ಮಲೆನಾಡು. ಎಲ್ಲಿ ನೋಡಿದರೂ ಕಾಡು, ಗದ್ದೆ ಕೆರೆ, ಹೂವು. ನಮ್ಮ ಕುಸ್ನೂರು ಮನೆಯ ಹಿತ್ತಲಲ್ಲಿ ಒಂದು ದೊಡ್ಡ ಕೆರೆ ಇತ್ತು, ಅದರಾಚೆಗೆ ದಟ್ಟವಾದ ಕಾಡು. ಆ ಕಾಡಿನಲ್ಲಿದ್ದ ಹಾವುಗಳು ಹಲವೊಮ್ಮೆ ನಮ್ಮ ಮನೆಯನ್ನೇ ಹೊಕ್ಕು ಗಾಬರಿ ಮೂಡಿಸುತ್ತಿದ್ದವು. ಕೆಲವೊಮ್ಮೆ ಕಾಡಿನಿಂದ ಹಳ್ಳಿಯನ್ನು ಪ್ರವೇಶಿಸುತ್ತಿದ್ದ ಚಿರತೆಗಳು ನಮ್ಮ ದನದ ಕೊಟ್ಟಿಗೆಯಿಂದ ಕರುಗಳನ್ನೇ ಕದ್ದೊಯ್ಯುತ್ತಿದ್ದವು. ಊರಿನ ಸುತ್ತ ಕಬ್ಬಿನ ಗದ್ದೆ, ಆಲೆಮನೆ, ಬತ್ತದ ಗದ್ದೆಗಳಿದ್ದವು. ಈ ಊರಿಗೆ ಬಸ್ಸುಗಳು ಬರುತ್ತಿರಲಿಲ್ಲ, ನಾಲ್ಕು ಕಿಲೋಮೀಟರ್ ದೂರದಲ್ಲಿ ಇಳಿದು ನಡೆದುಕೊಂಡೇ ಬರಬೇಕಿತ್ತು,



ಇಂದಿರಾ ಮತ್ತು ಶಿವಕುಮಾರ

ಈ ಊರು ಹೀಗಾದರೆ ನನ್ನ ಅಮ್ಮನ ತವರೂರಾದ ಕೊಕ್ಕನೂರು ಇರುವುದು ಬಯಲುಸೀಮೆಯಲ್ಲಿ, ಹರಿಹರ ತಾಲೂಕಿನಲ್ಲಿರುವ ಕೊಕ್ಕನೂರು ಮಲೆಬೆನ್ನೂರಿನಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿದೆ. ಕೊಕ್ಕನೂರಿನಲ್ಲಿ ಎಲ್ಲಿ ನೋಡಿದರೂ ಒಂದು ದೊಡ್ಡ ಮರ ಕಣ್ಣಿಗೆ ಬೀಳುತ್ತಿರಲಿಲ್ಲ, ಇಲ್ಲಿನ ಮುಖ್ಯ ಬೆಳೆ ಹತ್ತಿ, ಜೋಳ, ಮೆಣಸಿನಕಾಯಿ ಮತ್ತು ಕಡಲೆಕಾಯಿ. ನನ್ನ ಅಮ್ಮನ ಅಪ್ಪ, ಅಂದರೆ ನನ್ನಜ್ಜ 500 ಎಕರೆ ಭೂಮಿ ಹೊಂದಿದ್ದ ದೊಡ್ಡ ಜಮೀನುದಾರರಾಗಿದ್ದರು. ನನ್ನ ತಾಯಿಯ ಕುಟುಂಬ ಕುರಿತು ಲಾವಣಿಗಳೂ ಇದ್ದವು. ಈ ಮನೆತನಕ್ಕೆ ಹೋಲಿಸಿದರೆ ನನ್ನ ಅಪ್ಪಯ್ಯನದ್ದು ಮಧ್ಯಮ ವರ್ಗದ ಸಂಸಾರ.



ಕೊಕ್ಕನೂರಿನ ಹಾಲಪ್ಪ ಗೌಡರ ಕುಟುಂಬ

ಅಮ್ಮ ತೀರಿಕೊಂಡಾಗ ನಾವು ಚಿಕ್ಕವರಾಗಿದ್ದರಿಂದ ನಮ್ಮ ಅಜ್ಜಿ ಚೆನ್ನಮ್ಮ ನನಗೆ ಐದು ವರ್ಷ ವಯಸ್ಸಾಗುವವರೆಗೆ ನನ್ನನ್ನು ಮತ್ತು ನನ್ನ ತಮ್ಮನನ್ನು ಕೊಕ್ಕನೂರಿನಲ್ಲೇ ಸಾಕಿದ್ದರು. ಆ ನಂತರ ಅಪ್ಪಯ್ಯ ನಮ್ಮನ್ನು ದಾವಣಗೆರೆಗೆ ಕರೆದುಕೊಂಡು ಬಂದು ಸ್ಕೂಲಿಗೆ ಸೇರಿಸಿ ಮನೆ, ಮಕ್ಕಳು ಮತ್ತು ಆಫೀಸಿನ ಜವಾಬ್ದಾರಿಗಳನ್ನೆಲ್ಲ ನಿಭಾಯಿಸುತ್ತಿದ್ದರು. ನನ್ನ ಅಪ್ಪಯ್ಯ ತುಂಬಾ ಶ್ರಮಜೀವಿ.


ನಾನು ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾಗ ಅಪ್ಪಯ್ಯನಿಗೆ ಶಿವಮೊಗ್ಗೆಗೆ ವರ್ಗವಾಯಿತು. ನನ್ನ ಪರೀಕ್ಷೆಗೆ ಇನ್ನೂ ಹತ್ತು ದಿನಗಳಿದ್ದುದರಿಂದ ನನ್ನನ್ನು ನನ್ನ ಟೀಚರ್ ಒಬ್ಬರ ಮನೆಯಲ್ಲಿ ಬಿಟ್ಟು ಶಿವಮೊಗ್ಗೆಯ ದುರ್ಗಿಗುಡಿ ಏರಿಯಾದಲ್ಲಿದ್ದ 'ನಂದೀಬಸವೇಶ್ವರ ನಿಲಯ' ಎಂಬ ಮನೆಯನ್ನು ಬಾಡಿಗೆಗೆ ಹಿಡಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿಸಿದ ನಂತರ ನಾನು ಬೇಸಿಗೆ ರಜೆಗೆಂದು ಅಪ್ಪಯ್ಯನ ಊರು ಕುಸ್ನೂರಿಗೆ ಹೋದೆ. ಅಲ್ಲಿ ನನ್ನ ದೊಡ್ಡಪ್ಪ, ದೊಡ್ಡಮ್ಮ ಮತ್ತು ಅವರ ಮಕ್ಕಳು ವಾಸಿಸುತ್ತಿದ್ದರು. ಆಗ 15 ತುಂಬಿ ಹದಿನಾರನೆ ವಯಸ್ಸಿಗೆ ಕಾಲಿಟ್ಟಿದ್ದ ನಾನು ಇನ್ನೂ ಲಂಗ ಜಾಕೀಟು ಧರಿಸುತ್ತಿದ್ದೆ.

ನಮ್ಮ ಮನೆಯಲ್ಲಿ ನಾನೇ ಸ್ವಲ್ಪ ಚೆನ್ನಾಗಿ ಓದುತ್ತಿದ್ದದ್ದು. ಆದ್ದರಿಂದ ಅಪ್ಪಯ್ಯನಿಗೆ ನನಗೆ ಹೆಚ್ಚು ಓದಿಸುವ ಆಸೆ. ಆದರೆ ನನ್ನ ಅಜ್ಜಿ ಚೆನ್ನವ್ವಜ್ಜಿಗೆ ಆದಷ್ಟು ಬೇಗ ಹೆಣ್ಣುಮಕ್ಕಳಿಗೆ ಮದುವೆ ಮಾಡಿಸುವ ಆಸೆ. "ಬೆಳೆದ ಹೆಣ್ಣುಮಕ್ಕಳನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು" ಎಂಬ ಅಂದಿನ ಸಾಂಪ್ರದಾಯಿಕ ಚಿಂತನೆ ನನ್ನ ಅಜ್ಜಿಯದ್ದು.

ಶಿವಮೊಗ್ಗೆಯಲ್ಲಿ ಅಪ್ಪಯ್ಯನಿಗೆ ಗಂಗಾಧರಪ್ಪ ಎಂಬ ಮೇಷ್ಟ್ರರ ಪರಿಚಯವಾಯಿತು. ಅವರು ಒಮ್ಮೆ "ನಿಮ್ಮ ಬಾಡಿಗೆಮನೆಯ ಓನರ್ ನಂದೀಬಸಪ್ಪ ಅವರ ಮಗ ಮೈಸೂರಿನಲ್ಲಿ ಓದುತ್ತಿದ್ದಾನೆ. ಅವನನ್ನು ನಿಮ್ಮ ಮಗಳಿಗೆ ನೋಡಬಾರದೇಕೆ?" ಎಂದು ಕೇಳಿದರಂತೆ.

ಕುಸ್ನೂರಿನಲ್ಲಿದ್ದ ನಾನು ಒಂದು ದಿನ ನನ್ನ ಅಕ್ಕ ಅನುಸೂಯ (ದೊಡ್ಡಪ್ಪನ ಮಗಳು) ಜೊತೆ ಹೊಂಡದಿಂದ ಮನೆಗೆ ನೀರು ತರಲು ಹೊರಟೆ. ಆಗ ಎದುರಿನಿಂದ ಅಪ್ಪಯ್ಯ, ಗಂಗಾಧರ ಮೇಷ್ಟ್ರು ಮತ್ತು ಒಬ್ಬ ಯುವಕ ಬಂದರು. ಖಾಲಿ ಕೊಡ ಹೊತ್ತು ಎದುರಿಗೆ ಹೋಗಬಾರದೆಂದು ನನ್ನ ಅಪ್ಪಯ್ಯ ನನ್ನನ್ನು ಮನೆ ಒಳಗೆ ತಳ್ಳಿಕೊಂಡು ಹೋದರು.

ಅವರೆಲ್ಲ ನನ್ನನ್ನು ನೋಡಲು ಬಂದಿದ್ದರು. ಆಗ ನನ್ನ ಹತ್ತಿರ ಒಂದು ಸೀರೆಯೂ ಇರಲಿಲ್ಲ, ಅದನ್ನು ಉಡಲೂ ಬರುತ್ತಿರಲಿಲ್ಲ, ಅವತ್ತು ಅನುಸೂಯಾಳ ಸೀರೆಯನ್ನೇ ನನಗೆ ಉಡಿಸಿದರು. ಅದೇ ಮೊದಲ ಬಾರಿ ನಾನು ಸೀರೆ ಉಟ್ಟಿದ್ದು. ಸೀರೆ ಜಾರದಂತೆ ನಾಲ್ಕೈದು ಪಿನ್ನುಗಳನ್ನು ಹಾಕಿದರು. ನನಗೆ ಅಡುಗೆ ಮಾಡುವುದಿರಲಿ, ಊಟ ಬಡಿಸಿಯೂ ಅಭ್ಯಾಸ ಇರಲಿಲ್ಲ, ಅದಕ್ಕೆ ಮನೆಗೆ ಬಂದಿರುವವರಿಗೆ ಬರೀ ಕೋಸಂಬರಿ ಬಡಿಸಲು ನನಗೆ ಹೇಳಿ, ಅನ್ನ ಇತ್ಯಾದಿಯನ್ನು ಅನುಸೂಯ ಬಡಿಸುತ್ತಾಳೆ ಎಂದರು.



ನಾನು ಒಮ್ಮೆ ಹುಡುಗನತ್ತ ನೋಡಿದೆ. ಕಪ್ಪಗಿದ್ದಾನೆ, ಚೆನ್ನಾಗಿಲ್ಲ ಎಂದುಕೊಂಡು ಸುಮ್ಮನಾದೆ.

ನಂತರ ತಿಳಿದು ಬಂದದ್ದು ಏನೆಂದರೆ ಅವತ್ತು ನಮ್ಮ ಮನೆಗೆ ಬಂದವರ ಹೆಸರು ಈಶ್ವರಪ್ಪ ಮತ್ತು ಅವರು ಮೈಸೂರಿನಲ್ಲಿ ಓದುತ್ತಿದ್ದ ಹುಡುಗನ ಚಿಕ್ಕಮ್ಮನ ಮಗನಾಗಿದ್ದರು ಎಂದು. ಮಾತ್ರವಲ್ಲ ಅವರಿಬ್ಬರು ಶಾಲೆಯಲ್ಲಿ ಕ್ಲಾಸ್‌ಮೇಟ್‌ಗಳಾಗಿದ್ದು ಅವರಿಬ್ಬರು ತುಂಬಾ ಕ್ಲೋಸ್ ಆಗಿದ್ದರು. ಆದ್ದರಿಂದ ಆ ಹುಡುಗ ಈಶ್ವರಪ್ಪನಿಗೆ "ಮೊದಲು ನೀನು ಆ ಹುಡುಗಿಯನ್ನು ನೋಡಿ ಹೇಗಿದ್ದಾಳೆ ಅಂತ ತಿಳಿಸು, ಆಮೇಲೆ ನೋಡೋಣ" ಎಂದಿದ್ದರಂತೆ.

ಆ ಹುಡುಗನ ಹೆಸರು ಲಂಕೇ[ಶ] ಈಶ್ವರಪ್ಪನ ಕಾಲೇಜಿನಲ್ಲಿ ಯಾರೋ ಹುಡುಗಿ ಇದ್ದಳಂತೆ. ಆಕೆಯಂತೆ ಹುಡುಗಿ ಇದ್ದಾಳೆ ಎಂ[ದು] ಲಂಕೇಶಪ್ಪನಿಗೆ ಈಶ್ವರಪ್ಪ ತಿಳಿಸಿದಾಗ ಅವರು "ಹುಡುಗಿಯನ್ನು ನೋಡಲ[ು] ಬೆಂಗಳೂರಿಗೆ ಬರುತ್ತೇನೆ. ನೀವೂ ಅಲ್ಲಿಗೆ ಬನ್ನಿ" ಎಂದು ಅಪ್ಪಯ್ಯನಿಗೆ ತಿಳಿಸಿದರು. ನಾನು, ಅಪ್ಪಯ್ಯ ಮತ್ತು ನನ್ನ ದೊಡ್ಡಮ್ಮ ಮೂವರು ಬೆಂಗಳೂರಿಗೆ ಹೊರಟೆವು.

ಬೆಂಗಳೂರಿನಲ್ಲಿದ್ದ ನನ್ನ ಅಕ್ಕ ಸುಶೀಲಾಳ ಮನೆ ತುಂಬ ದೊಡ್ಡದಾಗಿತ್ತು, ಆಗಿನ ಕಾಲದಲ್ಲಿ ಚಿಕ್ಕಪೇಟೆಯಲ್ಲಿ ಬಹಳ ದೊಡ್ಡ ನಶೆ ವ್ಯಾಪಾರಿಯಾ ಆದಿವಪ್ಪ ಎಂಬುವವರ ಮಗನಿಗೆ ನನ್ನ ಅಕ್ಕನನ್ನು ಕೊ ಲಾಗಿತ್ತು, ಅವರ ಮನೆ ಬೆಂಗಳೂರಿನ ಮಿನರ್ವ ಸರ್ಕ ಹತ್ತಿರ (ಈಗ ಕಾಮತ್ ಹೋಟೆಲ್ ಇರುವ ಜಾಗದ ಇತ್ತು, ಮನೆಯ ಹಿಂದೆ ಇದ್ದ ದೊಡ್ಡ ವಠಾರದಲ್ಲಿ ಮೂ ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಬಾಡಿಗೆದಾರ ನನ್ನನ್ನು ಕಂಡರೆ ತುಂಬಾ ಅಕ್ಕರೆ.

ಅಲ್ಲಿಗೆ ಒಂದು ದಿನ ಮಧ್ಯಾಹ್ನದ ಊಟಕ್ಕೆ ಹುಡ ಬರುತ್ತಾನೆ ಎಂದು ನಿಗದಿಯಾಯಿತು. ಅದನ್ನು ಕೇ ಬಾಡಿಗೆ ಮನೆಯಲ್ಲಿದ್ದವರಿಗೆಲ್ಲ ಸಂಭ್ರಮ. ಎಲ್ಲರೂ ಸೇ ನನಗೆ ಡ್ರೆಸ್ ಮಾಡಿದರು. ಆಗ 'ನವರಂಗ್' ಎ ಹಿಂದಿ ಸಿನಿಮಾ ಬಿಡುಗಡೆಯಾಗಿ ಅದರಲ್ಲಿ ನಟಿ ಜಸ್ ತೊಟ್ಟಿದ್ದ ಬಣ್ಣಬಣ್ಣದ ಸೀರೆ ತುಂಬಾ ಫ್ಯಾಶನ್ ಆಗಿ ಅಕ್ಕನ ಹತ್ತಿರ ಅಂತಹದ್ದೇ ಶಿಫಾನ್ ಸೀರೆ ಇತ್ತು, ಅದ ನನಗೆ ಉಡಿಸಿ, ಎರಡು ಜಡೆ ಹೆಣೆದು, ಅಲಂ ಮಾಡಿದರು.

ನನ್ನನ್ನು ನೋಡಲು ಲಂಕೇಶಪ್ಪನವರು ಬಂದ ಆಗ ನಾನು ಸಣಕಲು ಕಡ್ಡಿ, ಆದರೆ ಅವರು ಗಟ್ಟಿಮುಟ ಆಳು. ನನ್ನ ಮೂಗು ಮೊಂಡ. ಅವರದ್ದು ತುಂ ನೀಟಾಗಿದ್ದ ಮೂಗು. ನನಗಿಂತ ಬೆಳ್ಳಗಿದ್ದರು. ಅವ ಹೋಲಿಸಿದರೆ ನಾನು ಏನೇನೂ ಅಲ್ಲ, ನನ್ನ ಅಕ್ಕ "ಹುಡ ಎಷ್ಟು ಚೆನ್ನಾಗಿದ್ದಾನೆ. ಇದೇನು ಆಗುವ ಮ ಕಾಣುವುದಿಲ್ಲ" ಎಂದಳು. ಮಾರನೆ ದಿನ ಬೆಳಗ್ಗೆ ತಿಂ ಮತ್ತೆ ಬರುವುದಾಗಿ ಹೇಳಿ ಅವರೆಲ್ಲ ಹೊರಟರು.

ಮರುದಿನ ಬೆಳಗ್ಗೆ ವೈಎನ್ ಸುಮತೀಂದ್ರ ನಾಡಿಗ್ ಮತ್ತು ಈಶ್ವ ನವರ ಜೊತೆ ಮತ್ತೆ ಬಂದರು. ಅ ಯಾರದ್ದೋ ವಾಚ್‌ಅನ್ನು ನನ್ನ ಕಟ್ಟಿದ್ದರು.

ಅದನ್ನು ಗಮನಿಸಿದ ಲಂಕೇಶಪ್ಪನ "ಟೈಮ್ ಎಷ್ಟೀ?" ಎಂದು ಕೇಳಿದ ಆಗ ಅವರದ್ದು ಕೀರಲು ದನಿ.

ನಾನು ವಾಚ್ ನೋಡಿಕೊಂಡು "ಹತ್ತು ಗಂಟೆ ನಿಮಿಷ" ಅಂದೆ. ಇದೇ ನನ್ನ ಮತ್ತು ಅವರ ನಡು ಮೊದಲ ಸಂಭಾಷಣೆ.

ಎಲ್ಲರು ಹೊರಟುನಿಂತರು. ಬಾಡಿಗೆದಾರರಾ ಕೃಷ್ಣಮೂರ್ತಿ ಅವರಿಗೆ ಹುಡುಗ ಏನು ಹೇಳು ಅಂತ ಕಾತುರ. ಲಂಕೇಶಪ್ಪನವರ ಹತ್ತಿರ ಹೋಗಿ "ಹೇಗ ತ್ತಾಳೆ ನಮ್ಮ ಹುಡುಗಿ?" ಎಂದು ಕೇಳಿದರು. ಕೃಷ್ಣಮೂರ್ತಿಯವರ ಕೈಗೆ ಒಂದು ಚಾಕಲೇಟನ್ನು ಲಂಕೇಶಪ್ಪನವರು "ಇಷ್ಟ ಆಗಿದ್ದಾಳೆ" ಅಂದರು. ಚಾಕಲೇಟನ್ನು ತಂದು ನನಗೆ ಕೊಟ್ಟ ಕೃಷ್ಣಮೂರ್ತಿಅ "ಹುಡುಗ ಒಪ್ಪಿದ ಇಂದೂ" ಎಂದು ಖುಷಿಪಟ್ಟ

ಆಗ ಇವರು ಮೈಸೂರಿನಲ್ಲಿ ಎಂಎ ಓದುತ್ತಿ ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್ ಪಾಸಾಗಿದ್ದೆ. ಇದಾದ ಕೆಲದಿನಗಳ ನಂತರ ಶಿವಮೊ ಮನೆಯಲ್ಲೇ ನಿಶ್ಚಿತಾರ್ಥ ಕಾರ್ಯಕ್ರಮ ನಡೆಯಿತು. ಅಪ್ಪಯ್ಯ ಅದನ್ನು ಚೆನ್ನಾಗಿ ಮಾಡಿದರು.


(ಮುಂದುವರೆಯುತ್ತ

ನೋ ಕಾಮೆಂಟ್ಸ್

ಇವತ್ತು ಕರ್ನಾಟಕದ ಬಹಳಷ್ಟು ಶಾಸಕರು ರಾಜಕೀಯ ಉದ್ಯಮಿಗಳಾಗಿದ್ದಾರೆ. ಅವರಲ್ಲಿ ಕನಿಷ್ಠ 22 ಜನ ಗಣಿ ಸಂಬಂಧಿತ ವ್ಯವಹಾರದಲ್ಲಿ ತೊಡಗಿದ್ದರೆ 18 ಜನ ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿದ್ದಾರೆ. ಅಷ್ಟೇ ಅಲ್ಲದೆ ಇನ್ನೂ 40 ಶಾಸಕರು ಕಾಲೇಜ್, ಹೋಟೆಲ್, ಆಸ್ಪತ್ರೆ ತರಹದ ವಿವಿಧ ಲಾಭದಾಯಕ ಉದ್ಯಮಗಳಲ್ಲಿ ತೊಡಗಿದ್ದಾರೆ.

ಇವರೆಲ್ಲರಿಗೆ ರಾಜಕೀಯ ಎಂಬುದು ತಮ್ಮ ಉದ್ಯಮಗಳ ಉದ್ಧಾರಕ್ಕಾಗಿ ಅಷ್ಟೇ.

-ಪೃಥ್ವಿದತ್ತ ಶೋಭಿ



ನಾನು ರಜನಿಕಾಂತ್ ಆಗಲು ಇನ್ನೂ 20 ವರ್ಷ ಬೇಕು.

-ಸಲ್ಮಾನ್ ಖಾನ್

ಒಂದು ಹೊಸ ತರಹದ ರಾಜಕೀಯ ಉದ್ಯಮಿ ಹುಟ್ಟಿಕೊಂಡಿದ್ದಾನೆ. ಆತ ಚುನಾವಣೆಗಳಲ್ಲಿ ಬಂಡವಾಳ ಹೂಡಿ ಮತಗಳನ್ನು ಅಂಗಡಿಯಲ್ಲಿ ಖರೀದಿಸುವಂತೆ ಖರೀದಿಸುತ್ತಾನೆ. ಈ ಉದ್ಯಮದಲ್ಲಿ ಅಪಾರ ಲಾಭವಿದೆ. ಹಲವರಂತೂ ಒಂದು ದಶಕದಲ್ಲಿ ನಾಲ್ಕು ಪಟ್ಟು ಲಾಭ ಮಾಡಿಕೊಂಡಿದ್ದಾರೆ.

ಕರ್ನಾಟಕದ ರಾಜಕೀಯ ಇವತ್ತು ನೈತಿಕತೆಯನ್ನು ಕಳೆದುಕೊಂಡಿದೆ.

-ರಾಜೀವ್ ಚಂದ್ರಶೇಖರ್, ರಾಜ್ಯಸಭಾ ಸದಸ್ಯ




ರಾಜಕೀಯದ ಉದ್ದೇಶ ಅಧಿಕಾರಕ್ಕೆ ಬಂದ ನಂತರ ನಿಮ್ಮನ್ನು ಚುನಾಯಿಸಿದವರಿಗೆ ರಾಜ್ಯದ ಸಂಪನ್ಮೂಲಗಳನ್ನು ಹಂಚುವುದಾಗಿತ್ತು, ಆದರೆ ರಾಜ್ಯದಲ್ಲಿ ಬೆಳೆಯುತ್ತಿದ್ದಂತೆ ಅದ ಗುರಿ ರಾಜ್ಯದ ಸಂಪನ್ಮೂಲಗಳನ್ನು ತನ್ನವರಿಗೆ ಹಂಚುವುದೇ ಆಯಿತು.

-ನರೇಂದ್ರ ಪಾಣಿ

ನಂಬಿದರೆ ನಂಬಿ, ಬಿಟ್ಟರೆ ಬಿಡಿ

ಭಾರತದಲ್ಲಿ ಹಲವಾರು ದೇವರುಗಳಿದ್ದಾರೆ. ಅವರಲ್ಲಿ ಸಚಿನ್ ತೆಂಡೂಲ್ಕರ್ ಕೂಡ ಒಬ್ಬ

-ರಾಹುಲ್ ದ್ರಾವಿಡ್




ಮಣಿಶಂಕರ್ ಅಯ್ಯರ್ ಹೇಳಿರುವಂತೆ ಕಾಂಗ್ರೆಸ್ ಪಕ್ಷ ಒಂದು ಸರ್ಕಸ್ ಆಗಿದ್ದರೆ ಅದರಲ್ಲಿ ಅಯ್ಯರ್ ಅವರು ದೊಂಬರಾಟಗಾರನೋ ಅಥವಾ ಕೋಡಂಗಿಯೋ ಎಂಬುದ ಸ್ಪಷ್ಟಪಡಿಸಬೇಕು.

-ಸತ್ಯವ್ರತ್ ಚತುರ್ವೇ

ಸದಾನಂದ ಸಿಡುಕ ಯಡ್ಡಿಯ ಹಸನ್ಮುಖ ನೆರಳು!

ಕಳೆದವಾರ ಬಿಜೆಪಿ ಹೈಕಮಾಂಡ್ ಮೊದಲು ಯಡಿಯೂರಪ್ಪನಿಗೆ 'ರಾಜೀನಾಮೆ ಕೊಡು' ಎಂದಿತು. ಆತ ಕೇಳಲಿಲ್ಲ. ಆಗ ಹೈಕಮಾಂಡ್ ಯಡ್ಡಿಗೆ 'ದಯವಿಟ್ಟು ಹೊರಟುಹೋಗು' ಎಂದಿತು. ಆತ ಒಪ್ಪಲಿಲ್ಲ. ಕೊನೆಗೆ ಮಾರಾಯ, ಮುಖ್ಯಮಂತ್ರಿ ಹುದ್ದೆಯಿಂದ ತೊಲಗು. ಇಲ್ಲಾ ಅಂದ್ರೆ ನೋಡು' ಎಂದು ಬೆದರಿಸಿತು. ಆಗಲಿ ಎಂದು ಒಪ್ಪಿದ ಯಡಿಯೂರಪ್ಪ ಒಂದು ಚಮತ್ಕಾರ ಮಾಡಿದರು. 'ಹೈಕಮಾಂಡಿನ ಆದೇಶವನ್ನು ಪಾಲಿಸಲು ನಾನು ರಾಜೀನಾಮೆ ನೀಡುತ್ತಿದ್ದೇನೆ' ಎಂದ ಯಡಿಯೂರಪ್ಪ ತನ್ನ ಜಾಗದಲ್ಲಿ ತನ್ನ 'ಕ್ಲೋನ್' ಒಬ್ಬನನ್ನು ಕೂರಿಸಿದ. ಒಂದೇ ವ್ಯತ್ಯಾಸ ಏನೆಂದರೆ ಇಲ್ಲಿಯತನಕ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಸಿಡುಕು ಮೋರೆಯವನಾಗಿದ್ದರೆ ಆ ಸ್ಥಾನದಲ್ಲಿರುವ ಯಡ್ಡಿಯ 'ಕ್ಲೋನ್' ಸದಾ ಹಸನ್ಮುಖಿ, ಅಷ್ಟೇ.



ಸದಾನಂದ 'ಗೋಡಾ'!

ಅದೊಂದನ್ನು ಬಿಟ್ಟರೆ ಇವರಿಬ್ಬರ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಇವರೂ ಅದೇ ಹಿಂದೂತ್ವವಾದಿ ಆರೆಸ್ಸೆಸ್ ರೂಪಿಸಿರುವ ಅನಾಹುತಕಾರಿಗಳು, ಬಿಜೆಪಿ ಬೆಳೆಸಿರುವ ಅವಕಾಶವಾದಿ ರಾಜಕಾರಣಿಗಳು, ಹಣಬಲ ಉಪಯೋಗಿಸಿಕೊಂಡು ಮುಖ್ಯಮಂತ್ರಿ ಹುದ್ದೆಯನ್ನು ತಮ್ಮದಾಗಿಸಿಕೊಂಡಿರುವವರು. ಇದೆಲ್ಲಕ್ಕಿಂತ ಆಘಾತಕಾರಿಯಾದ ಸಂಗತಿ ಯಾವುದೆಂದರೆ ಸದಾನಂದ ಗೌಡ ಎಂಬ ತುಂಡುನಾಯಕ ಯಡ್ಡಿ ಎಂಬ ದಂಡನಾಯಕನ ಆಜ್ಞಾಪಾಲಕನಾಗಿರುವುದು.

ಈಗಾಗಲೇ ಯಡಿಯೂರಪ್ಪನಿಂದಾಗಿ ನಮ್ಮ ರಾಜ್ಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸ್ಥಿತಿ ಎಕ್ಕುಟ್ಟಿಹೋಗಿದೆ. ಇನ್ನು ಆತ ಸೂಪರ್ ಸಿಎಮ್ ಆಗುವ ಮೂಲಕ ತನ್ನೆಲ್ಲ ಅವ್ಯವಹಾರಗಳನ್ನು ಮುಂದುವರೆಸುತ್ತಾನೆಂದರೆ, ಅದಕ್ಕೆ ಈ ಡಮ್ಮಿ ಮುಖ್ಯಮಂತ್ರಿ ಸದಾನಂದ ಗೌಡ ನೆರವು ನೀಡುತ್ತಾನೆಂದರೆ ಇನ್ನು ಬರುವ ದಿನಗಳಲ್ಲಿ ಕರ್ನಾಟಕ ದಿವಾಳಿ ಆದರೆ ಅಚ್ಚರಿ ಇಲ್ಲ.

ಸ್ವಂತ ವ್ಯಕ್ತಿತ್ವ ಇರದ, ಜನಬೆಂಬಲ ಹೊಂದಿರದ, ಇಲ್ಲಿಯತನಕ ಗಮನ ಸೆಳೆಯುವಂತಹ ಯಾವುದನ್ನೂ ಮಾಡಿರದ ಸದಾನಂದ ಗೌಡ ಇವತ್ತು ಮುಖ್ಯಮಂತ್ರಿ ಹುದ್ದೆಗೆ ಏರಿರುವುದಕ್ಕೆ ಕಾರಣ ಆತನ ಗುಲಾಮಿ ಮನೋಭಾವ. ಸದಾ ಯಡ್ಡಿಯ ದುರಾಡಳಿತವನ್ನು ಸಮರ್ಥಿಸಿಕೊಂಡು ಬಂದಿದ್ದಕ್ಕೆ, ಯಡ್ಡಿ ತನ್ನನ್ನು ಕಡೆಗಣಿಸಿದರೂ ಪ್ರತಿಭಟಿಸದೆ ಸುಮ್ಮನಿದ್ದಿದ್ದಕ್ಕೆ, ಯಡ್ಡಿ ಕೊಟ್ಟ ಚೂರುಪಾರನ್ನೇ ತನಗೆ ಸಿಕ್ಕ ಭಾಗ್ಯ ಎಂದು ಸ್ವೀಕರಿಸಿದ್ದಕ್ಕೆ ಇವತ್ತು ಸದಾನಂದ ಗೌಡರಿಗೆ ಯಡ್ಡಿಯ ಡಮ್ಮಿ ಮುಖ್ಯಮಂತ್ರಿ ಆಗುವ 'ಅದೃಷ್ಟ' ಲಭಿಸಿದೆ.

ಹಲವರು ಈಗ ಗೌಡರನ್ನು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಓ.ಪನ್ನೀರುಸೆಲ್ವಂ ಅವರೊಂದಿಗೆ ಹೋಲಿಸುತ್ತಿದ್ದಾರೆ. 2001ರಲ್ಲಿ ಕುಖ್ಯಾತವಾಗಿದ್ದ 'ತನ್ಸಿ' ಹಗರಣದಲ್ಲಿ ಆಗಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾಗೆ ಐದು ವರ್ಷಗಳ ಜೈಲು ಶಿಕ್ಷೆ ಆಗಬೇಕೆಂದು ವಿಶೇಷ ನ್ಯಾಯಾಲಯ ತೀರ್ಪು ನೀಡಿತ್ತು. ಆಗ ಕಾನೂನಿನ ಪ್ರಕಾರ ಆಕೆ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದು ಪನ್ನೀರುಸೆಲ್ವಂ ಎಂಬಾತನನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಿದ್ದರು. ಆತ ಜಯಲಲಿತಾಗೆ ಎಷ್ಟು ನಿಷ್ಠನಾಗಿದ್ದನೆಂದರೆ ಆತ ಮುಖ್ಯಮಂತ್ರಿ ಆಗಿದ್ದ ಆರು ತಿಂಗಳ ಕಾಲ ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕೂರಲೇ ಇಲ್ಲ. ಬದಲಾಗಿ ಆತನನ್ನು ಜಯಲಲಿತಾ ರಿಮೋಟ್ ಕಂಟ್ರೋಲ್ ತರಹ ಉಪಯೋಗಿಸಿಕೊಂಡು 'ಡಿಫಾಕ್ಟೋ ಸಿಎಂ'ನಂತೆ ರಾಜ್ಯಭಾರವನ್ನು ನಡೆಸಿದ್ದರು.

ತನ್ನ ವಿರುದ್ಧ ವಿಶೇಷ ನ್ಯಾಯಾಲಯ ನೀಡಿದ್ದ ತೀರ್ಪನ್ನು ಜಯಲಲಿತಾ ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಿದರು. ಸುಪ್ರೀಂ ಕೋರ್ಟ್ ಆಕೆಯ ವಿರುದ್ಧ ಸಾಕ್ಷ್ಯಾಧಾರಗಳಿಲ್ಲ ಎಂದು ಆಕೆಯನ್ನು ಆ ಪ್ರಕರಣದಿಂದ ಖುಲಾಸೆಗೊಳಿಸಿತು. ಆಗ ಪನ್ನೀರುಸೆಲ್ವಂ ತನ್ನ ಸ್ಥಾನವನ್ನು ಜಯಲಲಿತಾ ಅವರಿಗೆ ಬಿಟ್ಟುಕೊಟ್ಟು ಆಕೆಯ ಸಂಪುಟದಲ್ಲಿ ಮಂತ್ರಿಯಾಗಿ ಮುಂದುವರಿದರು.

ಈಗ ಯಡಿಯೂರಪ್ಪ ಕೂಡ ಅಂತಹದ್ದನ್ನೇ ಮಾಡಲು ಸಜ್ಜಾಗಿದ್ದಾರೆ. ಸದ್ಯ ಯಡ್ಡಿ ವಿರುದ್ಧ ಲೋಕಾಯುಕ್ತರ ವರದಿ ಅಲ್ಲದೆ, ಸುಪ್ರೀಂಕೋರ್ಟ್ ಮುಂದೆಯೂ ಕೆಲ ಪ್ರಕರಣಗಳಿವೆ. ಸದಾನಂದ ಗೌಡರ ನೆರವಿನೊಂದಿಗೆ ಅವುಗಳನ್ನೆಲ್ಲ ಇತ್ಯರ್ಥ ಮಾಡಿಕೊಂಡ ನಂತರ ಮತ್ತೆ ಮುಖ್ಯಮಂತ್ರಿ ಹುದ್ದೆಯನ್ನು ತನ್ನದಾಗಿಸಿಕೊಳ್ಳುವ ಸಂಚು ಯಡ್ಡಿಯದ್ದು. ಮೊನ್ನೆ ಯಡಿಯೂರಪ್ಪ "ಇನ್ನು ಆರು ತಿಂಗಳಲ್ಲಿ ನಾನೇ ಮತ್ತೆ ಮುಖ್ಯಮಂತ್ರಿ ಆಗುತ್ತೇನೆ" ಎಂದದ್ದು ಸುಖಾಸುಮ್ಮನೆ ಅಲ್ಲ.

ಅದೆಲ್ಲ ಏನೇ ಇರಲಿ, ಇವತ್ತು ಯಡ್ಡಿಯ ಕುತಂತ್ರ ರಾಜಕಾರಣದಿಂದ ಒಂದೆಡೆ ರಾಜ್ಯದ ಮರ್ಯಾದೆ ದೇಶದ ಮುಂದೆ ಹರಾಜಾಗಿದ್ದರೆ, ಇನ್ನೊಂದೆಡೆ ಬಿಜೆಪಿಯ ಹೈಕಮಾಂಡ್ ಇಂಗು ತಿಂದ ಮಂಗನಂತಾಗಿದೆ...

****

ಲೋಕಾಯುಕ್ತರೆ ಯಡಿಯೂರಪ್ಪ ಭ್ರಷ್ಟಾಚಾರದಲ್ಲಿ ಭಾಗಿ ಆಗಿದ್ದಾರೆ ಎಂದ ಮೇಲೆ, ಇದರಿಂದಾಗಿ ತಮ್ಮ ಪಕ್ಷದ ಮಾನ ಹೋಗುತ್ತದೆ ಎಂದು ಬಿಜೆಪಿಯ ಕೇಂದ್ರ ನಾಯಕರು ನಿರ್ಧರಿಸಿದ ಮೇಲೆ ಯಡಿಯೂರಪ್ಪ ಮತ್ತು ಆತನ ಬೆನ್ನಿಗಿರುವ ಶಾಸಕರು ಕಿಂಚಿತ್ತೂ ನಾಚಿಕೆ, ಮಾನ, ಮರ್ಯಾದೆ ಇಲ್ಲದೆ ಆತನೊಂದಿಗೆ ರಾಜಭವನಕ್ಕೆ ಮೆರವಣಿಗೆಯಲ್ಲಿ ಹೋದ ದೃಶ್ಯ ಕರ್ನಾಟಕದ ರಾಜಕಾರಣ ತಲುಪಿರುವ ಅಧೋಗತಿಗೆ ಸಾಕ್ಷಿಯಂತಿತ್ತು.

ಅಷ್ಟೇ ಅಲ್ಲ, ಸಂಕಷ್ಟದಲ್ಲಿ ಕಳ್ಳರೆಲ್ಲ ಒಂದಾಗುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿತು. ಅವತ್ತಿನ ಮೆರವಣಿಗೆ ದೃಶ್ಯದ ಒಂದು ಅಂಶವನ್ನು ನೆನಪಿಸಿಕೊಳ್ಳಿ: ಯಾವ ರೆಡ್ಡಿಗಳು ರಾಜ್ಯದ ಗಣಿ ಸಂಪತ್ತನ್ನು ಅಕ್ರಮವಾಗಿ ಲೂಟಿ ಮಾಡಿದ್ದಾರೆಂದೂ, ಆ ಕಾರಣಕ್ಕೇ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟು ಕಾನೂನಿನ ಕ್ರಮ ತೆಗೆದುಕೊಳ್ಳಬೇಕೆಂದೂ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರು ತಮ್ಮ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರೋ ಅದೇ ರೆಡ್ಡಿ ಗ್ಯಾಂಗಿನ ಲೀಡರ್ ಜನಾರ್ದನ ರೆಡ್ಡಿ ಮೆರವಣಿಗೆಯಲ್ಲಿ 'ಧೀರ ಯೋಧ'ನಂತೆ ಯಡ್ಡಿ ಪಕ್ಕ ಹೆಜ್ಜೆ ಹಾಕುತ್ತಿದ್ದ!

ಇನ್ನು ಯಡ್ಡಿಯ ಪರ ಮಾಧ್ಯಮಗಳ ಮುಂದೆ ವೀರಾವೇಶದಿಂದ ಬೊಗಳಿದವರು ಯಾರ್‍ಯಾರು ಎಂದು ನೋಡಿದರೆ ಯಡ್ಡಿಯ ಹೊಲಸು ರಾಜಕಾರಣ ಅರ್ಥವಾಗುತ್ತದೆ. ಒಂದೆಡೆ, ನರ್ಸ್ ರೇಣುಕಾಚಾರ್ಯ ತಾನು ತನ್ನ ಇತರೆ ಅಂಗಾಂಗಗಳ ಮೇಲೆ ಮಾತ್ರ ಹಿಡಿತವನ್ನು ಕಳೆದುಕೊಂಡಿಲ್ಲ, ಅದರ ಜೊತೆಗೆ ತನ್ನ ನಾಲಿಗೆ ಮೇಲಿನ ಹಿಡಿತವನ್ನೂ ಕಳೆದುಕೊಂಡಿರುವವನಂತೆ ಮಾಧ್ಯಮಗಳ ಮುಂದೆ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರ ವಿರುದ್ಧ ಬಾಯಿಗೆ ಬಂದದ್ದನ್ನು ಅರಚುತ್ತಿದ್ದ. ಇನ್ನೊಂದೆಡೆ ತಲೆ ಮಾಸಿರುವ ಡಿ.ಬಿ.ಚಂದ್ರೇಗೌಡ ಎಂಬಾತ ಯಡ್ಡಿಯ ಎಂಜಲು ಕಾಸಿನ ಆಸೆಗೆ ಬಿದ್ದು ಅರ್ಥವಿಲ್ಲದ ತರ್ಕಗಳನ್ನು ಯಡ್ಡಿ ಪರ ಮಂಡಿಸುತ್ತಿದ್ದ. ಮತ್ತೊಂದೆಡೆ, ಬೇಳೂರು ಗೋಪಾಲಕೃಷ್ಣ ಎಂಬ ವರ್ಣರಂಜಿತ ಎಡಬಿಡಂಗಿ ತನ್ನ ತೋಳನ್ನು ತಟ್ಟುತ್ತಾ ಯಡ್ಡಿಯ ವಿರೋಧಿಗಳೊಂದಿಗೆ ಕುಸ್ತಿ ಮಾಡುವವನಂತೆ ಟಿವಿ ಕ್ಯಾಮೆರಾಗಳ ಮುಂದೆ ಪೋಸು ಕೊಡುತ್ತಿದ್ದ.

ಅಂದಹಾಗೆ ಕಳೆದ ಚುನಾವಣೆಗಳು ನಡೆದ ನಂತರ ಈ ಬೇಳೂರು ತರಹದ ಅವಕಾಶವಾದಿ ಶಾಸಕರಿಗೆ ಸುಗ್ಗಿಯ ಯುಗ ಪ್ರಾರಂಭವಾಗಿದೆ. ಮೊದಲು ಯಡ್ಡಿಗೆ ತಮ್ಮ ಬೆಂಬಲ ಸೂಚಿಸಲು ಕೋಟ್ಯಂತರ ರೂಪಾಯಿಯ ಭಕ್ಷೀಸು, ಆಮೇಲೆ ಸಂಪುಟ-ನಿಗಮಗಳಲ್ಲಿ ತಮಗೆ ಸ್ಥಾನಮಾನಗಳು ಸಿಗಲಿಲ್ಲ ಎಂಬ ಅಸಮಾಧಾನದಿಂದ ಪ್ರತಿಭಟಿಸದಿರಲೂ ದುಡ್ಡು, ಯಡ್ಡಿ ವಿರುದ್ಧ ರೆಡ್ಡಿ ಗ್ಯಾಂಗ್ ಬಂಡಾಯವೆದ್ದಾಗ ಅವರ ಬೆನ್ನಹಿಂದೆ ನಿಲ್ಲಲೂ ದುಡ್ಡು, ರೇಣುಕಾಚಾರಿಯ ಕುತಂತ್ರದಲ್ಲಿ ಭಾಗಿಯಾಗಿದ್ದಕ್ಕೂ ದುಡ್ಡು, ಅನರ್ಹಗೊಂಡಾಗಲೂ ದುಡ್ಡು, ಅರ್ಹಗೊಂಡ ನಂತರ ಯಾವ ಯಡ್ಡಿಯ ವಿರುದ್ಧ ಬಂಡಾಯವೆದ್ದಿದ್ದರೋ ಅದೇ ಯಡ್ಡಿಯ ಪರ ನಿಲ್ಲಲೂ ದುಡ್ಡು, ಹೈಕಮಾಂಡ್ ವಿರುದ್ಧ ಯಡ್ಡಿ ಬಂಡಾಯವೆದ್ದಾಗಲೂ ದುಡ್ಡು, ಕೊನೆಗೆ ಯಡ್ಡಿ ಸೂಚಿಸಿದ ಅಭ್ಯರ್ಥಿ ಸದಾನಂದ ಗೌಡನ ಪರ ಮತ ಚಲಾಯಿಸಲೂ ದುಡ್ಡು.... ಅಂದಹಾಗೆ, ಪ್ರತಿಹಂತದಲ್ಲೂ ಹಣವನ್ನು ಚೆಲ್ಲಿಯೇ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಂಡಿರುವ ಯಡ್ಡಿ ಇದಕ್ಕೆಲ್ಲ ಬೇಕಾದ ಹಣವನ್ನು ಗಳಿಸಲು ನಮ್ಮ ರಾಜ್ಯವನ್ನು ಇನ್ನೆಷ್ಟರಮಟ್ಟಿಗೆ ದೋಚಿರಬಹುದು ಎಂದು ಲೆಕ್ಕ ಹಾಕಿನೋಡಿ...

ಇಂಥ ಕಳ್ಳರು, ಸುಳ್ಳುಬುರುಕರು ಮತ್ತು ಹಣಕ್ಕಾಗಿ ತಮ್ಮನ್ನೇ ಮಾರಾಟ ಮಾಡಿಕೊಳ್ಳುವವರನ್ನೇ ಯಡ್ಡಿ ತನ್ನ ಬೆಂಬಲಕ್ಕೆ ಇಟ್ಟುಕೊಂಡಿದ್ದಾನೆಂದರೆ ಆತನ ರಾಜಕೀಯ ಜನರಲ್ಲಿ ಅಸಹ್ಯ ಹುಟ್ಟಿಸದೇ ಇರುತ್ತದೆಯೇ?


ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

• ಸಂತೋಷ್ ಬಾಗಿಲಗದ್ದೆ

ಕಲೈಜ್ಞರ್ ಕರುಣಾ ಕುಟುಂಬಕ್ಕೆ ಜೈಲೇ ಗತಿ





ಕರುಣಾ ಕುಟುಂಬದಲ್ಲೇ ಕಿತ್ತಾಟ

ಅಧಿಕಾರಾವಧಿಯನ್ನು ಸ್ವಾರ್ಥಸಾಧನೆಗಾಗಿಯೇ ಸವೆಸಿದ ಕರುಣಾನಿಧಿಗೀಗ ವಯಸ್ಸು ಸಹಕರಿಸುವ ಸ್ಥಿತಿ ಯಲ್ಲಿಲ್ಲ, ತೀರಾ ಆತನ ಇಡೀ ಕುಟುಂಬವೂ ಒಂದಾಗಿ ಉಳಿದಿಲ್ಲ, ಇತ್ತೀಚೆಗೆ ನಡೆದೊಂದು ಘಟನೆ ಈ ಮಾತಿಗೆ ತಾಜಾ ಉದಾಹರಣೆಯಂತಿದೆ.

ಎ. ರಾಜಾ ಹೆಸರು 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಕೇಳಿಬಂದಾಗಿನಿಂದ ಕರುಣಾ ಶತಾಯಗತಾಯ ಆತನ ಪರ ನಿಂತಿದ್ದರು. ಇದರ ಹಿಂದೆ ಕನಿ ಕೊರಳಿಗೆ ಬೀಳಲಿದ್ದ ಉರುಳು ತಪ್ಪಿಸುವ ಉದ್ದೇಶವಿದ್ದರೂ ಸಹ ರಾಜಾ ಕರುಣಾನ ನೆಚ್ಚಿನ ಭಂಟ. ಏನೇ ಪ್ರಯತ್ನ ನಡೆಸಿದರೂ ರಾಜಾ ತಿಹಾರ್ ಜೈಲು ಸೇರುವುದನ್ನು ತಪ್ಪಿಸಲಾಗದ್ದೀಗ ಇತಿಹಾಸ.

ಮೊದಲು ರಾಜಾಗೆ ಕೇಂದ್ರ ಸಂಪುಟದಿಂದ ಗೇಟ್ ಪಾಸ್ ನೀಡಲಾಯಿತಲ್ಲಾ? ಅಂದೇ ಮಾರನ್ ಸಹೋದರರು ಹಾಗೂ ಅವರ ಚಿಕ್ಕಪ್ಪಂದಿರಾದ (ಕರುಣಾ ಕುಡಿಗಳು) ಎಂ.ಕೆ. ಸ್ಟಾಲಿನ್, ಎಂ.ಕೆ. ಅಳಗಿರಿ ಮೊದಲಾದವರು ಚೆನ್ನೈನ ಪಂಚತಾರಾ ಹೋಟೆಲೊಂದರಲ್ಲಿ ಭರ್ಜರಿ ಔತಣಕೂಟ ಹಮ್ಮಿಕೊಂಡಿದ್ದರು. ಇದಕ್ಕೂ ರಾಜಾ ನಿರ್ಗಮನಕ್ಕೂ ಹತ್ತಿರದ ನಂಟಿದೆ ಎಂಬ ಅಂಶ ಯಾರಿಗಾದರೂ ಗೊತ್ತಾಗುವಂತಿದೆ. ಅಷ್ಟಕ್ಕೂ ರಾಜಾ ಕುರಿತಾದ ಡಿಎಂಕೆ ಸಭೆಗಳಿಂದ ದೂರವಿದ್ದ ಕರುಣಾ ಪುತ್ರ ಅಳಗಿರಿ ಕೂಡಾ ಈ ಔತಣಕೂಟ ಸವಿದದ್ದು ಗುಮಾನಿಗಳಿಗೆ ಮತ್ತಷ್ಟು ಪುಷ್ಟಿ ನೀಡಿದೆ.


ರಾಜಾ-ಹೇಳಿಕೇಳಿ ಕನಿಮೋಳಿಯ ಆಪ್ತ ಸ್ನೇಹಿತ. ಔತಣಕೂಟ ನಡೆಸಿದವರಿಗೆಲ್ಲಾ ಕನಿಮೋಳಿತಂಗಿ ಆಗಬೇಕು. ಕನಿಮೋಳಿ ಕರುಣಾನಿಧಿಯ ಮೂರನೇ ಹೆಂಡತಿ ರಜತಿ ಅಮ್ಮಾಳ್‌ರ ಮಗಳು. ಇವರಿಗೆಲ್ಲಾ ರಾಜಾ ತಿಹಾರ್ ಜೈಲು ಸೇರುವ ಹಾಗೂ ಕನಿಮೋಳಿಯೂ ಸೇರಬೇಕಾಗುವ ವಿಚಾರ ಗೊತ್ತಿಲ್ಲದಿರಲು ಸಾಧ್ಯವಿಲ್ಲ.

ತಮ್ಮ ಪಕ್ಷ, ತಂದೆಯ ವರ್ಚಸ್ಸು ಹಾಗೂ ತಂಗಿಯ ಭವಿಷ್ಯವೇ ಡೋಲಾಯಮಾನವಾಗಿದ್ದರೂ ಸ್ಟಾಲಿನ್ ಹಾಗೂ ಅಳಗಿರಿ ಔತಣಕೂಟ ನಡೆಸಿದ್ದು ಕರುಣಾ ಕುಟುಂಬ ಒಡೆದ ಮನೆಯಾಗಿರುವುದಕ್ಕೆ ಸ್ಪಷ್ಟ ಸಾಕ್ಷಿ.

❖

ತಮಿಳುನಾಡಿನ ರಾಜಕೀಯ ಸ್ಥಿತಿಗತಿ ನಿರ್ಣಾಯಕ ಸಮರವೊಂದರತ್ತ ಮುಖ ಮಾಡಿದೆ. ಸದ್ಯ ಆ ರಾಜ್ಯದಲ್ಲಿ ದ್ವೇಷ ಮತ್ತು ರಾಜಕಾರಣವನ್ನು ಬೇರ್ಪಡಿಸಿ ನೋಡಬಹುದಾದ ಅವಕಾಶಗಳಿಲ್ಲ, ಮುಖ್ಯಮಂತ್ರಿ ಜಯಲಲಿತಾ ಹಾಗೂ ಮಾಜಿ ಮುಖ್ಯಮಂತ್ರಿ ಕರುಣಾನಿಧಿ ನಡುವೆ ಹಬೆಯಾಡುತ್ತಿರುವ ದ್ವೇಷವಂತೂ ಹಲವಾರು ರಾಜಕೀಯ ಪಲ್ಲಟಗಳ ಮುನ್ಸೂಚನೆಯಂತೆ ಕಾಣತೊಡಗಿದೆ. ಇದೀಗಲೇ 2ಜಿ ತರಂಗಾಂತರ ಹಗರಣದಿಂದ ತತ್ತರಿಸಿರುವ ಕರುಣಾನಿಧಿ ಸಕುಟುಂಬ ಸಮೇತರಾಗಿ ಜೈಲು ಸೇರುವ ಸಕಲ ಲಕ್ಷಣಗಳೂ ಸ್ಪಷ್ಟವಾಗಿ ಗೋಚರಿಸುತ್ತಿದೆ.


ರಾಜಕೀಯದ ನಾನಾ ತೆವಲು, ವಿಪರೀತ ಕುಟುಂಬ ಪ್ರೀತಿ, ಅದಕ್ಕಾಗಿ ಆಡಳಿತ ಯಂತ್ರವನ್ನೇ ಪಳಗಿಸಿಕೊಳ್ಳಬಲ್ಲ ಛಾತಿಗಳಿಗೆಲ್ಲ ಎಂಬತ್ತೇಳು ವರ್ಷದ ವೃದ್ಧ ಜೀವ ಕರುಣಾನಿಧಿಗಿಂತ ಉದಾಹರಣೆ ಬೇರೊಂದಿಲ್ಲ, ಮೂವರು ಹೆಂಡಿರು ಹಾಗೂ ಆರು ಮಕ್ಕಳ ಪರಿವಾರ ಹೊಂದಿರುವ ಕರುಣಾ ಕೌಟುಂಬಿಕವಾಗಿ ಅಪ್ಪಟ 'ಶ್ರಮ'ಜೀವಿ. ಮೂವರು ಹೆಂಡಿರ ಮಕ್ಕಳ ನಡುವೆ ಭೇದವೆಣಿಸದೆ ಎಲ್ಲರಿಗೂ ಬಲವಾಗಿ ನೆಲೆ ಕಲ್ಪಿಸಿದ, ಅದಕ್ಕಾಗಿಯೇ ಒಟ್ಟಾರೆ ರಾಜಕೀಯ ಬದುಕಿನ ಬಹಳಷ್ಟು ಎನರ್ಜಿ ವ್ಯಯಿಸಿದ ನಿಷ್ಠಾವಂತ ಅಪ್ಪ! ಮಕ್ಕಳು ಮೊಮ್ಮಕ್ಕಳಾದಿಯಾಗಿ ಇಡೀ ಪರಿವಾರವೇ ಅಧಿಕಾರದ ಚುಕ್ಕಾಣಿ ಹಿಡಿಯುವುದನ್ನು ಅಹೋಕಾಲ ಕನಸುವ ಕನಸುಗಾರ. ಇದೆಲ್ಲದರ ನಡುವೆಯೇ ಸಿಕ್ಕ ಒಂದಷ್ಟು ಒಳ್ಳೆಯ ಆಡಳಿತ-ಯೋಜನೆಗಳಷ್ಟೇ ಬಡಪಾಯಿ ತಮಿಳಿಗರ ಪಾಲಿನ ಪಂಚಾಮೃತ.





ಆದರೀಗ..... ಆರಂಭದಿಂದಲೂ ಮಾಡಿಕೊಂಡು ಬಂದ ಅಂದಾದುಂದಿಗಳೆಲ್ಲ ಕರುಣಾನಿಧಿ ಕುಟುಂಬಕ್ಕೆ ಒಟ್ಟಾಗಿ ಅಟ ಕಾಯಿಸಿಕೊಂಡಿವೆ. 2ಜಿ ತರಂಗಾಂತರ ಹಗರಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ಕರುಣಾನಿಧಿಯನ್ನು ಹೈರಾಣುಗೊಳಿಸಿತ್ತು, ಕೇಂದ್ರದಲ್ಲಿ ಏನೇ ಪ್ರಭಾವಗಳಿದ್ದರೂ ಎ. ರಾಜಾ ಹಾಗೂ ಮಗಳು ಕನಿಮೋಳಿಯನ್ನು ರಕ್ಷಿಸುವುದು ಸಾಧ್ಯವಾಗಲಿಲ್ಲ, ಯಾವ ರೀತಿಯ ಸಬೂಬು ತಂತ್ರಗಳನ್ನು ಹೂಡಿದರೂ ಕನಿಮೋಳಿಗೊಂದು ಜಾಮೀನು ಕೊಡಿಸಲೂ ಆಗದಿರುವುದು ಕರುಣಾನಿಧಿಯ ರಾಜಕೀಯ ಅಧಃಪತನ ಹಾಗೂ ಆತನ ಇಡೀ ಕುಟುಂಬ ಸಿಲುಕಿರುವ ಹಗರಣದ ಸುಳಿಯ ತೀವ್ರತೆಗೆ ಸ್ಪಷ್ಟ ಸಾಕ್ಷಿ.

ಇಂತಹುದೊಂದು ವಿಷಮ ಸನ್ನಿವೇಶದಲ್ಲೇ ಕರುಣಾನಿಧಿಯ ಬದ್ಧವೈರಿ ಜಯಲಲಿತಾ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದಾರೆ. ಚುನಾವಣಾ ಪೂರ್ವದಲ್ಲೇ ಗರಿಗೆದರಿದ್ದ ಇವರಿಬ್ಬರ ನಡುವಿನ ವೈರತ್ವವೀಗ ಉಚ್ಛ್ರಾಯಸ್ಥಿತಿ ತಲುಪಿದೆ. ಜಯಲಲಿತಾ ಕರುಣಾ ಫ್ಯಾಮಿಲಿಯ ನೆತ್ತಿಗೆ ಕಾಲಿಡುವ ಮೂಲಕವೇ ಅಧಿಕಾರ ಆರಂಭಿಸಿದ್ದಾರೆಂದರೂ ತಪ್ಪಿಲ್ಲ, ಅಧಿಕಾರ ವಹಿಸಿಕೊಂಡ ಕ್ಷಣದಿಂದ ಈವರೆಗಿನ ಆಕೆಯ ಕಾರ್ಯವೈಖರಿ ಕರುಣಾ ಕುಟುಂಬ ಹನನದ ಏಕಮೇವ ಅಜೆಂಡಾವನ್ನು ಆಖೈರುಗೊಳಿಸುವಂತಿದೆ.





ಜಯಲಲಿತಾ ಕರುಣಾ ಕುಟುಂಬದ ಅಕ್ರಮಗಳನ್ನು ಒಂದೊಂದಾಗಿ ಹುಡುಕಿ ಅವರ ಶಕ್ತಿ ಉಡುಗಿಸುವ ತಂತ್ರಕ್ಕೆ ಮೊರೆ ಹೋದಂತಿದೆ. ಅಂದಹಾಗೆ ಕರುಣಾನಿಧಿ ಒಂದಷ್ಟು ಕಾಸು, ಪ್ರಚಾರ ಹಾಗೂ ಸಂದಿಗ್ಧದಿಂದ ಪಾರಾಗುವುದಕ್ಕೆ ಬಳಸಿಕೊಳ್ಳುತ್ತಿದ್ದದ್ದು ಕಲೈನಾರ್ ಟಿವಿ ಚಾನೆಲ್ ಸಮೂಹವನ್ನು. ಇಂಥಾ ಪ್ರಬಲ ಅಸ್ತ್ರವನ್ನೇ ನಿಷ್ಕ್ರಿಯಗೊಳಿಸಲು ಜಯಾ ಸಜ್ಜಾಗಿದ್ದಾರೆ. ಅದು ತಮಿಳುನಾಡಿನ ಕೇಬಲ್ ಟಿವಿ ನೆಟ್‌ವರ್ಕ್ ಅನ್ನು ರಾಷ್ಟ್ರೀಕರಣಗೊಳಿಸುವ ಯೋಜನೆ. 2006 ರಲ್ಲೇ ಈ ಬಗ್ಗೆ ಚಿಂತಿಸಿದ್ದ ಜಯಾ ಅದೇಕೋ ಹಿಂದೇಟು ಹಾಕಿದ್ದರು. ಆದರೀಗ ಈ ಬಗ್ಗೆ ನಿರ್ಣಾಯಕ ನಿರ್ಧಾರ ತಳೆದಿರುವುದರ ಹಿಂದಿರುವುದು ಕರುಣಾ ಫ್ಯಾಮಿಲಿಯನ್ನು ಹಣಿಯುವ ಉದ್ದೇಶವಲ್ಲದೆ ಬೇರೇನೂ ಅಲ್ಲ, ಕಲೈನಾರ್ ಟಿವಿ ಚಾನೆಲ್ ಹೊರತುಪಡಿಸಿಯೂ ಕರುಣಾ ಕುಟುಂಬ ಕೇಬಲ್ ಟಿವಿ ನೆಟ್‌ವರ್ಕ್ ಮೇಲೆ ಏಕಸ್ವಾಮ್ಯ ಹೊಂದಿದೆ. ಸುಮಂಗಲಿ ಕೇಬಲ್ ನೆಟ್‌ವರ್ಕ್ ಹೆಸರಲ್ಲಿ ಮಾರನ್ ಕುಟುಂಬ ವ್ಯವಸ್ಥಿತವಾಗಿ ಈ ಕೆಲಸ ನಡೆಸುತ್ತಿದೆ. ಇದೆಲ್ಲವನ್ನು ಕಿತ್ತುಕೊಂಡು ನೇಪಥ್ಯಕ್ಕೆ ಸರಿದಿದ್ದ ಅರಸು ಕೇಬಲ್ ನೆಟ್‌ವರ್ಕ್‌ಗೆ ಮರುಜೀವ ಕೊಡುವುದು ಜಯಾ ಕಾರ್ಯತಂತ್ರ.

ಈ ಬಾರಿಯ ಅಧಿಕಾರಾವಧಿ ಮುಗಿಯುವುದರೊಳಗೆ ಇಡೀ ಕರುಣಾ ಫ್ಯಾಮಿಲಿಯನ್ನು ಜೈಲುಪಾಲಾಗಿಸಬೇಕು, ಆ ಮೂಲಕ ರಾಜಕೀಯ ಅಸ್ತಿತ್ವವನ್ನೇ ಅಲುಗಿಸಬೇಕೆಂದು ಜಯಪ್ರತಿಜ್ಞೆ ಮಾಡಿದ್ದಾರಾ? ಆಕೆಯ ನಡವಳಿಕೆ ಕಂಡರೆ ಈ ಪ್ರಶ್ನೆ ಪ್ರಮುಖವಾಗಿ ಕಾಡುತ್ತದೆ.

ಅಧಿಕಾರ ವಹಿಸಿಕೊಂಡ ಬಳಿಕ ಮುಖ್ಯಮಂತ್ರಿ ಹೊಸ ಯೋಜನೆಗಳನ್ನು ಘೋಷಿಸುವುದು ರೂಢಿ. ಆದರೆ ಜಯಲಲಿತಾ ಕರುಣಾನಿಧಿ ಜಾರಿಗೆ ತಂದ ಯೋಜನೆಗಳನ್ನೆಲ್ಲ ಒಂದು ಕಡೆಯಿಂದ ವಾಶ್‌ಔಟ್ ಮಾಡುತ್ತಿದ್ದಾರೆ. ಡಿಎಂಕೆ ಅವಧಿಯಲ್ಲಿ ಜಾರಿಯಾದ ಪ್ರಮುಖ ಯೋಜನೆ ಕಲೈನಾರ್ ಆರೋಗ್ಯ ವಿಮೆ. ಇದಕ್ಕೊಂದಷ್ಟು ಜನಮನ್ನಣೆಯೂ ದೊರೆತಿತ್ತು, ಜಯಾ ಬಂದವರೇ ಈ ಯೋಜನೆಯನ್ನು ಏಕಾಏಕಿ ಸ್ಥಗಿತಗೊಳಿಸಿದ್ದಾರೆ. ಹಾಗಂತ ಆ ಜಾಗಕ್ಕೆ ಹೊಸ ಯೋಜನೆಯನ್ನು ಪ್ರಕಟಿಸಿಲ್ಲ, ಇದು ಜಯಲಲಿತಾರ ಕರುಣಾ ಹನನ ಯಾಗದ ಉತ್ಸಾಹಕ್ಕೆ ಉದಾಹರಣೆ.

ಇನ್ನು ಡಿಎಂಕೆ ಮುಖಂಡರ ಭೂಹಗರಣಗಳನ್ನೂ ಕೆದಕಲು ನಿಂತಿರುವ ಜಯ ತಮಿಳುನಾಡಿನ ತುಂಬಾ ಡಿಎಂಕೆಯ ಬೇರು ಬಿಳಲುಗಳಲ್ಲೆಲ್ಲಾ ನಡುಕ ಹುಟ್ಟಿಸಿದ್ದಾರೆ. ಯಾಕೆಂದರೆ ಕರುಣಾನಿಧಿ ಸರ್ಕಾರಿ ಭೂಮಿಗಳನ್ನು ಕುಟುಂಬಿಕರಿಗೆಲ್ಲಾ ಚರ್ಪು ಹಂಚಿದಂತೆ ವಿತರಿಸಿದ್ದರು. ಯೋಜನೆ, ಒಳ್ಳೆ ಕೆಲಸಗಳ ಮೂಲಕ ಜನರನ್ನು ತಲುಪುವ ಮನಸು ಮಾಡದೆ ಪಕ್ಷ ಸಂಘಟನೆಗೂ ಸರ್ಕಾರಿ ಭೂಮಿಯನ್ನೇ ಪಣವಾಗಿಟ್ಟಿದ್ದರು. ಒಂದು ಮೂಲದ ಪ್ರಕಾರ ಈ ಹಗರಣವೇನಾದರೂ ಸಂಪೂರ್ಣ ಕೆದಕಲ್ಪಟ್ಟರೆ ಕರುಣಾ ಫ್ಯಾಮಿಲಿಯ ಜೊತೆಗೆ ಡಿಎಂಕೆಯ ಅಸಂಖ್ಯ ಕಾರ್ಯಕರ್ತರೂ ಜೈಲು ಸೇರಬೇಕಾಗುತ್ತದೆ. ಈ ಅಪಾಯ ತಪ್ಪಿಸಲೋಸ್ಕರವೇ ಕರುಣಾ ಮಗ ಹಾಗೂ ಮಾಜಿ ಉಪಮುಖ್ಯಮಂತ್ರಿ ಸ್ಟ್ಯಾಲಿನ್ ಪ್ರತಿಭಟನೆಗಿಳಿದಿದ್ದ, ಆದರೆ ಜಯ ಸಾವಿರಾರು ಡಿಎಂಕೆ ಕಾರ್ಯಕರ್ತರ ಸಮೇತ ಸ್ಟ್ಯಾಲಿನ್‌ನನ್ನು ಜೈಲಿಗೆ ಗದುಮಿ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಕರುಣಾನಿಧಿ ಯಾವ ಪರಿ ಸ್ವೇಚ್ಛೆಯ ಆಡಳಿತ ನಡೆಸಿದ್ದರೆಂದರೆ ಜಯಲಲಿತಾ ತಮ್ಮ ವಿರುದ್ಧ ಸೇಡು ತೀರಿಸಿಕೊಳ್ಳಲು ಎಲ್ಲಾ ಮಾರ್ಗಗಳನ್ನೂ ಸುಗಮಗೊಳಿಸಿ ಎದ್ದು ಹೋಗಿದ್ದಾರೆ. ಇದರಿಂದಾಗಿಯೇ ಕರುಣಾನಿಧಿ ಪುತ್ರ ಎಂ.ಕೆ. ಅಳಗಿರಿ ಪತ್ನಿ ಸಮೇತನಾಗಿ ಭೂಹಗರಣವೊಂದರಲ್ಲಿ ತಗುಲಿಕೊಂಡಿದ್ದಾನೆ. ಅಳಗಿರಿಯ ಹೆಂಡತಿ ಕಾಂತಿ ಅಳಗಿರಿ ಈ ಪ್ರಕರಣದ ಕೇಂದ್ರಬಿಂದು.

ಕಾಂತಿ ಕಬಳಿಸಿದ್ದು ಮಧುರೈ ಸಮೀಪದ ಉಥನ್ ಗುಡಿಯಲ್ಲಿರುವ ದೇವಾಲಯವೊಂದರ ಜಾಗ. ಈ ದೇವಾಲಯಕ್ಕೆ 1936 ರಲ್ಲಿ ಭಕ್ತರೊಬ್ಬರು 23 ಎಕರೆ ಜಾಗವನ್ನು ದಾನವಾಗಿ ನೀಡಿದ್ದರು. ಇದನ್ನು ಯಾರಿಗೂ ಮಾರದಂತೆ ಸ್ಪಷ್ಟವಾಗಿ ಷರತ್ತು ವಿಧಿಸಿದ್ದರು. ಇಂಥಾ ಜಾಗವನ್ನು ಸುಳ್ಳು ದಾಖಲೆ ಸೃಷ್ಟಿಸಿ ದಗಾಕೋರ ಲಾಟರಿ ಉದ್ಯಮಿ ಸ್ಯಾಂಟಿಂಗೋ ಮಾರ್ಟಿನ್ ಎಂಬಾತನಿಗೆ ಮಾರಾಟ ಮಾಡಿ, ಇದರ ಪವರ್ ಆಫ್ ಅಟಾರ್ನಿಯನ್ನು ಡಿಎಂಕೆ ನಾಯಕ ಅನ್ಬಗನ್‌ನ ಸಂಬಂಧಿ ಸುಕುಮಾರನ್ ಎಂಬಾತನಿಗೆ ನೀಡಲಾಗಿತ್ತು, ಆದರೀಗ ಆ ಸ್ವತ್ತು ಸುತ್ತಿ ಬಳಸಿ ಕಾಂತಿ

'ತಂಬಿ'ಗಳ ಪಾಪದ ಕೊಡ ತುಂಬಿ...!



ತಮಿಳುನಾಡಿನ ಪೆರಿ ತಂಬಿ ಕರುಣಾನಿಧಿ ಹಾಗೂ ಕರ್ನಾಟಕದ ಚಿನ್ನತಂಬಿ ಯಡಿಯೂರಪ್ಪ ಒಂದೇ ಸಮಯದಲ್ಲಿ ಸಮಾನ ಪರಿಸ್ಥಿತಿಯನ್ನು ಆವಾಹಿಸಿಕೊಂಡಿದ್ದಾರೆ.

ಇದೆಲ್ಲಿಂದೆಲ್ಲಿಯ ಕನೆಕ್ಷನ್ನು ಅನ್ನಬೇಡಿ. ಯಾಕೆಂದರೆ 2009 ನೇ ಇಸವಿಯಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆ ವಿವಾದ ಮುಂದಿಟ್ಟುಕೊಂಡು ಈ ಜೋಡಿಯ ಸಂಗಮ ಸಂಭವಿಸಿತ್ತು, ಚೆನ್ನೈನಲ್ಲಿ ಭೇಟಿಯಾದ ಯಡ್ಡಿಯನ್ನು ತಬ್ಬಿ ಮುದ್ದಾಡಿದ್ದ ಕರುಣಾ ಪ್ರೀತಿಯಿಂದ 'ತಂಬೀ' ಅಂದಿದ್ದರು. ಅದಾಗಿ ಎರಡು ವರ್ಷ ಕಳೆಯುವಷ್ಟರಲ್ಲಿ ತಂಬಿಗಳಿಬ್ಬರೂ ಪಾಪದ ಕೊಡ ತುಂಬಿ ಅಂಬೋ ಅನ್ನುತ್ತಿರುವುದು ಮಾತ್ರ ಕಾಕತಾಳೀಯ.



ಸೂಕ್ಷ್ಮವಾಗಿ ಗಮನಿಸಿದರೆ ಇವರಿಬ್ಬರ ಆಡಳಿತ ವೈಖರಿಯಲ್ಲಿ ಕುಟುಂಬ ಪ್ರೇಮದ ವಿಚಾರದಲ್ಲಿ ಸಾಮ್ಯತೆಯಿದೆ. ಕರುಣಾನಿದಿ ಮಾಡಬಾರದ್ದು ಮಾಡಿದರೂ ಅಧಿಕಾರಾವಧಿ ಮುಗಿಸಿ ಮನೆ ಸೇರಿದ್ದಾರೆ. ಆದರೆ ಯಡ್ಡಿಯ ಕುಟುಂಬ ಪ್ರೇಮ ಅಕಾಲಿಕವಾಗಿ ಅಧಿಕಾರವನ್ನೇ ಬಲಿ ಬೇಳಿಸಿದೆ.

ಕುಟುಂಬ ಪ್ರೇಮ, ದುರಾಡಳಿತದ ವಿಚಾರದಲ್ಲಿ ನಿಜಕ್ಕೂ, ಕರುಣಾನಿಧಿ ಪೆರಿತಂಬಿ. ಯಡ್ಡಿ ಆತನ ಕಿರಿ ತಂಬಿ!

❖

ಅಕ್ಷರವನ್ನೂ ಬಿಡಲಿಲ್ಲ ಅಸಹ್ಯ ರಾಜಕೀಯ




ಜಯಲಲಿತಾ-ಕರುಣಾನಿಧಿ ನಡುವಿನ ದ್ವೇಷ ರಾಜಕೀಯದ ಅಸಹ್ಯವೀಗ ಅಕ್ಷರಕ್ಕೂ ಮೆತ್ತಿಕೊಂಡಿದೆ.

ಕರುಣಾನಿಧಿ ಎಂಥಾ ಕುಟುಂಬ ಪ್ರೀತಿ, ಸ್ವಪ್ರತಿಷ್ಠೆಯ ಆಸಾಮಿಯೆಂದರೆ ಶಾಲಾಪಠ್ಯಪುಸ್ತಕಗಳಲ್ಲಿ ತನ್ನ ಹಾಗೂ ಮಗಳು ಕನಿಮೋಳಿಯ ಕವಿತೆ, ಬರಹಗಳನ್ನೂ ತುರುಕಿಬಿಟ್ಟಿದ್ದ. ಜೊತೆಗೆ ಕರುಣಾರನ್ನು ಹಾಗೂ ಆತನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯದ್ವಾತದ್ವಾ ಹೊಗಳಿದ ಬರಹಗಳೂ ಪಠ್ಯಗಳಾಗಿ ತೂರಿಕೊಂಡಿದ್ದವು.

ಜಯಲಲಿತಾ ಇದೀಗ ಅದನ್ನೆಲ್ಲ ಬದಲಾಯಿಸಲು ಏಕಾಏಕಿ ಆದೇಶ ನೀಡಿದ್ದಾರೆ. ದುರಂತವೆಂದರೆ ಈಕೆ ಈ ಹಠಾತ್ ಆದೇಶದಿಂದ ಮಕ್ಕಳ ಮೇಲಾಗಬಹುದಾದ ಪ್ರತಿಕೂಲ ಪರಿಣಾಮಗಳ ಬಗ್ಗೆ ಕಿಂಚಿತ್ತೂ ಯೋಚಿಸಿಲ್ಲ, ಕರುಣಾ ಪ್ರವರಗಳನ್ನು ಪಠ್ಯಗಳಾಗಿ ಓದುವ ಕರ್ಮ ಅಲ್ಲಿನ ಮಕ್ಕಳಿಗೆ ಬೇಡ. ಅದರ ಅದನ್ನು ತೆಗೆದುಹಾಕುವುದಕ್ಕೂ ಸೂಕ್ತ ಕ್ರಮವಿದೆ. ಅದರ ಬಗ್ಗೆ ಯೋಚಿಸುವುದು ಬಿಟ್ಟು ರಾಜಕೀಯ ತೆವಲೇ ಮುಖ್ಯವೆಂದುಕೊಂಡಿರುವ ಜಯಾ ಬಗ್ಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಸಹನೀಯ ಅಂಶವೆಂದರೆ ಇದರ ಪ್ರತಿಕೂಲತೆಯನ್ನು ಮನಗಂಡ ತಮಿಳುನಾಡು ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ಹಾಗೂ ಸ್ವತಂತ್ರ ಕುಮಾರ್‌ರ ನ್ಯಾಯಪೀಠ ಜಯಲಲಿತಾ ಕ್ರಮಕ್ಕೆ ತಾತ್ಕಾಲಿಕ ಬ್ರೇಕ್ ಹಾಕಿ ಆದೇಶ ಹೊರಡಿಸಿದೆ.

❖



ಜಿದ್ದಿಗೆ ಬಲಿಯಾಯ್ತು 750 ಕೋಟಿ!

ಊಹ್ಞುಂ, ಜಯಾ ಕರುಣಾನಿಧಿಯ ಕಾಲವಲ್ಲಾದ ಯಾವ ಯೋಜನೆ, ಕಾರ್ಯಕ್ರಮ, ಕಟ್ಟಡಗಳನ್ನೂ ಒಪ್ಪಿಕೊಳ್ಳುವುದಿಲ್ಲ.

ಈ ದ್ವೇಷಕ್ಕೀಗ ವಿಧಾನಭವನ ಹಾಗೂ ಅದಕ್ಕೆ ಖರ್ಚು ಮಾಡಿದ ಅಖಂಡ ಏಳುನೂರಾ ಐವತ್ತು ಕೋಟಿ ಜನರ ದುಡ್ಡು ಬಲಿಯಾಗುವ ಹಂತ ತಲುಪಿದೆ. ಈ ವಿಧಾನಭವನ ಕರುಣಾನಿಧಿಯ ಕನಸಿನ ಕೂಸು. ಕಳೆದ ವರ್ಷವೇ ತರಾತುರಿಯಲ್ಲಿ ಕರುಣಾನಿಧಿ ಇದನ್ನು ಪ್ರಧಾನಿ ಮನಮೋಹನ್ ಸಿಂಗ್‌ರಿಂದ ಉದ್ಘಾಟಿಸಿದ್ದರು. ಇದರ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

ಆದರೆ ಜಯಲಲಿತಾ ಈ ಅದ್ದೂರಿ ವಿಧಾನಭವನವನ್ನು ಸರ್ಕಸ್ ಟೆಂಟ್ ಎಂದು ಜರೆದಿದ್ದಾರೆ. ಜೊತೆಗೆ ಇದರ ಕಾಮಗಾರಿಯಲ್ಲಿ ಅವ್ಯವಹಾರವಾಗಿರುವುದನ್ನು ಎತ್ತಿ ಹಿಡಿದು ಯಾವ ಕಾರಣಕ್ಕೂ ಅದರೊಳಗೆ ಕಾಲಿಡುವುದಿಲ್ಲ ಅಂತ ಪ್ರತಿಜ್ಞೆ ಮಾಡಿದ್ದಾರೆ. ಕಾಮಗಾರಿ ಅವ್ಯವಹಾರದ ಬಗ್ಗೆ ನಿವೃತ್ತ ನ್ಯಾಯಮೂರ್ತಿಯೊಬ್ಬರ ಸಮಿತಿ ರಚಿಸುವುದಾಗಿ ಅಬ್ಬರಿಸಿರುವ ಜಯಾ ಕಟ್ಟಡ ಕಾಮಗಾರಿ ಸ್ಥಗಿತಗೊಳಿಸಲು ಆದೇಶಿಸಿದ್ದಾರೆ.

ಜಯಲಲಿತಾ ಇದೀಗ ಹಳೆಯ ವಿಧಾನಭವನದಲ್ಲೇ ಆಡಳಿತ ನಡೆಸುತ್ತಿದ್ದಾರೆ. ಆ ಕಟ್ಟಡದ ನವೀಕರಣಕ್ಕೂ ಮನಸು ಮಾಡಿದ್ದಾರೆ. ಅಂದಹಾಗೆ ಈ ಕಾಮಗಾರಿಯ ಅಂದಾಜು ಬಾಬತ್ತು 40 ಕೋಟಿ ಅಂತ ಲೆಕ್ಕ ಹಾಕಲಾಗಿದೆ!

ಗಮನೀಯ ಅಂಶವೆಂದರೆ ಕರುಣಾನಿಧಿ ವಿಧಾನ ಭವನಕ್ಕೆ ಸುರಿದ 750 ಕೋಟಿ ಹಾಗೂ ಇಂದು ಜಯಲಲಿತಾ ಹಳೇ ಕಟ್ಟಡ ನವೀಕರಣಕ್ಕೆ ಬಳಸುತ್ತಿರುವ 40 ಕೋಟಿ ಜನರ ದುಡ್ಡು.

ಇವರಿಬ್ಬರ ನಡುವಿನ ಯುದ್ಧ ಯಾರ ಎದೆಯ ಮೇಲೆ ನಡೆಯುತ್ತಿದೆಯೆಂಬುದನ್ನು ಈ ವಿಚಾರ ಸ್ಪಷ್ಟಪಡಿಸುತ್ತದೆ. ❦

ಅಳಗಿರಿ ಹೆಸರಿಗೆ ಸಂದಾಯವಾಗಿದೆ. ಈ ಸ್ವತ್ತಿನ ಬೆಲೆ ಐವತ್ತು ಕೋಟಿ!

ಕೆದಕುತ್ತಾ ಹೋದರೆ ಇಂಥ ಅನೇಕ ಪ್ರಕರಣಗಳು ಡಿಎಂಕೆ ಪಕ್ಷಕ್ಕೆ, ಕರುಣಾ ಫ್ಯಾಮಿಲಿಗೆ ಕುಣಿಕೆಗಳಾಗಿ ನೇತು ಬೀಳುತ್ತವೆ. ಅತ್ತಲಿಂದ ಕರುಣಾ ಒಡೆತನದ ಸನ್ ನೆಟ್‌ವರ್ಕ್‌ಗೆ 2ಜಿ ಹಗರಣದ ಹಣ ಹರಿದ ಆರೋಪಕ್ಕೆ ಪಕ್ಕಾ ದಾಖಲೆಗಳು ಸಿಗುತ್ತಿವೆ. ಕರುಣಾ ಬಣದ ಒಬ್ಬೊಬ್ಬರೇ ಕೇಂದ್ರ ಸಚಿವರು ಉದುರಿ ಬೀಳುತ್ತಿದ್ದಾರೆ. ಈ ಹಗರಣ ಕರುಣಾನಿಧಿಯ ಕಡೆಗೆ ಬಾಯ್ತೆರೆದು ಚಲಿಸುತ್ತಿದೆ. ತೀರಾ ರಾಜ್ಯ ರಾಜಕೀಯದಲ್ಲಿ ನೆಲೆ ಕಳೆದು ಹೋಗಿ ಕಂಗಾಲಾಗಿರುವ ಕರುಣಾ ವಿರುದ್ಧ ನೂತನ ಮುಖ್ಯಮಂತ್ರಿ ಜಯಾ ಗುಟುರು ಹಾಕುತ್ತಿದ್ದಾರೆ.

ಜಯಲಲಿತ ಸೇಡಿನ ಹಾದಿಯಲ್ಲಿ ಇದೇ ರೀತಿ ಮುಂದುವರಿದರೆ ಇನ್ನು ಕೆಲವೇ ತಿಂಗಳುಗಳಲ್ಲಿ ಕರುಣಾ ಫ್ಯಾಮಿಲಿ ತಿಹಾರ್ ಜೈಲು ಪಾಲಾದರೂ ಆಶ್ಚರ್ಯವಿಲ್ಲ. ಆದರೆ ಜಯಲಲಿತಾ ಕರುಣಾ ವಿರುದ್ಧದ ಸೇಡಿನ ಭರದಲ್ಲಿ ಅಧಿಕಾರ ನಿಭಾವಣೆಯಲ್ಲಿ ಎಡವಿದಂತಿದೆ. ಅದಕ್ಕೆ ಸರಿಯಾಗಿ ಚುನಾವಣಾ ಸಂದರ್ಭದಲ್ಲೇಕೆ ಮಾನಗೆಟ್ಟ ಕರುಣಾ ನೀಡಿದ ಭರವಸೆ, ಆಶ್ವಾಸನೆಗಳಿಗೆ ನಾಚಿಕೆಗೆಟ್ಟು ಪ್ರತಿಸ್ಪರ್ಧೆ ನೀಡಿದ್ದರು. ಇದೀಗ ಆ ಬಗ್ಗೆ ವಿಚಾರಿಸಿದರೆ, ಪ್ರತಿಕ್ರಿಯೆ ನೀಡುವುದಕ್ಕೇ ಗಡುವು ನಿಗದಿಪಡಿಸುತ್ತಿದ್ದಾರೆ. ಇದು ತಮಿಳಿಗರ ಪಾಲಿನ ದುರಂತ ಸ್ಥಿತಿ.

ಇದೆಲ್ಲ ಏನೇ ಇದ್ದರೂ ಕರುಣಾನಿಧಿಯ ದುರಾಡಳಿತ, ಕುಟುಂಬ ಪ್ರೀತಿಯ ಬಗ್ಗೆ ತಮಿಳುನಾಡಿನಾದ್ಯಂತ ಅಸಹನೆಗಳಿರುವುದು ಸ್ಪಷ್ಟ. ಅತ್ತ 2ಜಿ ಹಗರಣದ ಕುಣಿಕೆ, ಇತ್ತ ಜಯಲಲಿತಾರ ನಿರಂತರ ಹೊಡೆತ ಗಮನಿಸುತ್ತಿರುವ ತಮಿಳುನಾಡಿನ ಜನತೆ 'ಅಣ್ಣಾದ್ ಕದೆ ಮುಂಜಿ ಪೋಚ' ಅಂತ ಉದ್ಗಾರವೆತ್ತುತ್ತಿದ್ದಾರೆ.

ಸದ್ಯ ಅದರಲ್ಲಿ ವಾಸ್ತವವೇ ಎದ್ದು ಕಾಣಿಸುತ್ತಿದೆ. ❦

ಬಿಬಿಎಂಪಿ: ಬಿಜೆಪಿಗಳ ಭ್ರಷ್ಟಾಚಾರ

ಅಷ್ಟ ಭ್ರಷ್ಟರಿಗೆ ಇದೀಗ ಕಷ್ಟ... ಕಷ್ಟ!

ಕರ್ನಾಟಕದ ಉದ್ದಗಲಕ್ಕೂ ಭ್ರಷ್ಟಾಚಾರ, ಹಗರಣ ಎಂಬಿತ್ಯಾದಿ ಕೆಂಭೂತಗಳು ರಣಕೇಕೆ ಹಾಕುತ್ತಿರುವ ಸಮಯವಿದು. ಇದಕ್ಕೆ ಬೆಂಗಳೂರೆಂಬ ಬೆಡಗಿಯೇನೂ ಹೊರತಲ್ಲ. ಮೇಲ್ನೋಟಕ್ಕೆ ಎಲ್ಲ ಸಲೀಸಾಗಿದೆ ಎಂದೆನಿಸಿದರೂ ಒಳಗಿನ ಅಪರಾ-ತಪರಾಗಳು ಎಗ್ಗಿಲ್ಲದಂತೆ ನಡೆಯುತ್ತಿವೆ. ಇದರ ಅಷ್ಟೂ ಶ್ರೇಯಸ್ಸು ಬಿಬಿಎಂಪಿಗೆ ಸೇರಬೇಕು. ಬಯಲಿಗೆಳೆದಷ್ಟೂ ಅದರ ಕರ್ಮಕಾಂಡ ಬಿಚ್ಚಿಕೊಳ್ಳುತ್ತಲೇ ಸಾಗುತ್ತದೆ. ಬೆಂಗಳೂರಿಗರ ಕೋಟಿ ಕೋಟಿ ತೆರಿಗೆ ಹಣವನ್ನು ಪಾಲಿಕೆಯ ಕ್ರಿಮಿಗಳು ಅದೆಷ್ಟು ನಾಜೂಕಾಗಿ ನಿರ್ನಾಮ ಮಾಡುತ್ತಿದ್ದಾರೆಂಬುದಕ್ಕೆ ಒಂದು ರೋಡ್ ಕಾಂಟ್ರ್ಯಾಕ್ಟೂ ಹಾಗೂ ಎಂಟು ಮಂದಿ ಪಾಲಿಕೆ ನುಂಗಣ್ಣರ ಪ್ರಚಲಿತ ಹಗರಣವೇ ಸಾಕ್ಷಿ. ತಡವಾಗಿಯಾದರೂ ತಕ್ಕ ವೇಳೆಯಲ್ಲೆ ಅಡಕತ್ತರಿಗೆ ಸಿಕ್ಕಿದ ಹಗರಣದಿಂದಾಗಿ ಈ ಎಂಟೂ ಮಂದಿ ಬರೋಬ್ಬರಿ ಒಂದು ಕೋಟಿ ಎಂಬತ್ತೈದು ಲಕ್ಷ ದಂಡ ಪೀಕಬೇಕಾಗಿ ಬಂದಿರುವುದು ಬಿಬಿಎಂಪಿಗೆ ಭರ್ಜರಿ ಮುಖಭಂಗದ ಪ್ರಸಂಗವಾಗಿದೆ.

ಐಟಿ-ಬಿಟಿ ಸಿಟಿಯೆಂಬ ಹೆಗ್ಗಳಿಕೆ ಹೆಗಲೇರಿದ ದಿನದಿಂದಲೂ ಬೆಂಗಳೂರಿಗೆ ಒಂದಷ್ಟು ಸಿಂಗಾರದ ಕಾರ್ಯ ನಡೆಯುತ್ತಲೇ ಇದೆ. ಈ ಎಲ್ಲ ಕೆಲಸಗಳೂ ಒಳಪಡುವುದು ಪಾಲಿಕೆಯ ವ್ಯಾಪ್ತಿಗೆ, ಹಾಗಾಗಿ ಇದೊಂದು 'ಫಲಭರಿತ' ವಲಯ. ಅದರಲ್ಲೂ 'ಬೃಹತ್' ಅಂತಾದ ಮೇಲಂತೂ ಬಿಬಿಎಂಪಿಯ 'ಫಸಲು' ಮತ್ತಷ್ಟೂ ಹೆಚ್ಚಿದೆ. ಅಲ್ಲಿ ಮಂಜೂರಾಗುವ ಪ್ರತಿ ಯೋಜನೆಯೂ ಹಗರಣದ ಹೊಸ ಅಧ್ಯಾಯದ ಆರಂಭವೇ ಸರಿ. ಅಭಿವೃದ್ಧಿ ಕಾರ್ಯದ ಹೆಸರಲ್ಲಿ ಅಧಿಕಾರಿಗಳು ನಡೆಸುತ್ತಿರುವ ಹಗಲು ದರೋಡೆ ಅಂತಿಂತವುಗಳಲ್ಲ. ಅಂತದೆ ಒಂದು ಕಾಮಗಾರಿಯ ಪೋಸ್ಟ್ ಮಾರ್ಟಮ್‌ನಿಂದಾಗಿ ಸದ್ದಿಲ್ಲದೆ ನಡೆದಿದ್ದ ಹಗರಣವೊಂದು ಈಗ ಬೆಳಕಿಗೆ ಬಂದಿದೆ. 2007-08 ನೇ ಸಾಲಿನಲ್ಲಿ ಮಂಜೂರಾದ ಬೆಂಗಳೂರಿನ ಜಾಲಹಳ್ಳಿಯ ಅಯ್ಯಪ್ಪ ದೇವಸ್ಥಾನದಿಂದ ಗಂಗಮ್ಮ ಸರ್ಕಲ್‌ವರೆಗಿನ 3 ಕಿ.ಮೀ. ಉದ್ದದ ಮುಖ್ಯರಸ್ತೆಯ ಅಗಲೀಕರಣದ ಅವ್ಯವಹಾರದಲ್ಲಿ ಭಾಗಿಯಾದ ಅಂದಿನ ಚೀಫ್ ಇಂಜಿನಿಯರ್ ಚಿಕ್ಕರಾಯಪ್ಪ, ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಟಿ ನಾಗರಾಜ್ ಒಳಗೊಂಡಂತೆ ಎಂಟು ಮಂದಿ ಅಧಿಕಾರಿಗಳು ಕಾಂಟ್ರ್ಯಾಕ್ಟರ್‌ನೊಂದಿಗೆ ಸೇರಿಕೊಂಡು ಕೋಟ್ಯಂತರ ರೂಪಾಯಿ ಮುಳುಗಿಸಿ ಈಗ ತನಿಖೆಯಲ್ಲಿ ತಗುಲಿಕೊಂಡಿದ್ದಾರೆ. ಅವರಲ್ಲಿ ಕೆಲವರು ಈಗಾಗಲೆ ರಿಟೈರ್ಡ್ ಆಗಿ ಮನೆ ಸೇರಿಕೊಂಡಿದ್ದರೆ, ಕೆ.ಟಿ ನಾಗರಾಜ್ ಹಾಲಿ ಚೀಫ್ ಇಂಜಿನಿಯರ್ ಸ್ಥಾನದಲ್ಲಿ ಆಸನವೂರಿದ್ದಾನೆ. ಇನ್ನು ಮುಖ್ಯ ಸೂತ್ರಧಾರಿ ಚಿಕ್ಕರಾಯಪ್ಪ ಮಾತ್ರ ಲಾಂoooooooಗ್ ಲೀವ್ ಹೆಸರಲ್ಲಿ ತಿಂದದ್ದೆಲ್ಲವ ಜೀರ್ಣಿಸಿಕೊಳ್ಳುತ್ತಿದ್ದಾನೆ. ಇಷ್ಟಕ್ಕೂ ಈ ಪರಿಯ ಅವಾಂತರಕ್ಕೆ ಕಾರಣವಾದ ಕಂಟ್ರ್ಯಾಕ್ಟನ್ನು ಹಿಂದಿದ್ದಿದ್ದು ಯಶವಂತಪುರದ ಹಾಲಿ ಕಾರ್ಪೋರೇಟರ್ ಮುನಿರತ್ನ. ಕಳೆದ ವರ್ಷ ಈತ ವೆಟನರಿ ಕಾಲೇಜ್ ಬಳಿ ನಿರ್ಮಿಸಿದ್ದ ಕಳಪೆ ಮಟ್ಟದ ಕಾಂಪೌಂಡ್ ಗೋಡೆ ಸಂಜನಾ ಅನ್ನೋ ಹುಡುಗಿಯ ಮೇಲೆ ಕುಸಿದು ಪ್ರಾಣ ಕಿತ್ತುಕೊಂಡ ಹೊಲಸಿನ್ನು ಹಸಿಯಿರುವಾಗಲೇ ಮತ್ತೊಂದು ರಾಡಿ ಮಾನ ಹರಾಜಾಕಲು ರೆಡಿಯಾಗಿ ಕೂತಿದೆ.



ಸಿದ್ದಯ್ಯ

ಅಸಲಿಗೆ ಈ ಕಾಮಗಾರಿಗೆ ಅನುಮೋದನೆ ಅಂತ ದೊರೆತಿರುವುದೇ ದೊಡ್ಡ ಅವಾಂತರವೆನಿಸುತ್ತೆ. ಇದು ಮಂಜೂರಾಗಿದ್ದು 2007-08ನೇ ಸಾಲಿನಲ್ಲಿ, ಅಂದರೆ ಟೆಂಡರ್ ಮೊತ್ತ ಅದೇ ವರ್ಷದ ಪಿ.ಡಬ್ಲ್ಯೂ.ಡಿ ದರದಂತೆ ನಮೂದಾಗಬೇಕು. ಆದರೆ ಟೆಂಡರ್ ಮೊತ್ತ ನಮೂದಾಗಿರುವುದು 2008-09ನೇ ಸಾಲಿನ ಪಿಡಬ್ಲ್ಯೂಡಿ ದರದಂತೆ, ಒಂದು ವರ್ಷ ನಂತರದ ಆಲ್‌ಮೋಸ್ಟ್ ದುಪ್ಪಟ್ಟು ದರ. 6.3 ಕೋಟಿಯನ್ನು ಕಾಮಗಾರಿ ವೆಚ್ಚವಾಗಿ ಅಂಗೀಕರಿಸಿರುವುದರ ಹಿಂದೆ ಪಾಲಿಕೆಯೊಳಗಿನ ಹೆಗ್ಗಣಗಳ ಪಾತ್ರ ಸಾಬೀತಾಗುತ್ತದೆ. ಈ ಮೂಲಕ ಕಾಮಗಾರಿ ಸುಸೂತ್ರವಾಗಿ ನಡೆಯದು ಎಂಬ ಸುಳಿವು ಆರಂಭದಲ್ಲಿಯೇ ಸಿಕ್ಕಾಗಿತ್ತು. ಇನ್ನು ಮುನಿರತ್ನ ಈ ಕಾಮಗಾರಿಗೆ ಅರ್ಜಿ ಗುಜರಾಯಿಸಿ ಒಪ್ಪಿಗೆ ಪಡೆದಿರುವುದು 'Letter of intent' ಮೂಲಕ. ಆದರೆ 2006ರಲ್ಲಿಯೇ ಪಾಲಿಕೆ ಇನ್ನು ಮುಂದೆ ಕಂಟ್ರ್ಯಾಕ್ಟರ್‌ಗಳಿಗೆ ಲೆಟರ್ ಆಫ್ ಇಂಟೆಂಟ್ ಮೂಲಕ ಕಾಮಗಾರಿ ಗುತ್ತಿಗೆ ನೀಡುವುದಿಲ್ಲ, ಅಂತ ಅಫಿಡವಿಟ್ ಸಲ್ಲಿಸಿತ್ತು, 2009ರಲ್ಲಿ ಈ ಕಾಮಗಾರಿಯನ್ನು ಅದೇ ಹಳೆಯ ಮಾದರಿಯಲ್ಲಿ ಅನುಮೋದನೆ ನೀಡಿದ್ದಾರೆಂದರೆ, ಹೈಕೋರ್ಟ್‌ನ ಅಫಿಡವಿಟ್ಟನ್ನು ಅಧಿಕಾರಿಗಳು ಉಲ್ಲಂಘಿಸಿರುವುದು ಸ್ಪಷ್ಟವಾಗುತ್ತದೆ. ಇಲ್ಲಿ ಮತ್ತೊಂದು ಸಂಗತಿಯಿದೆ. ಪಾಲಿಕೆಯ ದಾಖಲೆಗಳ ಪ್ರಕಾರ ಮುನಿರತ್ನನಿಗೆ ಈ ಕಾಂಟ್ರ್ಯಾಕ್ಟ್ ಸಿಕ್ಕಿರುವುದು 28 ಮೇ 2009ಕ್ಕೆ ಆದರೆ ಕಾಮಗಾರಿ ಅದೇ ಮಾರ್ಚ್ 31, 2009ರಲೇ ಪೂರ್ಣವಾಗಿದೆ



ಎಂದು ತೋರಿಸಲಾಗಿದೆ. ಅಂದರೆ ಕಾಂಟ್ರ್ಯಾಕ್ಟು ಲಭಿಸುವ ಎರಡು ತಿಂಗಳ ಕೆಲಸ ಪೂರ್ಣವಾಗಿಬಿಟ್ಟಿತ್ತಂತೆ. ಟೆಂಡರ್ ಹಣವನ್ನು ದುಪ್ಪಟ್ಟು ಮಾಡಿ ಮುನಿರತ್ನನಿಗೆ ಫೇವರ್ ಮಾಡಲೋಸುಗವೇ ಈ ಎಲ್ಲಾ ನಾಟಕ ನಡೆದಿರುವುದೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಅಲ್ಲಿಂದ ಮುಂದೆ ನಡೆದಿದ್ದೆಲ್ಲಾ ಪಾಲಿಕೆಯ ಚೀಫ್ ಇಂಜಿನಿಯರ್ ಚಿಕ್ಕರಾಯಪ್ಪ ಅಂಡ್ ಟೀಮ್ ಹಾಗೂ ಕಾಂಟ್ರ್ಯಾಕ್ಟರ್ ಪ್ರಾಯೋಜಕತ್ವದ ಪಕ್ಕಾ ಕಮರ್ಷಿಯಲ್ ಹೈ ಡ್ರಾಮಾ. ಏಕೆಂದರೆ ಈ ಮೂರು ಕಿಲೋಮೀಟರ್ ಉದ್ದದ ರಸ್ತೆ ಅಗಲೀಕರಣವನ್ನು ಆರು ಹಂತಗಳಲ್ಲಿ ಪೂರ್ಣಗೊಳಿಸಲು ಪ್ಲಾನ್ ರೂಪಿಸಲಾಗಿತ್ತು. ಒಂದೊಂದು ಹಂತ ಪೂರ್ಣವಾದ ನಂತರ ಚೀಫ್ ಇಂಜಿನಿಯರ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಅತ್ತಕಡೆಗೊಮ್ಮೆ ಕಣ್ಣಾಯಿಸಿ ಕೆಲಸ ತೃಪ್ತಿಕರವಾಗಿದ್ದರೆ ಕಂತಿನಲ್ಲಿ ಬಿಲ್ ಪಾವತಿ ಮಾಡಬೇಕೆನ್ನುವುದು ನಿಯಮ. ಆದರೆ ಅದ್ಯಾವ ಡೀಲ್ ಕುದುರಿತ್ತೋ, ಅದಿನ್ಯಾವ ಪೊಲಿಟಿಶಿಯನ್ ತಲೆ ಇಣುಕಿತ್ತು, ಒಟ್ಟಿನಲ್ಲಿ ಅಧಿಕಾರಿಗಳು ಕಾಮಗಾರಿ ಪರಿಶೀಲನೆಗೇ ಹೋದಂತಿಲ್ಲ. ಮಲಗಿದ್ದ ಮಂಚದ ತುದಿಯಿಂದಲೇ ಇಷ್ಟುದ್ದ ಸಹಿ ಗೀಚಿ ಬಿಲ್ ಪಾವತಿ ಮಾಡಿಸಿಕೊಟ್ಟು ಜೇಬು ತುಂಬಿಸಿಕೊಂಡಿದ್ದಾರೆ. ಅಷ್ಟಕ್ಕೂ ಕಾಮಗಾರಿ ನಡೆದಿರುವುದು ನಿಯೋಜಿತವಾಗಿದ್ದ ಜಾಲಹಳ್ಳಿ ಮುಖ್ಯ ರಸ್ತೆಯಲ್ಲಲ್ಲ, ಪಕ್ಕದಲ್ಲಿದ್ದ ಸಣ್ಣಪುಟ್ಟ ಗಲ್ಲಿಗಳಲ್ಲಿ!


ಮುನಿರತ್ನಂ

ಇದಿಷ್ಟೇ ಆಗಿದ್ದರೆ ಮಿಕಗಳೆಲ್ಲ ಬಚಾವಾಗಿಬಿಡುತ್ತಿದ್ದರೇನೋ ಆದರೆ ಮತ್ತಷ್ಟು ಮಾಮೂಲಿಗೆ ಆಸೆ ಬಿದ್ದು ಪ್ರತಿ ಕಂತಿನ ಹಣವನ್ನು ಬಿಡುಗಡೆ ಮಾಡುವಾಗಲು ನೀಡಬೇಕಿದ್ದ ಮೊತ್ತಕ್ಕಿಂತ ಮೂವತ್ತು ಲಕ್ಷ ಅಧಿಕ ಹಣವನ್ನು ಬಿಡುಗಡೆ ಮಾಡಿಸಿದ್ದಾರೆ. ಈಗ ಅವರಿಗೆ ಮುಳುವಾಗಿರುವುದು ಇದೇ ಓವರ್ ಡೀಲ್. ಅವತ್ತು ಹೊಲಸನ್ನು ಹೊಟ್ಟೆಗಿಳಿಸಿಕೊಂಡು ತಿಪ್ಪೆ ಸಾರಿಸಲು ಹೊರಟವರು ಇಂದು ಜನರೆದುರಿಗೆ ಬೆತ್ತಲಾಗಿ ನಿಂತಿದ್ದಾರೆ.

ಅಂತೂಇಂತೂ ಬೆಳಕಿಗೆ ಬಂತು

ಬೆಂಗಳೂರಿನ ಅಷ್ಟೂ ಕರ್ಮಗಳ ನಡುವೆ ಇದೂ ಒಂದಾಗಿ ಮುಚ್ಚಿಹೋಗುವ ಹಾದಿಯಲ್ಲಿತ್ತು. ತಿಂದವರೆಲ್ಲ ಕೈ ಒರೆಸಿಕೊಂಡು ಗಡರ್ರ್ ಅಂತ ತೇಗಿ ಮನೆ ಕಡೆ ಮುಖಮಾಡಿಯೂ ಆಗಿತ್ತು. ಆದರೆ ಗ್ರಹಚಾರ ಅನ್ನೋದು ಕ್ವಾಲಿಟಿ ಕಂಟ್ರೋಲ್ ಅಂಡ್ ಆಡಿಟಿವ್ ಸೆಲ್ ರೂಪದಲ್ಲಿ ವಕ್ಕರಿಸಿಕೊಂಡಿದ್ದೆ ತಡ. ಅವ್ಯವಹಾರದ ಸೆರಗು ನೈಸ್ ರಸ್ತೆಯಷ್ಟೆ ಸಲೀಸಾಗಿ ಬಿಚ್ಚಿಕೊಂಡಿದೆ. ಕಾಮಗಾರಿಗೆಂದು ಬಿಡುಗಡೆಯಾದ ಆರು ಕಂತುಗಳಲ್ಲಿ ನಡುವಿನ ಎರಡು ಬಿಲ್‌ಗಳಲ್ಲಿದ್ದ ಅತಿ ಕಡಿಮೆ ವ್ಯತ್ಯಾಸ ಆಯೋಗದ ಕಣ್ಣು ಕುಕ್ಕಿದೆ. 900 ಮೀಟರ್ ಉದ್ದದ ರಸ್ತೆ ಅಗಲೀಕರಣ ಹಂತಕ್ಕೆ 98.5 ಲಕ್ಷ ಬಿಡುಗಡೆ ಮಾಡಲಾಗಿತ್ತಾದರೂ ನಂತರದ ಕೇವಲ 200 ಮೀಟರ್ ಉದ್ದದ ಕಾಮಗಾರಿಗೆ 98.75 ಲಕ್ಷ ಬಿಡುಗಡೆ ಮಾಡಲಾಗಿದೆ. ಅಂದರೆ 700 ಮೀಟರ್ ಅಂತರದ ಕಾಮಗಾರಿಯ ಬಿಲ್‌ಗಳ ನಡುವೆ ಇರುವ ವ್ಯತ್ಯಾಸ ಕೇವಲ ಎಪ್ಪತ್ತು ಸಾವಿರ ಮಾತ್ರ! ಅವತ್ತಿನ ಸಮಯಕ್ಕೇ ಲೆಕ್ಕಹಾಕುವುದಾದರೆ ಸುಮಾರಾದ ಮನೆಯೊಂದರ ಫೌಂಡೇಶನ್ ಹಾಕಲು ಸಹ ಆ ದುಡ್ಡು ಸಾಕಾಗದು. ಅಂತಿದ್ದ ಮೇಲೆ 700 ಮೀಟರ್ ರಸ್ತೆ ಪೂರ್ಣವಾಗಿಬಿಡುತ್ತಾ? ಅದೂಅಲ್ಲದೆ 900 ಮೀಟರ್ ಕಾಮಗಾರಿಗಿಂತ 200 ಮೀಟರ್ ಉದ್ದದ ರಸ್ತೆ ಅಗಲೀಕರಣಕ್ಕೇ ಹೆಚ್ಚು ಖರ್ಚಾಗುತ್ತಾ? ಎಂಬ ಅನುಮಾನಗಳು ಆಯೋಗದ ಅಂಗಳದಲ್ಲಿ ಗಿರಕಿ ಹೊಡೆದಿದ್ದೆ ತಡ ಸುದೀರ್ಘ ತನಿಖೆ ನಡೆಸಿ ವ್ಯವಸ್ಥಿತ ಹೊಲಸನ್ನು ಹೊರಗೆಳೆದು ಹಾಕಿದೆ.

ಲೋಕಾಯುಕ್ತ ಸಂತೋಷ್ ಹೆಗ್ಡೆ ಸಲ್ಲಿಸಿದ ಗಣಿ ವರದಿಯಷ್ಟೆ ಚೊಕ್ಕದಾದ ವರದಿಯೊಂದನ್ನು ಆಡಿಟ್ ಸೆಲ್ ಆಯೋಗ ಬಿಬಿಎಂಪಿಯ ವಿಶೇಷ ಆಯುಕ್ತ ಕೆ.ಆರ್.ನಿರಂಜನ್‌ರ ಕೈಗೊಪ್ಪಿಸಿದ್ದು ಮಾತ್ರವಲ್ಲದೆ ಪಾಲಿಕೆಗೆ ಲಾಸ್ ಮಾಡಿದ ಈ ಎಂಟು ತಿಮಿಂಗಿಲಗಳಿಂದಲೇ ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ ಒಂದು ಕೋಟಿ ಎಂಬತ್ತೈದು ಲಕ್ಷವನ್ನು ವಸೂಲು ಮಾಡಬೇಕೆಂಬ ಖಾರದ ಶಿಫಾರಸ್ಸನ್ನೂ ಮಾಡಿದೆ. ಹರಾಜಾದ ಬಿಬಿಎಂಪಿ ಮಾನವನ್ನು ಕೊಂಚವಾದರೂ ಕಾಪಾಡಿಕೊಳ್ಳುವ ಜರೂರತ್ತಿಗೆ ಬಿದ್ದ ಪಾಲಿಕೆ ಆಯುಕ್ತ ಸಿದ್ದಯ್ಯ ಸದ್ಯಕ್ಕೆ ಚೀಫ್ ಇಂಜಿನಿಯರ್ ಕೆ.ಟಿ. ನಾಗರಾಜ್, ಆಡಿಟ್ ಆಫೀಸರ್ ಶಶಿಧರ್ ಮುಂತಾದವರನ್ನು ಸಸ್ಪೆಂಡ್ ಮಾಡಿ ಬಿಸಾಕಿದ್ದಾರೆ. ಇನ್ನು ಈ ಪಾಟಿ ದಗಲ್ಬಾಜಿ ಮಾಡಿ ಕಳಪೆ ಕಂಟ್ರಾಕ್ಟರ್ ಮುನಿರತ್ನನ ವಿಷಯವಾಗಿ ಅದ್ಯಾವ ನಿರ್ಧಾರ ತೆಗೆದುಕೊಳ್ತಾರೋ ಗೊತ್ತಿಲ್ಲ.

ಇದು ಬಿಬಿಎಂಪಿ ಹಗರಣ-ಅವ್ಯವಹಾರಗಳ ಒಂದು ಸ್ಯಾಂಪಲ್ ಅಷ್ಟೆ. ಇಂತಹ ಲೆಕ್ಕವಿರದಷ್ಟು 'ಜೂಟಾಟ'ಗಳು ತೆರೆಮರೆಯಲ್ಲಿ ಬೊಕ್ಕಸವನ್ನು ಬರಿದಾಗಿಸುತ್ತಿವೆ. ಅಗತ್ಯಕ್ಕಿಂತ ಹೆಚ್ಚು ಅಭಿವೃದ್ಧಿ ಯೋಜನೆಗಳು ಜೀವ ತಾಳುತ್ತವಾದರೂ ನಿರೀಕ್ಷಿತ ಗುಣಮಟ್ಟವನ್ನು ತಲುಪುವ ಮುನ್ನವೆ ಅವೆಲ್ಲ ಸತ್ತು ಹೋಗಿರುತ್ತವೆ. ಅವ್ಯವಸ್ಥೆಯ ರಸ್ತೆಗಳತ್ತ ಕಣ್ಣೆತ್ತಿಯೂ ನೋಡದ ಪಾಲಿಕೆಯ ಮಂದಿ ನೀಟಾಗಿರುವ ರೋಡನ್ನು ವರ್ಷದಲ್ಲಿ ಎರಡೆರಡು ಬಾರಿ ಕಷ್ಟಪಟ್ಟು ಕಿತ್ತು ಟಾರ್ ಸವರುವ ಪ್ರಹಸನ ಬೆಂಗಳೂರಿಗರಿಗಂತೂ ತೀರಾ ಸಾಮಾನ್ಯವಾಗಿದೆ. ಅಂದಹಾಗೆ ಈಗ ಸೀಜ್ ಆಗಿರುವ ಎಂಟು ನುಂಗಣ್ಣಂದಿರು ದಂಡ ಪೀಕುವ ಮುನ್ನವೆ ಎತ್ತಿಂದಲಾದರೂ ಪ್ರಭಾವಿ ಭ್ರಷ್ಟ ಬಿಸಿಗಾಳಿ ಬೀಸಿ ಎಲ್ಲವನ್ನು ತಣ್ಣಗೆ ಮಾಡಿಬಿಡುವ ಸಾಧ್ಯತೆಯನ್ನು ಇವತ್ತಿನ ಮಟ್ಟಿಗೆ ತಳ್ಳಿಹಾಕುವಂತಿಲ್ಲ. ❦

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿ ಅಧಿಕಾರಿ ಯಾವೊಬ್ಬ ರಾಜಕಾರಣಿಗೂ ಕಡಿಮೆ ಇಲ್ಲದಂತೆ ಜೇಬಿಗಿಳಿಸಿಕೊಳ್ಳುವ ರೇಸ್‌ನಲ್ಲಿದ್ದಾರೆ. ಅದರಲ್ಲೂ ಪಾಲಿಕೆಯ ಮೇಲೆ ಬಿಜೆಪಿ ಪತಾಕೆ ಹಾರಿದಾಗಿನಿಂದಂತೂ ಹಗರಣ, ಭ್ರಷ್ಟತೆಗಳು ಮೆಟ್ಟಿಲಿನ ಮೇಲೆಯೇ ಬಂದವರನ್ನು ಸ್ವಾಗತಿಸುತ್ತಿವೆ. ಜನರ ಹಿಡಿ ಶಾಪವನ್ನು ಸುಮ್ಮನೆ ಕೊಡವಿಕೊಂಡು ಓಡಾಡುವ ಸರ್ಕಾರ ಮತ್ತು ಆಡಳಿತಕ್ಕೆ ಕನಿಷ್ಠ ಪ್ರಜ್ಞೆಯೂ ಇದ್ದಂತೆ ಕಾಣುತ್ತಿಲ್ಲ. ಪಾಲಿಕೆಯ ಕಟ್ಟಡವೀಗ ಷೇರು ಮಾರುಕಟ್ಟೆಯಾಗಿ ಬದಲಾಗಿದೆ ಎನ್ನುವುದಕ್ಕೆ ಅಧಿಕಾರಿಗಳ ನೇಮಕಾತಿಯೇ ಸಾಕ್ಷಿ. ಅಲ್ಲಿರುವ ಬಹಳಷ್ಟು ಅಧಿಕಾರಿಗಳು ಡೆಪ್ಯುಟೇಷನ್ ಆಧಿಯಲ್ಲಿ ಬೇರೆ ಇಲಾಖೆಯಿಂದ ಇಲ್ಲಿಗೆ ವರ್ಗವಾದಂತವರು. ಆಲ್‌ಮೋಸ್ಟ್ ಅವರೆಲ್ಲ ಪೊಲಿಟಿಕಲ್ ಬಾಲಬಡುಕರು. ಇದರಲ್ಲಿ 68 ಜನರನ್ನು ಅವರ ಕಾಣದ ಕೈಗಳು ಅವರ ತಲೆಯ ಮೇಲೆ ಅಭಯಹಸ್ತವನ್ನು ಬೀರುತ್ತಿವೆ. ಮೂಲ ಸಂಸ್ಥೆಗಳಿಗೆ ಮೂರು ಮೂರು ಬಾರಿ ವರ್ಗ ಮಾಡಲಾಗಿದೆಯಾದರೂ ಜಪ್ಪಯ್ಯ ಅನ್ನದೆ ಅಲ್ಲೆ ಠಿಕಾಣಿ ಹೂಡಿದ್ದಾರೆ. ಈಗ ಜಕಮ್ ಆಗಿರುವ ಎಂಟು ಬಾಡಿಗಳೂ ಸಹ ಅಂತಹ ಕೃಪಾಶೀರ್ವಾದದಲ್ಲೆ ಮೆಯ್ದಂತವರು ಎಂಬುದರಲ್ಲಿ ಅನುಮಾನವೇ ಇಲ್ಲ.


ಇನ್ನು ಬಿಬಿಎಂಪಿ ನಡೆಸುವ ಕಾಮಗಾರಿಗಳ ಗುಣಮಟ್ಟ ನಯಾಪೈಸೆಗೂ ಬೇಡ. ಪಾಲಿಕೆಯ ಯೋಜನೆಗಳ ಗುಣಮಟ್ಟ ಪರಿಶೀಲಿಸಿದ ಕ್ವಾಲಿಟಿ ಕಂಟ್ರೋಲ್ ನಾಗರಿಕ ಸಮಿತಿಯ ಅಭಿಪ್ರಾಯದಂತೆ 2010-11ನೇ ಸಾಲಿನ ಬಿಬಿಎಂಪಿಯ ಕಾಮಗಾರಿಗಳಲ್ಲಿ ಕೇವಲ ಶೇ. 17ರಷ್ಟು ಮಾತ್ರ ಓ.ಕೆ ಅನ್ನಿಸಿಕೊಂಡಿವೆಯಂತೆ ಇನ್ನುಳಿದಂತೆ ಶೇ.83ರಷ್ಟು ಕಾಮಗಾರಿಗಳು ಕನಿಷ್ಠ ಗುಣಮಟ್ಟವನ್ನೂ ಹೊಂದಿಲ್ಲ. 2011-12ರ ಪ್ರಸಕ್ತ ಸಾಲಿನ ಜೂನ್ ಅಂತ್ಯದವರೆಗೆ ಒಟ್ಟು 138 ಕಾಮಗಾರಿಗಳು ನಡೆದಿದ್ದು ಅವುಗಳಲ್ಲಿ ಜಸ್ಟ್ 23 ಮಾತ್ರ ಉತ್ತಮ ಗುಣಮಟ್ಟದವು ಅನ್ನೋ ಸರ್ಟಿಫಿಕೇಟ್ ಪಡೆದಿವೆಯಂತೆ. ಇದೆಲ್ಲ ಪಾಲಿಕೆಗೆ ತಿಳಿದಿಲ್ಲವೆಂದಲ್ಲ ಆದರೂ ಅದರ ಗಬ್‌ಚಿಪ್ ತಂತ್ರವನ್ನು ಕೆದಕ ಹೊರಟರೆ ಕಾಂಟ್ರ್ಯಾಕ್ಟರುಗಳು, ಅಧಿಕಾರಿಗಳು ಹಾಗೂ ಆಡಳಿತ ವರ್ಗದವರುಗಳ ನಡುವೆ ಏರ್ಪಟ್ಟಿರಬಹುದಾದ ಪಾಲುದಾರಿಕೆಯ ರಹಸ್ಯ ಅಗ್ರಿಮೆಂಟ್‌ನ ವಾಸನೆ ಮೂಗಿಗೆ ರಾಚುತ್ತಾ ಹೋಗುತ್ತದೆ. ❦

ಬಿದ್ದ ರಾಶಿ ಹೆಣಕ್ಕೆ ಮತ್ತೆ ಮತ್ತೆ ಇರಿದರು, ಒದ್ದರು...!



ಯರಾಕೋಟೆಯ ನರಶಿಕಾರಿ





ಬಿದ್ದಹೆಣಗಳ ಮೇಲೆ ಸೈಜುಗಲ್ಲೆತ್ತಿ ಹಾಕಿದರು

• ರಾ.ಸೋಮನಾಥ್

ಅಯ್ಯೋ... ದೇವುಡಾ ನಾ ಮೊಗಡು ಏಮಿ ತಪ್ಪು ಚೇಸಿನಾಡನಿ ಈ ಶಿಕ್ಷ...? (ಅಯ್ಯೋ ದೇವರೇ ನನ್ನ ಗಂಡ ಏನು ತಪ್ಪು ಮಾಡ್ದ ಅಂತ ಈ ಶಿಕ್ಷೆ?)

ಎದೆಎದೆ ಬಡಿದುಕೊಂಡು ಗೋಳಾಡುತ್ತಿದ್ದ ಆ ಹೆಂಗಸಿನ ಆಕ್ರಂದನ ಎಂಥ ಕಲ್ಲು ಮನಸ್ಸನ್ನೂ ಕರಗಿಸುವಂತಿತ್ತು. ಒಂದು ಡಜನ್ ಹೆಂಗಸರು. ಅಷ್ಟೇ ಸಂಖ್ಯೆಯ ಗಂಡಸರು ಮತ್ತು ಪುಟ್ಟಪುಟ್ಟ ಮಕ್ಕಳು ಈ ದಿನ ಅಂದರೆ ಆಗಸ್ಟ್ 3ರ ಬುಧವಾರ ಬೆಳಗ್ಗೆ ಚಿಂತಾಮಣಿಯ ಸರ್ಕಾರಿ ಆಸ್ಪತ್ರೆಯ ಶವಾಗಾರದ ಮುಂದೆ ರೋದಿಸುತ್ತಿದ್ದ ದೃಶ್ಯ ನಿಜಕ್ಕೂ ರೌರವ. ನಾ ಬಿಡ್ಡ... ಅಂದರೆ ನನ್ನ ಮಗ ಎಂದು ಗೋಳಾಡುತ್ತಿದ್ದವಳೊಬ್ಬಳು, ನಾ ಮೊಗುಡು ಎಂದು ಗೋಡೆಗೆ ತಲೆಚಚ್ಚಿಕೊಳ್ಳುತ್ತಿದ್ದವಳೊಬ್ಬಳು, ಅನ್ನಯ್ಯಾ ಎಂದು ಚೀರಾಡುತ್ತಿದ್ದೊಬ್ಬಾಕೆ, ಪ್ರಳಯವೇ ನಡೆದುಹೋದಂತೆ ಕಿರುಚಾಡುತ್ತಿದ್ದ ಮಕ್ಕಳು.

ಚಿಂತಾಮಣಿಯ ಸರ್ಕಾರಿ ಆಸ್ಪತ್ರೆಯ ಶವಾಗಾರ ಆ ಒಂಬತ್ತು ಹೆಣಗಳಿಂದ ತುಂಬಿ ಹೋಗಿತ್ತು. ಕೋಲಾರದ ಆಸ್ಪತ್ರೆಯಲ್ಲಿ ಸತ್ತ ಮತ್ತೊಬ್ಬನ ಹೆಣವನ್ನೂ ಚಿಂತಾಮಣಿ ಆಸ್ಪತ್ರೆಗೆ ತಂದ ನಂತರ ಸತ್ತವರ ಸಂಖ್ಯೆ ಹತ್ತಾಗಿತ್ತು. ಉಳಿದ ಒಬ್ಬನೇ ಒಬ್ಬ ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲಾಗಿ ಕೋಮಾದಲ್ಲಿದ್ದಾನೆ. ಬಹುಶಃ ಈತ ಕೂಡ ಬದುಕುಳಿಯುವುದು ಕಷ್ಟ.

ಬಂದ 11 ಮಂದಿಯ ಪೈಕಿ ಹತ್ತು ಮಂದಿಯನ್ನು ಗ್ರಾಮಸ್ಥರು ಕೊಂದುಹಾಕಿದ್ದಾರೆ. ತಾವು ಕೊಲ್ಲುತ್ತಿರುವುದು ಯಾರನ್ನು? ಕೊಲ್ಲುತ್ತಿರುವುದು ಯಾತಕ್ಕೆ? ಅಷ್ಟಕ್ಕೂ ಕೊಲೆಯಾದವರು ಮಾಡಿದ ತಪ್ಪೇನು? ಇತ್ಯಾದಿ ಏನೊಂದೂ ಕೊಂದು ಹಾಕಿದ ಜನಕ್ಕೆ ಗೊತ್ತಿರಲಿಲ್ಲ, ತಾವೇನು ಮಾಡುತ್ತಿದ್ದೇವೆಂಬ ಕನಿಷ್ಠ ಪರಿವೆ ಕೂಡ ಇರದ ಆ ಎರಡು ಸಾವಿರ ಮಂದಿಯ ಪೈಕಿ ಒಬ್ಬನೇ ಒಬ್ಬ ಮನುಷ್ಯ ನಿರಲಿಲ್ಲವೇ? ಕೊಲ್ಲುವ ಅಧಿಕಾರ ನಮಗಿಲ್ಲ ಎಂಬುದು ಅವರಿಗೆ ಗೊತ್ತೇ ಇರಲಿಲ್ಲವೇ? ಒದೆ ತಿನ್ನುತ್ತಿದ್ದವರ ಗೋಳಾಟ, ಹರಿದ ರಕ್ತ, ಕಣ್ಣೆದುರೇ ಗಾಯಗೊಂಡು ಕುಸಿಯುತ್ತಿದ್ದ ದಾರುಣ ಯಾವುದೂ ಅವರನ್ನು ಕಲಕಲಿಲ್ಲವೇ?

ಮೊದಲ ಮೂವರು

ನೆರೆದ ಸಾವಿರಾರು ಜನ ಅಕ್ಷರಶಃ ಪಿಶಾಚಿಗಳಂತಾಗಿ ಹೋಗಿದ್ದರು. ಧಾವಿಸಿ ಬಂದ ಪೊಲೀಸರು ಹೊಡೆಯುತ್ತಿದ್ದವರನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದರು. ಬ್ಯಾಡ್ರಪ್ಪಾ ಬಿಟ್ಟು ಬಿಡಿ. ಅವರನ್ನು ಜೈಲಿಗೆ ಹಾಕೋದಕ್ಕೆ ನಾವಿಲ್ಲವಾ? ಹೊಡೆದದ್ದು ಸಾಕು ಬಿಟ್ಟುಬಿಡಿ. ಊಹ್ಞೂಂ ಪೊಲೀಸರ ಎಚ್ಚರಿಕೆ, ಕೋರಿಕೆಗೂ ಅವರು ತಲೆಕೊಡಲಿಲ್ಲ, ಯುವಕನೊಬ್ಬ ಸೈಜುಗಲ್ಲನ್ನು ಎತ್ತಿದ್ದೇ ಕೈಮುಗಿದು ಬೇಡಿಕೊಳ್ಳುತ್ತಿದ್ದ ಆ ಹುಡುಗನ ತಲೆಮೇಲೆ ಕುಕ್ಕಿಬಿಟ್ಟ. ಒಂದೆಡೆ ಬಚ್ಚವಾರ್ಲಪಲ್ಲಿ ಕ್ರಾಸ್‌ನಿಂದ ಟ್ರಾಕ್ಟರಿಗೆ ಹಾಕಿ ತಂದಿದ್ದ ಐದು ದೇಹಗಳ ಪೈಕಿ ಆದಾಗಲೇ ಮೂರು ಮಂದಿ ಹೆಣವಾಗಿದ್ದರು. ಉಸಿರಾಡುತ್ತಿದ್ದ ಇಬ್ಬರನ್ನು ಕೋಲಾರದ ದೇವರಾಜ ಅರಸು ಆಸ್ಪತ್ರೆಗೆ ಸಾಗಿಸುವುದಕ್ಕೆ ಪೊಲೀಸರು ಪರದಾಡುತ್ತಿದ್ದರೆ ಇತ್ತ ಯರಾಕೋಟಾದಲ್ಲಿ ಎರಡು ಸಾವಿರ ಮಂದಿ ಗ್ರಾಮಸ್ಥರು ಜಮಾಯಿಸಿದ್ದೇ ಕೈಗೆ ಸಿಕ್ಕ ಆ ಆರೂ ಜನರನ್ನು ಕಂಬಕ್ಕೆ ಕಟ್ಟಿಹಾಕಿದ್ದರು.

ಅದು ಎಂಥಾ ಪೈಶಾಚಿಕತೆಯೆಂದರೆ ನೆರೆದ ಎರಡು ಸಾವಿರಕ್ಕೂ ಅಧಿಕ ಜನ ಪೊಲೀಸರ ಕಣ್ಣೆದುರೇ ಸಿಕ್ಕಿಬಿದ್ದವರ ಸುಮೋ ಗಾಡಿಗೆ ಬೆಂಕಿಯಿಟ್ಟರು. ಈ ನನ್ ಮಕ್ಕಳನ್ನು ಕೊಚ್ಚಿಹಾಕಬೇಕು, ಯಾವುದೇ ಕಾರಣಕ್ಕೂ ಪೊಲೀಸರಿಗೆ ಕೊಡಬೇಡಿ, ಪೊಲೀಸ್ರು ಕರಕೊಂಡು ಹೋಗಿ ಲಂಚ ತಿಂದು ಮತ್ತೆ ಬಿಟ್ಟುಕಳಿಸ್ತಾರೆ. ಸಾಯ್ಹಿಸ್ರೋ ಈ ನನ್ ಮಕ್ಕಳನ್ನು... ಎಂದು ಒಬ್ಬ ಗ್ರಾಮಸ್ಥ ದೊಣ್ಣೆಯಿಂದ ಕಟ್ಟಿಹಾಕಿದವರನ್ನು ಹಿಗ್ಗಾಮುಗ್ಗಾ ಹೊಡೆಯುತ್ತಿದ್ದ. ನೂರಾರು ಮಂದಿಯ ಕೈಯಲ್ಲಿ ಕಲ್ಲು ದೊಣ್ಣೆಗಳಿದ್ದವು. ಸಿಕ್ಕಿಬಿದ್ದವರ ನರಳಿಕೆ, ಚೀರಾಟ ಮುಗಿಲು ಮುಟ್ಟಿತ್ತು, ಹೊಡೆಯುತ್ತಿದ್ದ ಜನಕ್ಕೆ ಅದೆಂಥದ್ದೋ ಸನ್ನಿ, ಒಬ್ಬ ಹಾರೆ ತಂದಿದ್ದೇ ಗಟ್ಟುಮುಟ್ಟಾಗಿದ್ದ ಸೆರೆಯಾಳಿನ ಹೊಟ್ಟೆಗೆ ತಿವಿದೇ ಬಿಟ್ಟ.

ಕೆಲವೇ ಕ್ಷಣದಲ್ಲಿ ಹೊಡೆತದ ಹಿಂಸೆಗೆ ಸಿಲುಕಿದ ಆರೂ ಜನ ಪ್ರಜ್ಞೆತಪ್ಪಿಬಿದ್ದಾಗಿತ್ತು, ಎಲ್ಲರ ತಲೆಯನ್ನೂ ದೊಣ್ಣೆ ಕಲ್ಲುಗಳಿಂದ ಒಡೆಯಲಾಗಿತ್ತು, ಹಾಗೇ ರಕ್ತಸಿಕ್ತರಾಗಿ ನೆಲಕ್ಕೆ ಕುಸಿದಿದ್ದ ಯಾರೊಬ್ಬರ ಮೇಲೂ ಬಟ್ಟೆಯಿರಲಿಲ್ಲ, ಕಟ್ಟಿಹಾಕುವ ಮೊದಲೇ ಅವರನ್ನು ವಿವಸ್ತ್ರಗೊಳಿಸಲಾಗಿತ್ತು, ಅಂಡರ್‌ವೇರ್ ಬಿಟ್ಟರೆ ಅವರ ಮೇಲೆ ಮತ್ತೊಂದು ಬಟ್ಟೆಯಿರಲಿಲ್ಲ, ಬಿದ್ದ ಒದೆಗೆ ಆರೂ ಮಂದಿ ಪ್ರಜ್ಞೆ ತಪ್ಪಿದ್ದು ಗೊತ್ತಾಗಿದ್ದೇ ಅವರ ಕಟ್ಟನ್ನು ಬಿಡಿಸಿ ಸತ್ತ ಪ್ರಾಣಿಗಳನ್ನು ಒಂದರ ಮೇಲೊಂದು ಎಸೆಯುವಂತೆ ಅವರನ್ನು ಎಸೆಯಲಾಗಿತ್ತು, ಒಬ್ಬರ ಮೇಲೊಬ್ಬರನ್ನು ಅಂಗಾತ ಮಲಗಿಸಲಾಗಿತ್ತು.

ಬಿದ್ದ ಹೆಣಕ್ಕೆ ತಿವಿದರು

ಕ್ರೌರ್ಯ ಹೇಗಿತ್ತೆಂದರೆ ಪ್ರಜ್ಞಾಹೀನರಾಗಿ ಬಿದ್ದಿದ್ದ ಅವರನ್ನು ಗ್ರಾಮಸ್ಥರು ಒದ್ದುಒದ್ದು ಖುಷಿಪಡುತ್ತಿದ್ದರು. ಸತ್ತಿದ್ದಾರೆಂದು ಗೊತ್ತಾದ ಮೇಲೂ ದೊಣ್ಣೆಯಿಂದ ಹೆಣಕ್ಕೆ ಬಡಿಯುತ್ತಿದ್ದರು. ಕೆಲವರು ಬಿದ್ದವರ ಹೆಣದ ಮೇಲೆ ಥೂ ಎಂದು ಉಗಿದು ಶಾಪಹಾಕುತ್ತಿದ್ದರು. ಇಬ್ಬರನ್ನು ಮಚ್ಚಿನಿಂದ ಕಡಿಯಲಾಗಿತ್ತು, ಬಿದ್ದ ಹೆಣಗಳನ್ನು ಮತ್ತೆ ಮತ್ತೆ ಹಾರೆಯಿಂದ ತಿವಿಯುತ್ತಿದ್ದರು. ದೊಣ್ಣೆಯಿಂದ ಪದೇಪದೇ ಬಡಿಯುತ್ತಿದ್ದರು. ಕೆಲವೇ ಕ್ಷಣಗಳಲ್ಲಿ ಆರೂ ಮಂದಿ ಹೆಣವಾಗಿಬಿಟ್ಟರು.

ಬಚ್ಚವಾರ್ಲಪಲ್ಲಿ ಕ್ರಾಸ್‌ನಿಂದ ಟ್ರಾಕ್ಟರ್‌ನಲ್ಲಿ ತಂದಿದ್ದ ಮೂರು ನಗ್ನ ಶವಗಳ ಜೊತೆಗೆ ಯರಾಕೋಟಾದ ಈ ಆರೂ ಹೆಣಗಳನ್ನು ಮತ್ತೆ ಟ್ರಾಕ್ಟರಿಗೆ ತುಂಬಲಾಯ್ತು. ಪೊಲೀಸರು ಬಿದ್ದಿದ್ದ ರಕ್ತಸಿಕ್ತ ದೇಹಗಳನ್ನು ಒಂದೊಂದಾಗಿ ಟ್ರಾಕ್ಟರಿಗೆ ತುಂಬುತ್ತಿದ್ದ ದೃಶ್ಯವೇ ಭೀಭತ್ಸ ಮತ್ತು ಭಯಾನಕ. ಸಂಜೆಯಾದರೂ ನೆರೆದ ಜನಜಂಗುಳಿ ಕರಗಲಿಲ್ಲ, ಆ ಹೊತ್ತಿಗಾಗಲೇ ಒಂದು ಡಜನ್ ಪೊಲೀಸರು ಸ್ಥಳಕ್ಕಾಗಮಿಸಿದ್ದರು. ಸತ್ತವರೆಲ್ಲರೂ ಯುವಕರು. ಗಟ್ಟಿಮುಟ್ಟಾಗಿದ್ದರು. ಆರೋಗ್ಯವಂತರು. ತಾವು ಕೊಂದು ಹಾಕಿದ ಈ ಹತ್ತೂ ಮಂದಿ ದಕಾಯಿತರಲ್ಲ; ಕಳ್ಳರೂ ಅಲ್ಲ; ಯಃಕಶ್ಚಿತ್ ನಕಲಿ ಚಿನ್ನ ಕೊಟ್ಟು ಯಾರನ್ನೋ ಯಾಮಾರಿಸಲೆಂದು ಬಂದಿದ್ದ ಆಂಧ್ರದ ಸಾಧಾರಣ ಮಟ್ಟದ ವಂಚಕರೆಂಬುದು ಕೊಂದು ಹಾಕಿದ ಆ ಗ್ರಾಮಸ್ಥರಿಗೆಲ್ಲಿ ಗೊತ್ತಿತ್ತು?



ಆಸ್ಪತ್ರೆಯೆದುರು ಆಕ್ರಂದನ

ಆಗಸ್ಟ್ 3ರ ಮಂಗಳವಾರದ ಆ ಸಂಜೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಬಾರ್ಲಹಳ್ಳಿ,ಬಚ್ಚವಾರಹಳ್ಳಿ ಕ್ರಾಸ್ ಮತ್ತು ಯರಾಕೋಟಾ ಗ್ರಾಮಗಳ ಪಾಲಿಗೆ ನರಶಿಕಾರಿಯ ದಿನವಾಗಿತ್ತು, ಕರ್ನಾಟಕ ಎಂತೆಂಥದ್ದೋ ನರಮೇಧಗಳನ್ನು ಕಂಡಿದೆ. ಕಂಬಾಲಪಲ್ಲಿ, ಬಿಲ್ಲಾಂಡ್ಲಹಳ್ಳಿ, ಬದನವಾಳು ಹೀಗೆ ಇತಿಹಾಸದ ಪುಟ ಸೇರಿದ ಯಾವೊಂದು ಹತ್ಯಾಕಾಂಡವೂ ಮಂಗಳವಾರದ ಈ ನರಬೇಟೆಗೆ ಸಮನಲ್ಲ, ಮಿಕ್ಕೆಲ್ಲ ಹತ್ಯಾಕಾಂಡಕ್ಕೊಂದು ಕಾರಣವಿರುತ್ತದೆ. ಅಲ್ಲಿ ಹತ್ತಾರು ವರ್ಷದ ದುಷ್ಮನಿ, ವೈಷಮ್ಯ ಜಿದ್ದಾಜಿದ್ದಿ ಹೆಪ್ಪುಗಟ್ಟಿರುತ್ತದೆ. ಕೊಂದವರಿಗೆ ತಾವು ಕೊಲ್ಲುತ್ತಿರುವುದು ಯಾರನ್ನ ಮತ್ತು ಯಾಕೆ ಎಂಬುದು ಗೊತ್ತಿರುತ್ತದೆ.

ತಾವು ನಡೆಸಿದ ಕ್ರೌರ್ಯಕ್ಕೆ ಅವರದೇ ಆದ ಸಮರ್ಥನೆ, ಕಾರಣ, ಉದ್ದೇಶವಿರುತ್ತದೆ. ಮಾಡಿದ ಕೃತ್ಯದ ಸಾಧಕ ಬಾಧಕದ ಪರಿವೆಯಿದ್ದೇ ಮಾಡಿರುತ್ತಾರೆ. ಆದರೆ ಚಿಂತಾಮಣಿಯ ನರಮೇಧಕ್ಕೆ ಕಾರಣವೇ ಇಲ್ಲ, ತಾವು ಕೊಲ್ಲುತ್ತಿರುವುದು ಯಾರನ್ನ ಎಂಬುದೇ ಕೊಂದವರಿಗೆ ಗೊತ್ತಿಲ್ಲ, ಕೊಲೆಯಾದವರಿಗೂ ಕೊಂದವರಿಗೂ ದುಷ್ಮನಿ, ವೈಷಮ್ಯ, ಪರಿಚಯವೇ ಇರಲಿಲ್ಲ!

ತಾಮ್ರದ ಚೊಂಬು!

ಅದು ಆಂಧ್ರದ ಗಡಿಯ ಚಿಂತಾಮಣಿ, ಶಿಡ್ಲಘಟ್ಟ, ಮುಳಬಾಗಿಲು ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಆ ಕಾಲದಿಂದಲೂ ಹೆಪ್ಪುಗಟ್ಟಿದ ಗ್ರಾಮಸ್ಥರ ಅವ್ಯಕ್ತ ಆಕ್ರೋಶವೊಂದರ ಪರಿಣಾಮ ಮಾತ್ರ. ಹಿಂದಿನಿಂದಲೂ ಈ ಭಾಗದಲ್ಲಿ ಆಂಧ್ರದ ನಟೋರಿಯಸ್ ಎರಕುಲ ದಕಾಯಿತರ ಹಾವಳಿಯಿತ್ತು, ಜೊತೆಗೆ ಅವ್ಯಾಹತ ಮೌಢ್ಯವೊಂದು ಕಳೆದೊಂದು ದಶಕದಿಂದ ಈ ಭಾಗದಲ್ಲಿ ಚಾಲ್ತಿಗೆ ಬಂದಿತ್ತು, ಅದು ನಿಧಿಯ ಹುಚ್ಚು, ನಿಧಿ ಸಿಕ್ಕಿದೆಯೆಂದೂ, ಅದು ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದೆಂದೂ, ಅದಕ್ಕೆ ವಿದೇಶದಲ್ಲಿ ಸಿಕ್ಕಾಪಟ್ಟೆ ಬೆಲೆಯಿದೆಯೆಂದೂ ನಕಲಿ ನಾಣ್ಯಗಳನ್ನು ಸೃಷ್ಟಿಸಿ ವಂಚಿಸುವ ವಿವಿಧ ಗ್ಯಾಂಗುಗಳು ಈ ಭಾಗದಲ್ಲಿ ಓಡಾಡಲಾರಂಭಿಸಿದವು.

ಇದಕ್ಕೆ ಪೂರಕವೆಂಬಂತೆ ದೈವಿಕ ಶಕ್ತಿಯ ತಾಮ್ರದ ಚೊಂಬಿನ ಕತೆ ಹುಟ್ಟಿಕೊಂಡಿತು. ಯಾರೋ ಮಂತ್ರವಾದಿಯ ಬಳಿಯಿದ್ದ ಚೊಂಬಿಗೆ ವಿದೇಶದಲ್ಲಿ ಯಾರೋ ಕೋಟಿಗಟ್ಟಲೇ ರೊಕ್ಕ ಕೊಡುತ್ತಾರಂತೆ, ಅದು ಅಕ್ಕಿಯನ್ನು ಆಯಸ್ಕಾಂತದಂತೆ ಆಕರ್ಷಿಸುತ್ತದೆಯಂತೆ. ಅದಕ್ಕೆ ಎಷ್ಟು ಬೇಕಾದರೂ ದುಡ್ಡು ಕೊಡ್ತೀವಿ ಎಂದು ಒಂದು ಗ್ಯಾಂಗ್ ಪುಕಾರೆಬ್ಬಿಸಿದರೆ, ಮತ್ತೊಂದು ಗ್ಯಾಂಗ್ ತಮ್ಮ ಬಳಿ ಆ ತರದ ಚೊಂಬಿದೆ ಎಷ್ಟು ಕೊಡ್ತೀರಾ ಎಂದು ಗ್ರಾಮಸ್ಥರನ್ನು ಯಾಮಾರಿಸುತ್ತಿತ್ತು, ಜೊತೆಗೆ ಸರ್ಪಮಣಿಯ ಕತೆ, ಇಂದಿರಾ ಗಾಂಧಿ ಕಾಯಿನ್, ಕಪ್ಪುಬೆಕ್ಕು ಇತ್ಯಾದಿ ಕತೆಗಳು ಹುಟ್ಟಿಕೊಂಡವು. ಇಂದಿರಾ ಗಾಂಧಿಯ ಮುಖವಿರುವ ನಾಣ್ಯಕ್ಕೆ ಎಷ್ಟೋ ಕೋಟಿ, ಅಪೂರ್ವ ಸರ್ಪಮಣಿ ನಡುರಾತ್ರಿಯಲ್ಲೂ ಪ್ರಕಾಶಮಾನವಾಗಿ ಮಿಂಚುವುದು, ಅದಕ್ಕೆ ಎಷ್ಟೋ ಕೋಟಿ ಬೆಲೆ, ಕಪ್ಪುಬಣ್ಣದ ದೈತ್ಯ ಬೆಕ್ಕಿಗೆ ಕೇರಳದ ಯಾರೋ ಕುಬೇರ ಐವತ್ತು ಕೋಟಿ ಕೊಡುತ್ತಾನಂತೆ ಇತ್ಯಾದಿ ವದಂತಿಗಳು ಈ ಭಾಗದಲ್ಲಿ ಹುಟ್ಟಿಕೊಂಡವು.

ಯಾರೋ ಕೃಷ್ಣದೇವರಾಯನ ಕಾಲದ ನಾಣ್ಯ ಕೊಡುತ್ತಾರೆಂದೋ, ಮಾಯಾಶಕ್ತಿಯ ತಾಮ್ರದ ಚೊಂಬಿಗಾಗಿ ಇನ್ನಾರೋ ಲಕ್ಷಗಟ್ಟಲೇ ಬೋಳಿಸಿಕೊಂಡಿದ್ದೋ, ಗುಪ್ತನಿಧಿಗಾಗಿ ಮತ್ತಾರೋ ಮೋಸ ಹೋಗಿದ್ದೋ, ಇಂದಿರಾ ಗಾಂಧಿ ನಾಣ್ಯಕ್ಕಾಗಿ ಎಷ್ಟೋ ಲಕ್ಷ ಕಳೆದು ಮೋಸ ಹೋಗಿದ್ದೋ ಈ ಭಾಗದಲ್ಲಿ ದಂತಕತೆಗಳಂತೆ ಹರಿದಾಡುತ್ತಿತ್ತು.

ಇವೆಲ್ಲವೂ ಕಳೆದೆರಡು ದಶಕದ ಕತೆಯಾದರೆ ಇತ್ತೀಚೆಗೆ ಶುರುವಾಗಿದ್ದು ಕಳ್ಳರ ಕಾಟ. ತೋಟಕ್ಕೆ ಹೋಗುತ್ತಿದ್ದ ಒಂಟಿ ಮಹಿಳೆಯರನ್ನು ಅಡ್ಡಗಟ್ಟಿ ಅವರ ಒಡವೆ ದೋಚುವುದು, ನಡೆದುಹೋಗುತ್ತಿದ್ದ ಹೆಂಗಸರನ್ನು ಹಿಂಸಿಸಿ ತಾಳಿ ಕಿತ್ತೊಯ್ಯುವುದು, ಹಾಡುಹಗಲೇ ಮನೆಗೆ ನುಗ್ಗಿ ದಕಾಯಿತಿ ನಡೆಸುವುದು ಈ ಭಾಗದಲ್ಲಿ ವಿಪರೀತವಾಗಿತ್ತು, ಚಿಂತಾಮಣಿ, ಚಿಕ್ಕಾಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ, ಮುಳಬಾಗಿಲು, ದೇವನಹಳ್ಳಿ ಭಾಗದಲ್ಲಿ ಕಳೆದ ಆರು ತಿಂಗಳಲ್ಲಿ ಅನಾಹುತಕಾರಿ ರಾಬರಿ, ದಕಾಯಿತಿಗಳಾದವು. ಚಿಕ್ಕಾಬಳ್ಳಾಪುರದ ಹೊಸೆಗಲ್ ಬಳಿ ಹಾಡುಹಗಲೇ ಮನೆಯೊಂದಕ್ಕೆ ನುಗ್ಗಿ 15 ಲಕ್ಷ ರೂಪಾಯಿಗಳ ದಕಾಯಿತಿ ನಡೆಸಲಾಯಿತು. ಯಲವಹಳ್ಳಿಯಲ್ಲಿ ನಡೆದ 30 ಲಕ್ಷ ರೂ.ಗಳ ದರೋಡೆ, ಮೀಜಗಾನಹಳ್ಳಿಯಲ್ಲಿ ನಡೆದ ಚಿನ್ನಾಭರಣ ಲೂಟಿ, ಚಿಕ್ಕಾಬಳ್ಳಾಪುರ ನಗರದಲ್ಲೇ ಜ್ಯುವೆಲ್ಲರಿಯೊಂದಕ್ಕೆ ಕನ್ನಹಾಕಿ 4 ಲಕ್ಷ ದೋಚಿದ್ದು ಒಂದೆಡೆಯಾದರೆ ಮತ್ತೊಂದೆಡೆ ಚಿಂತಾಮಣಿಯಲ್ಲೇ ಒಂದರಮೇಲೊಂದು ರಾಬರಿ, ದಕಾಯಿತಿಗಳಾದವು.

ರೋಸತ್ತ ಗ್ರಾಮಸ್ಥರು

ಮುದ್ದಲಹಳ್ಳಿಯಲ್ಲಿ ಹಾಡುಹಗಲೇ ಗರ್ಭಿಣಿ ಹೆಂಗಸಿನ ತಾಳಿ ಕಿತ್ತೊಯ್ದರು, ವಿರೂಪಾಕ್ಷಪುರದ ಹೊಲದಲ್ಲಿ ಕಳೆಕೀಳುತ್ತಿದ್ದ ಹೆಂಗಸೊಬ್ಬಳನ್ನು ಹೊಡೆದು ಆಕೆಯ ತಾಳಿ ಕಿತ್ತೊಯ್ದರು, ಕೋಟಗಲ್ ಬಳಿ ಹೊಲದಲ್ಲಿ ಕೆಲಸ

ಕಳ್ಳರ ರಾಜ್ಯದಲ್ಲಿ ಪೊಲೀಸರ್ಯಾರು ಮಂತ್ರಿಗಳ್ಯಾರು?

ಆಗಸ್ಟ್ 3 ರ ಬುಧವಾರ ಇತ್ತ ಬೆಂಗಳೂರಿನಲ್ಲಿ ಹೊಸ ಮುಖ್ಯಮಂತ್ರಿಯಾಗಿ ಸದಾನಂದ ಗೌಡ ಗೆದ್ದ ಖುಷಿಯಲ್ಲಿ ಹಲ್ಲು ಕಿರಿಯುತ್ತಿದ್ದರೆ ಅವರ ಬಿಜೆಪಿ ಬೆಂಬಲಿಗರೆಲ್ಲ ಕೇಕೆ ಹಾಕುತ್ತಿದ್ದರೆ, ಅತ್ತ ಚಿಂತಾಮಣಿಯ ಸರ್ಕಾರಿ ಆಸ್ಪತ್ರೆಯೆದುರು ಬಲಿಯಾದವರ ಬಂಧುಗಳ ಆಕ್ರಂದನ ಮುಗಿಲು ಮುಟ್ಟಿತ್ತು, ಈ ಪೈಕಿ ತಂಡದ ಮುಖ್ಯಸ್ಥ ರಮೇಶನ ಪತ್ನಿ ಶಾಮಲಮ್ಮ ತನ್ನ ಮೂರು ತಿಂಗಳ ಮಗುವನ್ನೆತ್ತಿಕೊಂಡು ಯಾವ ಪರಿ ರೋದಿಸುತ್ತಿದ್ದಳೆಂದರೆ; ಅಲ್ಲಿದ್ದ ಪೊಲೀಸರೇ ಕಣ್ಣೀರಿಟ್ಟರು. 'ನನ್ನ ಗಂಡ ಕಳ್ಳನೇ ಆಗಿದ್ದರೆ ಪೊಲೀಸರಿಗೆ ಒಪ್ಪಿಸಬಹುದಿತ್ತು, ಮನುಷ್ಯರಾದವರು ಮಾಡೋ ಕೆಲಸವಾ ಇದು?' ಎಂದು ಶಾಮಲಮ್ಮ ಹಾಕಿದ ಶಾಪಕ್ಕೆ ಉತ್ತರಿಸುವವರ್ಯಾರು?



ಪಕ್ಕದಲ್ಲೇ ಹತ ರಮೇಶನ ತಂಗಿ ನಾಗೇಶ್ವರಿ ಚೀರಾಡುತ್ತಿದ್ದಳು. ಈಗ ರಮೇಶನ ಜೊತೆಗೇ ಕೊಲೆಯಾದ ಚಿನ್ನ ಎಂಬಾತನನ್ನು ಆಕೆ ಮದುವೆಯಾಗಿ ಇನ್ನೂ ಮೂರು ತಿಂಗಳಾಗಿಲ್ಲ, ರಾಮಾಂಜಿಯ ತಾಯಿ ನರಸಮ್ಮ ಗೋಳಿಡುತ್ತಿದ್ದ ರೀತಿ ಇಡೀ ಮಾನವೀಯತೆಗೇ ಹಾಕಿದ ಸವಾಲಿನಂತಿತ್ತು, 'ನನ್ನ ಮಗ ಏನು ದೇಶ ಲೂಟಿ ಮಾಡಿದ್ನಾ? ಯಾರನ್ನಾದ್ರೂ ಕೊಂದಿದ್ನಾ? ಎಂಥೆಂಥದೋ ದಕಾಯಿತರು, ಕಳ್ಳರನ್ನು ಮಂತ್ರಿ ಮಾಡ್ತೀರಾ? ನನ್ನ ಮಗ ಏನು ಮಾಡಿದ್ದಾ ಅಂಥಾ ಈ ಶಿಕ್ಷೆ?'

ಇದನ್ನು ಕೇಳಿದ ಪತ್ರಕರ್ತರೊಬ್ಬರು 'ಅಲ್ರೀ, ಗಣಿ ರೆಡ್ಡಿಗಳನ್ನೋ ಯಡಿಯ್ಯೂರಪ್ಪನ್ನೋ ಈ ರೀತಿ ಅಟ್ಟಾಡಿಸಿದ್ರೆ, ಒಪ್ಪಬಹುದಿತ್ತು, ಪಾಪ ಅಮಾಯಕರನ್ನು ಮುಗಿಸಿಬಿಟ್ರಲ್ರೀ....!' ಎಂದು ಹಣೆ ಚಚ್ಚಿಕೊಂಡರು. ಸತ್ತವರ ಸಂಬಂಧಿಗಳ ಆಕ್ರೋಶ ಮತ್ತು ಆಕ್ರಂದನ ಇಷ್ಟಕ್ಕೇ ತಣಿಯುವಂಥದ್ದಲ್ಲ, ಇವತ್ತಲ್ಲಾ ನಾಳೆ ಸೇಡು ತೀರಿಸಿಕೊಳ್ಳದೇ ಇರುತ್ತಾರಾ? ಚಿಕ್ಕಬಳ್ಳಾಪುರದ ಎಸ್ಪಿ ಟಿ.ಡಿ.ಪವಾರ್ ಸ್ವತಃ ನಿಂತು 70 ಕ್ಕೂ ಅಧಿಕ ಕಿಡಿಗೇಡಿಗಳನ್ನು ಬಂಧಿಸಿದ್ದಾರೆ. ಜಿಲ್ಲಾಧಿಕಾರಿ ಮಂಜುಳಾ ಈಗ ನಿದ್ದೆ ಬಿಟ್ಟೆದ್ದವರಂತೆ ಕಳ್ಳರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆಂದು ಡೈಲಾಗ್ ಹೊಡೆಯುತ್ತಾರೆ. ಗೃಹಮಂತ್ರಿ ಅಶೋಕ್‌ಗೆ ಇದ್ಯಾವುದಕ್ಕೂ ಟೈಮೇ ಇಲ್ಲ. ಸರ್ಕಾರವೊಂದರ ನಿರ್ಲಕ್ಷ, ಪೊಲೀಸರ ಅಸಡ್ಡೆ, ಕಿತ್ತು ತಿನ್ನುವ ದಾರಿದ್ರ್ಯ ಅಭಿವೃದ್ಧಿಯ ಬರ, ಜೊತೆಗೆ ಮೌಢ್ಯ ಎಲ್ಲವೂ ಸೇರಿಕೊಂಡರೆ ಹೇಗೆ ಗ್ರಾಮಸ್ಥರು ಕೂಡ ಮೃಗಗಳಾಗುತ್ತಾರೆಂಬುದಕ್ಕೆ ಇದೊಂದು ಉದಾಹರಣೆಯಷ್ಟೇ. ಗೆದ್ದ ಸದಾನಂದ ಗೌಡರಿಗೆ ಕಿಂಚಿತ್ತಾದರೂ ಅಂತಃಕರಣವಿದ್ದಿದ್ದರೆ ಮೊದಲು ಚಿಂತಾಮಣಿಗೆ ಬಂದು ದುಃಖಿತರನ್ನು ಸಂತೈಸಬೇಕಿತ್ತು, ಮನುಷ್ಯ ಸಂಕುಲವೇ ತಲೆತಗ್ಗಿಸುವಂಥ ಕ್ರೌರ್ಯ ತನ್ನದೇ ರಾಜ್ಯದಲ್ಲಿ ನಡೆದಾಗಲೂ ಗೃಹಮಂತ್ರಿ ಅಶೋಕ್‌ಗಿದು ಏನೇನು ಅಲ್ಲ, ಸದಾನಂದ ಗೌಡರು ಶೆಟ್ಟರ್ ಮನೆಬಾಗಿಲು ಬಡಿಯುತ್ತಾರೆ. ಉಸ್ತುವಾರಿ ಮುಖ್ಯಮಂತ್ರಿ ಯಡ್ಡಿಗಿದು ಲೆಕ್ಕಕ್ಕೇ ಇಲ್ಲ, ಜಾಣ ಕಳ್ಳರು ಯಾರು? ಬಲಿಯಾಗುವ ಮುಗ್ಧರು ಯಾರು?

ಕಳ್ಳರ ರಾಜ್ಯದಲ್ಲಿ ಬಲಿಯಾಗುವವರ್ಯಾರು? ಗೋಳಾಡುವವರ್ಯಾರು?


…ಾಡುತ್ತಿದ್ದ ಮೂವರು ಹೆಂಗಸರನ್ನು ಕಟ್ಟಿ ಹಾಕಿ ಅವರ …ಾಂಗಲ್ಯವನ್ನು ದೋಚಲಾಯ್ತು. ಯಗವಕೋಟೆಯ …ತ್ತೊಬ್ಬ ಮಹಿಳೆಯನ್ನೂ ಇದೇ ರೀತಿ ಹೊಲದಲ್ಲೇ …ೋಚಿದ್ದರು. ಚಿಂತಾಮಣಿ ಮತ್ತು ಕೈವಾರದಲ್ಲೇ …ಗಳೊಂದಕ್ಕೆ ಅರ್ಧಡಜನ್ ಕಳ್ಳತನಗಳಾದವು.

ಈ ಸುತ್ತಮುತ್ತ ಕಳ್ಳರ ಹಾವಳಿ ವಿರುದ್ಧ …ಮಸ್ಥರು ಎಷ್ಟು ರೊಚ್ಚಿಗೆದ್ದರೆಂದರೆ ಇಲ್ಲಿಗೆ ಎರಡು …ರದ ಹಿಂದೆ ಚಿಂತಾಮಣಿ …ಲ್ಲೂಕು ಹೀರೆಪಾಳ್ಯದಲ್ಲಿ …ಡುಹಗಲೇ ಮನೆಗೆ ನುಗ್ಗಿ …ವಿಗೆ ಯತ್ನಿಸಿದ ಕಳ್ಳನನ್ನು …ಡಿದು ಗ್ರಾಮಸ್ಥರು …ತನನ್ನು ಹೊಡೆಹೊಡೆದೇ …ಂದುಬಿಟ್ಟರು. ಸತ್ತ ಕಳ್ಳನ …ವವನ್ನು ರಸ್ತೆ ಬದಿ ಎಸೆದು …ೊಲೀಸರಿಗೆ ಸುದ್ದಿಕೊಟ್ಟರು.

ಇದು ಇಡೀ ಚಿಂತಾ…ಣಿಯಲ್ಲಿ ಸುದ್ದಿಯಾಯಿತು. …ಳ್ಳರ ಹಾವಳಿಗೆ ಅಂಜಿದ …ಹಿಳೆಯರು ರಾತ್ರಿ ತಮ್ಮೆಲ್ಲಾ ಒಡವ ಬಿಚ್ಚ ದಿಂಬಿನ …ಗಿಟ್ಟು ಮಲಗುತ್ತಿದ್ದರು. ಯುವಕರು ಗುಂಪುಗೂಡಿ …ತ್ರಿ ನಿದ್ದೆಗೆಟ್ಟು ಊರನ್ನು ಕಾಯುವಂತಾಯ್ತು. ಯಾರೇ …ಪರಿಚಿತರನ್ನು ಕಂಡರೂ ಅಡ್ಡಗಟ್ಟಿ ವಿಚಾರಿಸುತ್ತಿದ್ದರು. …ಕು, ಆಟೋ, ಗಾಡಿಗಳಲ್ಲಿ ನಾಲ್ಕೈದು ಮಂದಿ …ಪರಿಚಿತರು ಓಡಾಡಿದರೂ ಸಾಕು ಅವರನ್ನೇ ಕಳ್ಳರೆಂದು …ಎಸಿ ಹಿಡಿದು ಪೊಲೀಸರಿಗೊಪ್ಪಿಸುತ್ತಿದ್ದರು. ಪೊಲೀಸರು …ನೇ ಇನ್ನೇನು ಮಾಡಲು ಸಾಧ್ಯ? ಹಿಡಿದು ತಂದವರನ್ನು …ಚಾರಿಸಿ ನಿರಪರಾಧಿಗಳೆಂದು ಗೊತ್ತಾಗಿದ್ದೇ ಬಿಟ್ಟು …ಸುತ್ತಿದ್ದರು.

ತಾವು ಕಳ್ಳರನ್ನು ಹಿಡಿದು ಕೊಟ್ಟರೂ ಪೊಲೀಸರು …ಂಚ ತಿಂದು ಬಿಟ್ಟು ಕಳಿಸುತ್ತಿದ್ದಾರೆಂದು ಗ್ರಾಮಸ್ಥರು …ಟ್ಟಿಗೆದ್ದರೆ ಪೊಲೀಸರಂತೂ ಸಿಕ್ಕಸಿಕ್ಕವರನ್ನೆಲ್ಲ ಹಿಡಿದು …ದು ಥಳಕಾಣದೇ ಹೈರಾಣಾದರು. ಇಂಥ ಪರಿಸ್ಥಿತಿಯ …ವುದೇ ಅರಿವಿಲ್ಲದೇ ಆಗಸ್ಟ್ 3ರ ಬೆಳಿಗ್ಗೆ ಚಿಂತಾಮಣಿ …ಬಳಿಯ ಆಂಧ್ರದ ಅನಂತಪುರದ ಮಹಮ್ಮದಾಬಾದ್‌ನ …ಮೇಶನ ತಂಡ.

ಆತ ಕಳ್ಳನಲ್ಲ, ದರೋಡೆಕೋರನೂ ಅಲ್ಲ. ಯಃಕಶ್ಚಿತ್ …ಂಚಕ ಮಾತ್ರ. ನಿಧಿ ಸಿಕ್ಕಿದೆಯೆಂದೂ, ಹಳೇಕಾಲದ …ಸ್ವದ ನಾಣ್ಯಗಳು ತನ್ನ ಬಳಿ ಇದೆಯೆಂದೂ ನಂಬಿಸಿ …ಂಚಿಸುವುದು ಆತನ ಪ್ರವೃತ್ತಿ. ತನ್ನ ಜೊತೆ ಆದೇ …ಮ್ಮದಾಬಾದ್‌ನ ರಾಮಾಂಜಿನಿ, ಹಿಂದೂಪುರ ಪಕ್ಕದ …ಲಾ ಗ್ರಾಮದ ಚನ್ನ, ಪಿಟ್ಟಿವಾರಪಲ್ಲಿಯ ಆಂಜನೇಯಲು, …ರಿಯ ಪೆದ್ದರೆಡ್ಡಿ, ಹಿಂದೂಪುರ ಪಕ್ಕದ ಭಾಸ್ಕರ, …ಡ್ಡಿಗೋಲಪಲ್ಲಿಯ ನರಸಿಂಹರೆಡ್ಡಿ, ಮಿಟ್ಟಪಲ್ಲಿಯ ಹರಿ, …ನಾರೆಡ್ಡಿ ಪಲ್ಲಿಯ ಸುಧಾಕರರೆಡ್ಡಿ ಉರ್ಫ್ ಬಾಬು, …ರುಮುತು ಮತ್ತು ಗಂಗಾಧರರನ್ನು ಕರೆಕೊಂಡು ಟಾಟಾ …ಮೋ ಒಂದರಲ್ಲಿ ಆಂಧ್ರದ …ಿದಾಟ ಚಿಂತಾಮಣಿಯತ್ತ …ಂದಿದ್ದಾನೆ.


ಶವಾಗಾರದಲ್ಲಿ ಹೆಣಗಳು....

ತಿರುಮಲಮ್ಮನ ಪಾಡು

ಬಹುಶಃ …ನೂತ್ಪಾಸ್ಪರವಾದ ಮುರುಗಮಲ್ಲ ದರ್ಗಾಕ್ಕೆಂದು …ಂದಿದ್ದಾನಾ? ಅಥವಾ …ನ್ನದ ನಾಣ್ಯ ತೋರಿಸಿ ಯಾರನ್ನಾದರೂ ವಂಚಿಸುವ …ದ್ದೇಶವಿತ್ತಾ? ಆ ರೀತಿ ನಕಲಿ ನಾಣ್ಯ ತೋರಿಸಿ …ನಾರಿಂದಲೋ ಕಿತ್ತ ನಾಲ್ಕು ಲಕ್ಷ ರೂಪಾಯಿಗಳನ್ನು …ತಿಕೆಗಿಟ್ಟುಕೊಂಡಿದ್ದನಾ? ತನ್ನ ಈ ಕಾರ್ಯಾಚರಣೆಗೆ …ನುಕೂಲವಾಗಲೆಂದು ಗಟ್ಟುಮುಟ್ಟಾಗಿದ್ದ ಯುವಕರ …ಡೆಯನ್ನೇ ಕಟ್ಟಿಕೊಂಡು ಬಂದಿದ್ದನಾ?

ಬಲ್ಲವರ್ಯಾರು? ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ …ಂತಾಮಣಿ ಮುರುಗಮಲ್ಲ ರಸ್ತೆಯಲ್ಲಿ ಬೆಂಗಳೂರು …ಜಂಕ್ಷನ್ ಸಂಖ್ಯೆಯಿದ್ದ ರಮೇಶನ ಸುಮೋ …ಾರಳ್ಳಿಯತ್ತ ಸಾಗಿದೆ. ಅಲ್ಲಿಂದ ಮುಂದೆ …ಟ್ಟಿವಾರಹಳ್ಳಿ ಕ್ರಾಸಿಗೆ ಬಂದು ಪಕ್ಕದಲ್ಲಿದ್ದ ಟೀ …ಂಗಡಿಯೊಂದರಲ್ಲಿ ಟೀ ಕುಡಿಯಲೆಂದು ಗಾಡಿ ನಿಲ್ಲಿಸಿದ್ದಾರೆ. …ಮ್ಮ ಸಾವು ಇಲ್ಲಿಂದಲೇ ಸಮೀಪಿಸುತ್ತಿದೆಯೆಂಬ …ಲ್ಪ ಸುಳಿವಾದರೂ ಅವರಿಗಿಲ್ಲಿತ್ತು? ಹಾಗಿದ್ದಿದ್ದ ಆದರೆ …ಕೆ ಅಲ್ಲೇ ಗಾಡಿ ನಿಲ್ಲಿಸುತ್ತಿದ್ದರು?

ವಿಧಿಯ ವೈಚಿತ್ರ್ಯವೋ ಎಂಬಂತೆ ಅಲ್ಲಿಗೆ ಕೇವಲ …ಮೂರು ದಿನದ ಹಿಂದಷ್ಟೇ ಪಕ್ಕದ ಮುದ್ದಲಹಳ್ಳಿಯ …ಹೊಲದೊಂದಕ್ಕೆ ನುಗ್ಗಿದ ದರೋಡೆಕೋರರು ಮನೆಯೊಡತಿಯ …ಾಂಗಲ್ಯ ಕಿತ್ತು ಪರಾರಿಯಾಗಿದ್ದರು. ಆದೇ ದಿನ ಕುರಿಗಳನ್ನು …ಡೆಯುತ್ತಿದ್ದ ಮತ್ತೊಂದು ದುಸ್ಸಾಹಸವೂ ಕಳ್ಳರು …ಮಾಡಿಟ್ಟಿದ್ದರು. ಇಂಥ ಆತಂಕ, ಆಕ್ರೋಶದ ಮಧ್ಯೆಯೇ …ನುವ ಅಂದರೆ ಆಗಸ್ಟ್ 3ರ ಮಧ್ಯಾಹ್ನ 2ಗಂಟೆಗೆ …ದೇ ಮುದ್ದಲಹಳ್ಳಿಯ ತಿರುಮಲಮ್ಮ ಎಂಬಾಕೆಯ ಮೇಲೆ ದುಷ್ಕರ್ಮಿಗಳ ದಾಳಿ ನಡೆಯಿತು.

ತನ್ನ ಹೊಲದಲ್ಲಿ ಕೆಲಸ ಮಾಡಿಕೊಂಡಿದ್ದ ತಿರುಮಲಮ್ಮನನ್ನು ಅಡ್ಡಗಟ್ಟಿದ ಇಬ್ಬರು ಅಪರಿಚಿತರು ಆಕೆಯ ಮಾಂಗಲ್ಯಕ್ಕೆ ಕೈಹಾಕಿದ್ದಾರೆ. ಅಷ್ಟರಲ್ಲೇ ಕಿರುಚಿಕೊಂಡಿದ್ದಾಳೆ. ದೋಚಲು ಬಂದವರಿಂದ ತಿರುಮಲಮ್ಮನಿಗೆ ಏಟುಗಳೂ ಬಿದ್ದಿವೆ. ಆಕೆ ಕಿರುಚಾಡಿದ್ದನ್ನು ಕೇಳಿದ್ದೇ ಗ್ರಾಮಸ್ಥರು ಓಡಿಬಂದಿದ್ದಾರೆ. ಆದರೆ ದುಷ್ಕರ್ಮಿಗಳು ಪರಾರಿಯಾಗಿದ್ದರು. ಗಾಯಗೊಂಡಿದ್ದ ತಿರುಮಲಮ್ಮನನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಿದ್ದಾರೆ.

ಮಧ್ಯಾಹ್ನ 2ಕ್ಕೆ ಸಂಭವಿಸಿದ ಘಟನೆ ಆಸುಪಾಸಿನ ಹತ್ತಾರು ಹಳ್ಳಿಗಳಿಗೆ ಮುಟ್ಟಲು ಎಷ್ಟು ಹೊತ್ತು? ಯಾರೇ ಅಪರಿಚಿತರು ಕಂಡರೂ ಜನ ಹಿಡಿದು ಬಡಿಯಲು ಅಣಿಯಾಗಿಬಿಟ್ಟರು. ಇದಾಗಿ ಎರಡು ಗಂಟೆಯ ನಂತರವೇ ದುರ್ದೈವಿ ಸುಮೋಗಾಡಿಯಲ್ಲಿ ರಮೇಶನ ತಂಡ ಮುರುಗಮಲ್ಲದ ರಸ್ತೆಗಿಳಿದದ್ದು. ಹಾಗೊಮ್ಮೆ ರಮೇಶನ ತಂಡವೇ ತಿರುಮಲ್ಲಮ್ಮನ ರಾಬರಿಗೆ ಕೈಹಾಕಿದ್ದರೆ ಏಕೆ ಮತ್ತೆ ಅಲ್ಲಿಗೆ ಬರುತ್ತಿದ್ದರು? ತಿರುಮಲಮ್ಮನನ್ನು ಪೀಡಿಸಿದ್ದು ಇಬ್ಬರಾದರೆ ಇಲ್ಲಿದ್ದದ್ದು ಹನ್ನೊಂದು ಮಂದಿ. ಅಷ್ಟಕ್ಕೂ ಇವರೇ ಅಲ್ಲಿದ್ದವರೆಂದು ಯಾರೂ ಗುರುತಿಸಿ ಹೇಳಿಲ್ಲ. ಗಾಯಗೊಂಡ ತಿರುಮಲಮ್ಮ ಇವರೇ ದಾಳಿ ನಡೆಸಿದ್ದೆಂದು ಗುರುತಿಸಿಯೂ ಇಲ್ಲ.

2000 ಮಂದಿಯ ಕ್ರೌರ್ಯ

ಜನ ರೊಚ್ಚಿಗೆದ್ದರೆ ತಾಳ್ಮೆ, ವಿವೇಕ ಎಲ್ಲಿಂದ ಬಂದೀತು? ಟೀ ಕುಡಿಯಲು ನಿಂತಿದ್ದ ತಂಡವನ್ನು ಏಕಾಏಕಿ ಯುವಕರ ಗುಂಪೊಂದು ಸಮೀಪಿಸಿದ್ದೇ ಯಾರು ನೀವು? ಇಲ್ಲೇಕೆ ಬಂದಿದ್ದೀರಿ? ನಿಮಗೇನು ಕೆಲಸ ಎಂದು ವಿಚಾರಿಸಿದೆ. ಇದ್ಯಾವುದರ ಪರಿವೆಯಿಲ್ಲದ ರಮೇಶನ ಹುಡುಗರು ತಮ್ಮನ್ನು ವಿಚಾರಿಸಲು ಬಂದವರ ಮೇಲೆ ರೇಗಿದ್ದಾರೆ. ಆಷ್ಟರಲ್ಲಿ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿದೆ. ನೋಡುನೋಡುತ್ತಿದ್ದಂತೆ ಸುಮಾರು ಐನೂರು ಮಂದಿ ಜಮಾಯಿಸಿದ್ದೇ ಸಿಕ್ಕಿಸಿಕ್ಕವರನ್ನು ಹಿಡಿದು ಬಡಿದಿದ್ದಾರೆ.


ಇಷ್ಟಾಗಿದ್ದೇ ತಡ ಜೊತೆ ಬಂದಿದ್ದ ಐವರನ್ನು ಅಲ್ಲೇ ಬಿಟ್ಟು ಉಳಿದ ಆರುಮಂದಿ ಟಾಟಾ ಸುಮೋ ಹತ್ತಿ ಯರ್ರಾಕೋಟೆಯತ್ತ ಗಾಡಿ ಓಡಿಸಿದ್ದಾರೆ. ಬಾರ್ಲಹಳ್ಳಿಯ ಕೆಲವರು ತಮ್ಮ ಬೈಕಲ್ಲಿ ಸುಮೋ ಅನ್ನು ಹಿಂಬಾಲಿಸಿದರೆ ಇತ್ತ ಬಚ್ಚಹಾರಹಳ್ಳಿ ಕ್ರಾಸ್‌ನಲ್ಲಿ ಅಕ್ಷರಶಃ ನರಹಾರಿಯೇ ನಡೆದುಹೋಯಿತು. ಸಿಕ್ಕ ಐವರನ್ನು ಬಟ್ಟೆ ಬಿಚ್ಚಿ ಕಟ್ಟಿಹಾಕಲಾಯಿತು. ಸಿಕ್ಕಸಿಕ್ಕದರಲ್ಲಿ ಹೊಡೆದರು. ಚಿಂತಾಮಣಿ ಪೊಲೀಸರು ಅಲ್ಲಿಗೆ ಬರಬೇಕೆಂದರೆ 30 ನಿಮಿಷದ ಹಾದಿ. ಬಂದ ಮೂವರು ಪೊಲೀಸರು ಏನೇ ಹರಸಾಹಸ ಮಾಡಿದರೂ ರೊಚ್ಚಿಗೆದ್ದ ಜನ ಕೇಳಬೇಕಲ್ಲ? ತಲೆಗೆ ಕಲ್ಲೆತ್ತಿಹಾಕಿದ್ದರು. ಕಾಲು, ಹೊಟ್ಟೆ, ಎದೆ ಬಡಿದೇ ಇರಿಯಿದ್ದಾಗಿತ್ತು. ಮೂವರು ಸ್ಥಳದಲ್ಲೇ ಹೆಣವಾದರೆ ಅರೆಜೀವವಾಗಿದ್ದ ಇಬ್ಬರನ್ನು ಟ್ರ್ಯಾಕ್ಟರ್ ಒಂದಕ್ಕೆ ಹಾಕಿಕೊಂಡ ಆದೇ ಪೊಲೀಸರು ಯರ್ರಾಕೋಟೆಗೆ ಬಂದರೆ ಅಲ್ಲಾಗಲೇ 2 ಸಾವಿರ ಮಂದಿ ಜಮಾಯಿಸಿದ್ದರು. ಅದೆಷ್ಟು ಭಯಾನಕವಾಗಿತ್ತೆಂದರೆ, ಪೊಲೀಸರ ಕಣ್ಣೆದುರೇ ಆರೂ ಮಂದಿಯನ್ನು ಜನ ಹೊಡೆಹೊಡೆದು ಕೊಂದುಬಿಟ್ಟರು. ಬಿದ್ದವರ ಮೇಲೆ ಸ್ಪೈಬಗಳನ್ನಿಟ್ಟು ಹಾಕಿದ್ದರು. ಹಾರೆಯಿಂದ ತಿವಿದರು. ತಂದಿದ್ದ ಸುಮೋಗೆ ಬೆಂಕಿಯಿಟ್ಟರು. ಆರಕ್ಕೆ ಆರೂ ಮಂದಿ ಒಟ್ಟೊಟ್ಟಾಗಿ ರಕ್ತ ಸುರಿಸುತ್ತಾ ನರಳುತ್ತಾ ಹೆಣವಾಗುತ್ತಿದ್ದರೆ, ಬಿದ್ದ ಹೆಣಗಳಿಗೆ ಜನ ದೊಣ್ಣೆ, ಕಲ್ಲುಗಳಿಂದ ಬಡಿಯುತ್ತಿದ್ದರು!


ಸುಟ್ಟು ಕರಕಲಾದ ಸುಮೋ

ಕೊಂದವರಿಗೆ ತಾವು ಕೊಲ್ಲುತ್ತಿರುವುದು ಯಾರನ್ನು? ಯಾಕೆ ಕೊಲ್ಲುತ್ತಿದ್ದೇವೆಂಬುದು ಗೊತ್ತಿರಲಿಲ್ಲ. ಕೊಲ್ಲುತ್ತಿರುವವರ ಆಕ್ರೋಶದ ಹಿಂದಿದ್ದ ಕಾರಣಕ್ಕೂ, ಕೊಲೆಯಾದವರಿಗೂ ಯಾವ ಸಂಬಂಧವೂ ಇರಲಿಲ್ಲ. ಪೊಲೀಸರ ಕಣ್ಣೆದುರೇ ಅಕ್ಷಮ್ಯ ಅನ್ಯಾಯವೊಂದು ನಡೆದುಹೋಗಿತ್ತು. ಯಾರ ಮನೆಯ ಮಕ್ಕಳೋ? ಯಾವ ಮಕ್ಕಳ ತಂದೆಯರೋ? ಯಾವ ಹೆಣ್ಣಿಗೆ ಗಂಡನೋ? ತಮ್ಮಂತೆ ಅವರೂ ಮನುಷ್ಯರೆಂಬುದನ್ನು ಅಲ್ಲಿದ್ದವರ್ಯಾರೂ ಲೆಕ್ಕಿಸಲೇ ಇಲ್ಲ.

ನೆರೆದ ಆ ಎರಡು ಸಾವಿರದಷ್ಟು ಜನರ ನಡುವೆ ಯಾರ ಮನುಷ್ಯತ್ವ ಪಜ್ಞೆಯೂ ಇಂಥ ದಾರುಣಕ್ಕೆ ಮರುಗಲಿಲ್ಲ. ಮನುಷ್ಯರುಳವೇ ನಾಚುವಂಥ ಭಯಾನಕ ನರಹಾರಿಯೊಂದು ಹಾಡುಹಗಲಲ್ಲೇ ನಡೆದುಹೋಗಿತ್ತು.

ನನ್ನ ಕೆಲಸ ಸುಲಭ, ಎಡೂರಪ್ಪನ ಕೆಲಸ ಮುಂದುವರಿಸುವುದು!



ಇದ್ದಕ್ಕಿದ್ದಂತೆ ನಮ್ಮ ಕಣ್ಣೆದುರು ಸದಾರಮೆ ನಾಟಕ ನಡೆದುಹೋಯ್ತಲ್ಲಾ, ಸದರಿ ನಾಟಕದಲ್ಲಿ ಸುಂದರಿಗೆ ಮನಸೋತ ರಾಜ, ಅವಳಿಗಾಗಿ ರಾಜ್ಯವನ್ನು ಅವರಪ್ಪನಿಗೆ ಒಪ್ಪಿಸಿ, ಕೈ ಹಿಡಿದವಳೊಂದಿಗೆ ಕಾಡಿಗೆ ಹೋಗುತ್ತಾನೆ. ಇತ್ತ ಮಗನಿಗೆ ಪಟ್ಟ ಕಟ್ಟದ ಶೆಟ್ಟಿ ತಾನೇ ಮಂತ್ರಿಯಾಗಿ ಮಗನನ್ನು ಸಿಂಹಾಸನದಲ್ಲಿ ಕೂರಿಸುತ್ತಾನೆ. ಇಂತಹದ್ದೊಂದು ಆಟ್ಟಗೆ ತುತ್ತಾದ ಮಗ ಏನು ಮಾಡಿದರೂ ಬಾಯಿ ಮುಚ್ಚಬೇಕಾಗದೆ ನಗುತ್ತಾನೆ. ಯಾಕೆಂದರೆ ಆ ಪಾತ್ರ ಮಾಡಿದ ನಟ ನರಸಿಂಹರಾಜು! ಅಪ್ಪನ ಪಾತ್ರಧಾರಿ ಗುಬ್ಬಿ ವೀರಣ್ಣ. ಹಾಲೂರ ಬಿಜೆಪಿಗೆ ಉಳಿದವನೇ ಗೌಡ ಎಂಬಂತೆ ದಿಢೀರನೆ ಅರವತ್ತೆರಡು ಶಾಸಕರಿಂದ ಆಯ್ಕೆಯಾಗಿ ಮುಖ್ಯಮಂತ್ರಿ ಪಟ್ಟವನ್ನು ಬಿಟ್ಟು ನಗುತ್ತಿರುವ ಸದಾನಂದ ಗೌಡರನ್ನು ಅಭಿನಂದಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ, ರಿಂಗಾಯ್ತು,

ರಿಂಗ್ ಟೋನ್: "ನಗಬೇಕು ನಗಿಸಬೇಕು ಇದೇ ನನ್ನ ಧರ್ಮ, ನಗಲಾರೆ ಆಳುವೆ ಎಂದರೇ ಆದೇ ಶೆಟ್ಟರ್ ಕರ್ಮ....."

"ಹಲೋ ಯಾರು?"

"ಅಭಿನಂದನೆಗಳು ಸಾರ್. ನಾನು ಯಾಹು, ಪತ್ರಕರ್ತ."

"ಯಾಹು ಅವರೆ, ಈಗ ಬಿಜಿ ಇದ್ದೀನಿ ನಂತರ ಮಾತನಾಡುವ."

"ಒಂದೇ ಒಂದು ನಿಮಿಷ ಸಾರ್."

"ಒಂದು ನಿಮಿಷ ಆದರೆ ಪರವಾಗಿಲ್ಲ ಹೇಳಿ."

"ನಿಮಗೆ ಜನಾಭಿಪ್ರಾಯವೂ ಇಲ್ಲ, ಜೊತೆಗೆ ಐವತ್ತೈದು ಜನ ಶಾಸಕರ ಬೆಂಬಲವೂ ಇಲ್ಲ, ಆದರೂ ಮುಖ್ಯಮಂತ್ರಿಯಾದರಲ್ಲ ಸಾರ್?"

"ನಿಜಕ್ಕೂ ಇದೊಂದು ಆಶ್ಚರ್ಯಕರವಾದ ಬೆಳವಣಿಗೆ. ಇದಕ್ಕೆ ನಾನು ಹೊಣೆಯಲ್ಲ."

"ಆದರೂ ಹೊಣೆ ಹೊರೆಸಿದ್ದಾರಲ್ಲವೆ."

"ಅದೇನು, ನಮ್ಮ ಪಕ್ಷ ವಹಿಸಿದ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಪಕ್ಷದ ಶಿಸ್ತಿನ ಸಿಪಾಯಿ ಆಗಿ ನಾನು ಹೊರಬೇಕಲ್ಲವೆ."

"ಶಿಸ್ತು ಮತ್ತು ಸಿಪಾಯಿತನದಲ್ಲಿ ಒಳ್ಳೆ ಕೆಲಸಗಳಾಗುವಂತೆ. ನಿಮ್ಮ ಕೆಲಸಗಳೇನೇನು ಸಾರ್?"

"ನನ್ನ ಕೆಲಸ ಬಹಳ ಸುಲಭ. ನಮ್ಮ ಎಡೂರಪ್ಪನವರ 'ಕೆಲಸ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವುದು."

"ಎಡೂರಪ್ಪನ ಕೆಲಸ ಮುಂದುವರಿಸೋದು ಅಂದ್ರೆ ಕಷ್ಟ ಅಲ್ವಾ ಸಾರ್?"

"ಅದು ಹೇಗೆ ಕಷ್ಟ?"

"ಕಷ್ಟನೆ ಸಾರ್. ಇಡೀ ಸರ್ಕಾರದ ಯಂತ್ರದಿಂದ ಹಣ ಸಂಗ್ರಹಿಸಬೇಕು. ಅದರಿಂದ ಆಸ್ತಿ ಖರೀದಿ ಮಾಡಬೇಕು. ಗಣಿಗಾರಿಕೆ ದರೋಡೆ ಸುಸೂತ್ರವಾಗಿ ನಡಿಯೋ ತರ ನೋಡಿಕೊಬೇಕು. ಕಾಲೇಜು ಕಟ್ಟಬೇಕು. ಸ್ಟಾರ್ ಹೋಟೆಲ್ ಕಟ್ಟಬೇಕು. ಫ್ಯಾಕ್ಟರಿ ಕೊಳ್ಳಬೇಕು. ಎಸ್ಟೇಟು ತೋಟಗಳ ಖರೀದಿ ಮಾಡಬೇಕು. ಇವೇ ಅಲ್ವಾ ಎಡೂರಪ್ಪನ ಕೆಲಸ."

"ನಾನು ಹೇಳಿದ್ದು ಎಡೂರಪ್ಪನವರ ಸರಕಾರಿ ಕೆಲಸ."


"ಸರಕಾರಿ ಕೆಲಸ ತನ್ನಷ್ಟಕ್ಕೆ ತಾನೇ ನಡಕಂಡು ಹೋಗ್ತದಲ್ಲವಾ ಸಾರ್?"

"ಅದು ಹೇಗೆ?"

"ಈಗ ಮೂರು ವರ್ಷಗಳಿಂದ ರಾಜ್ಯದಲ್ಲಿ ಸರಕಾರ ಇಲ್ಲ, ಆದ್ರೂ ರಾಜ್ಯ ನಡಕೊಂಡು ಹೋಗ್ತಾಯಿದಿಯಲ್ಲ ಸಾರ್."

"ಸರಕಾರ ಸುಸೂತ್ರವಾಗಿ ನಡಕೊಂಡು ಹೋಗುವಂತೆ ಮಾಡಿದ್ದು ಎಡೂರಪ್ಪ ಅಲ್ವಾ?"

"ಇಲ್ಲ ಸಾರ್. ಅದಿರು ತುಂಬಿದ ಗೂಡ್ಸ್ ಗಾಡಿ ಹಳಿಮೇಲೆ ಬಂದರು ಸಿಗೋವರಿಗೂ ಹೋಯ್ತಾಯಿರಂಗೆ ಈ ನಮ್ಮ ಭ್ರಷ್ಟ ವ್ಯವಸ್ಥೆಗೆ ಆತರದ ಒಂದು ಚಲನೆ ಇದೆ. ಹಾಗಾಗಿ ನೀವೇನು ತಲೆಹರಟೆ ಮಾಡದಂಗೆ ಸುಮ್ಮನಿದ್ರೂ ಆಯ್ತು, ನಡಕಂಡೋಯ್ತದೆ."



"ಈ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಮಾಡಬೇಕಾದ ಕೆಲಸ ಸಮಾ ಉಂಟಲ್ಲವ."

"ಏನು ಮಾಡ್ತಿರಿ ಸಾರ್?"

"ನನ್ನನ್ನು ಮುಖ್ಯಮಂತ್ರಿ ಮಾಡಿದ ಎಡೂರಪ್ಪನ ಕನಸುಗಳನ್ನು ನನಸು ಮಾಡುವುದು. ಆಡಳಿತ ಯಂತ್ರವನ್ನು ಚುರುಕು ಮಾಡುವುದು."

"ಆಡಳಿತ ಯಂತ್ರ ಚುರುಕು ಮಾಡೋದು ಅಂದಾಗಲ್ಲಾ ನನಗೊಂತರಾ ಡವುಟಾಗತ್ತೆ ಸಾರ್. ಒಂದು ಚೂರು ವಿವರಿಸ್ತಿರಾ."

"ಈಗ ಸಮಯವಿಲ್ಲ, ಇನ್ನೊಮ್ಮೆ ಹೇಳ್ತೇನೆ. ಎರಡೇ ಮಾತಲ್ಲಿ ಹೇಳುವುದಾದರೆ, ನಮ್ಮ ಪಾರ್ಟಿಯ ಅಜೆಂಡಾದಲ್ಲಿ ತುಂಬ ಒಳ್ಳೆ ಕೆಲಸಗಳುಂಟು. ಅವುಗಳಿಗೆ ಜೀವನ ಚಲನೆ ಕೊಡಬೇಕು."

"ನಿಮ್ಮ ಪಾರ್ಟಿ ಅಜೆಂಡಾಗಳೂ ಅಥವಾ ಆರೆಸ್ಸೆಸ್ ಅಜೆಂಡಾಗಳೋ ಸಾರ್?"

"ನಮ್ಮಲ್ಲಿ ಯಾವುದೇ ಕಾರ್ಯಕ್ರಮ ಚರ್ಚೆಗೆ ಒಳಪಟ್ಟು ಅದೊಂದು ಕಾರ್ಯಕ್ರಮವಾಗಿ ರೂಪಪಡೆದು ಬರುವುದು ಸಂಘದಲ್ಲಿ."

"ಅಂದ್ರೆ ಆರೆಸ್ಸೆಸ್‌ನಲ್ಲಾ ಸಾರ್?"

"ಹೌದು. ಯಾವುದೇ ಕಾರ್ಯಕ್ರಮ ಅನುಷ್ಠಾನಗೊಳ್ಳಬೇಕಾದರೆ ಸುಮ್ಮನೆ ಆಗುವುದಿಲ್ಲ. ಅದಕ್ಕೊಂದು ತರಬೇತಿ ಪಡೆದ ಜನ ಇರಬೇಕು."

"ಅಂಗಿದ್ರೆ ನೀವು ಆರೆಸ್ಸೆಸ್‌ನಲ್ಲಿ ತರಬೇತಿ ಪಡೆದ ಜನ?"

"ಜನ ಅಂತ ಹಗುರವಾಗಿ ಹೇಳುವುದು ಬೇಡ. ಆರೆಸ್ಸೆಸಿನ ಗೆಳೆಯರು ನನ್ನನ್ನು ಅಣ್ಣ ತಮ್ಮಂದಿರಿದ್ದ ಹಾಗೆ. ಅಂದರೆ ನಾವೆಲ್ಲಾ ಆರೆಸ್ಸೆಸ್ ತಾಯಿ ಮಕ್ಕಳು."

"ಆರೆಸ್ಸೆಸ್ ತಾಯಿ ಎಲ್ಲಿದ್ದಾಳೆ ಸಾರ್ ಈಗ?"

"ತಾಯಿ ಅಂದರೆ ನಮ್ಮ ನಿಮ್ಮ ತಾಯಿ ಅಂತ ಅಲ್ಲ. ಆರೆಸ್ಸೆಸ್ ಸಂಘವನ್ನೆ ನಾವು ತಾಯಿ ಅಂತ ಹೇಳುವುದು. ಈ ರಾಷ್ಟ್ರವನ್ನು ನಾವು ತಾಯಿ ಅಂತೇವೆ. ಅವಳ ಸೇವೆ ಮಾಡುವುದೇ ನಮ್ಮ ಭಾಗ್ಯ ಅಂದುಕೊಂಡಿದ್ದೇವೆ."

"ಆರೆಸ್ಸೆಸ್ ತಾಯಿಯಾದ್ರೆ ತಂದೆ ಯಾರು ಸಾರ್? ಬಿಜೆಪಿನೆ?"

"ಬಿಜೆಪಿ ತಂದೆಯಾಗಲಿಕ್ಕೆ ಸಾಧ್ಯವಿಲ್ಲ, ಏಕೆಂದರೆ ಮೊದಲು ಆರೆಸ್ಸೆಸ್ ನಂತರ ಬಿಜೆಪಿ. ಆರೆಸ್ಸೆಸ್ ತರುಣ ಅನ್ನುವುದಾದರೆ ಬಿಜೆಪಿಯನ್ನು ಮಧ್ಯವಯಸ್ಕ ಅನ್ನಬಹುದು."

"ವಾಜಪೇಯಿ, ಅಡ್ವಾಣಿ, ಜೋಶಿ ಈ ತರದವರನ್ನ ಏನನ್ನಬಹುದು ಸಾರ್?"

"ಯಾಹೂ ಅವರೆ, ಈಗ ನಾನು ಪ್ರಮಾಣವಚನ ತೆಗೋಳ್ಳಕ್ಕೆ ಹೋಗ್ತಾಯಿದ್ದೇನೆ. ಇನ್ನೊಮ್ಮೆ ಬಿಡುವಾಗಿ ಸಿಕ್ತೇನೆ. ಎಡೂರಪ್ಪನವರು ಬಂದ್ರು ಅಂತ ಕಾಣ್ತದೆ. ಯಾಕಂದ್ರೆ, ಸೋಮಣ್ಣ ಆಗಲೆ ಕಾರಿನಿಂದ ಇಳಿದರು."

"ಒಂದು ಸಲಹೆ ಸಾರ್."


"ಹೇಳಿ."

"ಎಡೂರಪ್ಪನಿಗೆ ಸೋಮಣ್ಣ ರೇಣುಕಾಚಾರಿ ಅಂಟಿಕೊಂಡಂತೆ ನೀವು ಆ ಸಿ.ಟಿ. ರವಿ, ಧನಂಜಯ ಕುಮಾರನ್ನ ಅಂಟಿಸಿಕೊಬೇಡಿ ಅಷ್ಟೇ."

"ಅವರಾಗಿ ಅಂಟಿಕೊಂಡರೆ ಏನು ಮಾಡುವುದು?"

"ಥೂತ್ತೇರಿ!!!"

ಭಂಡ ತಂತ್ರಗಳಿಂದಲೇ ವಿರೋಧಿಗಳ ತಲೆತರಿದ ಯಡ್ಡಿ!



ಒಬ್ಬನೇ ಒಬ್ಬ ಲಿಂಗಾಯತ ಶಾಸಕ ಅನಂತಕುಮಾರ್‌ರ ಸಿಹಿಮಾತು ಕೇಳಿ ಮರುಳಾಗಲಿಲ್ಲ! ಸ್ವಾಮೀಜಿಗಳ 'ವಿಪ್'ಗೂ ಬೆಲೆ ನೀಡಲಿಲ್ಲ. ಬದಲಾಗಿ ಅವರೆಲ್ಲ ಬಂಡೆ ಕಲ್ಲಿನಂತೆ ಯಡ್ಡಿ ಜೊತೆಗೆ ಗಟ್ಟಿಯಾಗಿ ನಿಂತರು. ಹೀಗಾಗಿ ಕೊನೆಯಲ್ಲಿ ಹೈಕಮಾಂಡಿನ ಆಶಯಕ್ಕೆ ವಿರುದ್ಧವಾಗಿ ಲೋಕಸಭಾ ಸದಸ್ಯ ಡಿ.ವಿ.ಸದಾನಂದ ಗೌಡ ನಾಯಕನಾಗಿ ಆಯ್ಕೆಯಾದರು.

ಮೊಂಗೋಪ, ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರಕ್ಕೆ ಮಾತ್ರ ವಿಶ್ವವಿಖ್ಯಾತರಾಗಿದ್ದ ಮಾಜಿ ಸಿಎಂ ಯಡಿಯೂರಪ್ಪ ಮೊತ್ತಮೊದಲಬಾರಿಗೆ ರಾಜಕೀಯ ತಂತ್ರಗಾರಿಕೆಯಲ್ಲೂ ತನ್ನ ನೈಪುಣ್ಯತೆಯನ್ನು ಪ್ರದರ್ಶಿಸಿ ಬಿಜೆಪಿಯ ಹೈಕಮಾಂಡನ್ನೇ ಬೆಚ್ಚಿಬೀಳಿಸಿರುವುದು ಈಗ ಜಗಜ್ಜಾಹೀರಾಗಿದೆ. ಯಡ್ಡಿಯೆಂಬ ಆ್ಯಂಗ್ರಿ ಓಲ್ಡ್ ಮ್ಯಾನ್ ಈಗ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಪಕ್ಷದಲ್ಲಿ ಹೊಸ ಸ್ಟಾರ್ ವ್ಯಾಲ್ಯೂ ಪಡೆದಿದ್ದಾರೆ.


ಆರಂಭದಲ್ಲಿ ಹೈಕಮಾಂಡ್ ಸೂಚನೆಯಂತೆ ಹನ್ನೆರಡು ಗಂಟೆಯೊಳಗೆ ರಾಜೀನಾಮೆ ಸಲ್ಲಿಸದೇ ಬಂಡಾಯದ ಬಾವುಟ ಹಾರಿಸಿದ್ದು, 65 ಜನ ಶಾಸಕರೊಂದಿಗೆ ಕಾಲ್ನಡಿಗೆಯಲ್ಲಿ ರಾಜಭವನಕ್ಕೆ ಸಾಗಿ ಹೈಕಮಾಂಡ್ ಮತ್ತು ಇಡೀ ಕರ್ನಾಟಕಕ್ಕೆ ಏಕಕಾಲದಲ್ಲಿ ತನ್ನ ಶಕ್ತಿ ಪ್ರದರ್ಶನ ಮಾಡಿದ್ದು, ಆನಂತರ ತನ್ನ ಅಭ್ಯರ್ಥಿಯೇ ಶಾಸಕಾಂಗದ ಪಕ್ಷದ ನಾಯಕನಾಗಿ ಆಯ್ಕೆಯಾಗುವಲ್ಲಿ ಯಶಸ್ವಿಯಾಗಿದ್ದು ಇವೆಲ್ಲವೂ ಸಾಧ್ಯವಾಗಿದ್ದು ಯಡ್ಡಿಯ ರಾಜಕೀಯ ತಂತ್ರಗಾರಿಕೆಯಿಂದ ಮಾತ್ರ. ಈತನಕ ಇಂತಹ ತಂತ್ರಗಾರಿಕೆ ಮತ್ತು ತೆರೆಮರೆಯ ಕರಾಮತ್ತುಗಳಿಗೆ ಹೆಸರಾದ ಅನಂತ್‌ಕುಮಾರ್ ಈ ಬಾರಿ ಯಡ್ಡಿಯ ಎದುರು ಕ್ಲೀನ್‌ಬೋಲ್ಡ್ ಆಗಿದ್ದಾರೆ.

ಲೋಕಸಭಾ ಸದಸ್ಯ ಡಿ.ವಿ.ಸದಾನಂದ ಗೌಡರನ್ನು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡುವಲ್ಲಿ ಯಡ್ಡಿ ಅನುಸರಿಸಿದ ತಂತ್ರಗಾರಿಕೆ ಮತ್ತು ತೆರೆಮರೆಯ ಕಸರತ್ತು ನಿಜಕ್ಕೂ ಬಿಜೆಪಿಯ ರಾಷ್ಟ್ರೀಯ ನಾಯಕರ ಇಮೇಜಿಗೆ ದೊಡ್ಡ ಏಟು ಎಂದೇ ಹೇಳಬೇಕು. ಹೀಗಾಗಿ ಸದಾನಂದ ಗೌಡ ಆಯ್ಕೆಯಾಗುವ ಮುಖಾಂತರ ಅನಂತಕುಮಾರ್ ಮತ್ತು ಅವರ ಗಾಡ್‌ಫಾದರ್ ಲಾಲ್‌ಕೃಷ್ಣ ಅಢ್ವಾನಿ ಮಾತ್ರವಲ್ಲ ಇಡೀ ಬಿಜೆಪಿ ಹೈಕಮಾಂಡಿನ ಮರ್ಯಾದೆ ಬೀದಿ ಪಾಲಾಗಿದೆ. ಅತ್ಯಂತ ಶಿಸ್ತಿನ ಪಕ್ಷವೆಂದೇ ಹೆಸರಾದ ಬಿಜೆಪಿಯಲ್ಲಿ ಈಗ ಅಶಿಸ್ತು, ಗೊಂದಲ ಮತ್ತು ಪರಸ್ಪರ ಮಣ್ಣೆರಚುವ ಕೆಲಸ ತಾಂಡವವಾಡುತ್ತಿದೆ.

ವಾಸ್ತವವಾಗಿ ಯಡಿಯೂರಪ್ಪನವರ ರಾಜೀನಾಮೆ ಮತ್ತು ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಒಂದು ರೀತಿಯಲ್ಲಿ ಯಡ್ಡಿ ಮತ್ತು ಅನಂತಕುಮಾರ್ ನಡುವೆ ನಡೆದ ಯುದ್ಧ. ಹೈಕಮಾಂಡ್‌ಗೆ ನಿಕಟರಾಗಿರುವ ಅನಂತ್‌ಕುಮಾರ್ ಮೇಲೆ ಯಡ್ಡಿಗೆ ಆರಂಭದಿಂದಲೂ ಸಿಟ್ಟಿತ್ತು ಎಂಬುದು ಹೊಸ ವಿಷಯವೇನಲ್ಲ. ಹೀಗಾಗಿ ಹೈಕಮಾಂಡ್ ಯಡ್ಡಿಗೆ ರಾಜೀನಾಮೆ ನೀಡಬೇಕೆಂದು, ಅದರಲ್ಲೂ ಹನ್ನೆರಡು ಗಂಟೆಯೊಳಗೆ ರಾಜೀನಾಮೆ ಸಲ್ಲಿಸಬೇಕೆಂದು ಸೂಚನೆ ನೀಡಿದಾಗ ಯಡ್ಡಿ ಮೊದಲಿಗೆ ಲೆಕ್ಕಾಚಾರ ಹಾಕಿದ್ದು ಯಾವುದೇ ಕಾರಣಕ್ಕೂ ತನ್ನ ಆಜನ್ಮ ವೈರಿಯಾದ ಅನಂತ್‌ಕುಮಾರ್ ಮುಖ್ಯಮಂತ್ರಿ ಸ್ಥಾನವನ್ನಲಂಕರಿಸಬಾರದು ಎಂದು.



ಆರಂಭದಲ್ಲಿ ಯಡ್ಡಿ ಬಣ ಸದಾನಂದ ಗೌಡರ ಹೆಸರನ್ನು ಮಾತ್ರ ಮುಖ್ಯಮಂತ್ರಿ ಸ್ಥಾನಕ್ಕೆ ಸೂಚಿಸಿದರೆ ಯಡ್ಡಿ ವಿರೋಧಿ ಬಣದಲ್ಲಿ ಮೂರು ಹೆಸರುಗಳು ಚಾಲ್ತಿಯಲ್ಲಿದ್ದವು. ಹೈಕಮಾಂಡ್‌ನ ರಾಯಭಾರಿಯಾಗಿರುವ ಅನಂತ್‌ಕುಮಾರ್, ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಮತ್ತು ಉತ್ತರಕರ್ನಾಟಕದ ಲಿಂಗಾಯತ ನಾಯಕ ಜಗದೀಶ್ ಶೆಟ್ಟರ್.... ಹೀಗೆ ಮೂರು ಹೆಸರುಗಳು ಮುಖ್ಯಮಂತ್ರಿ ಸ್ಥಾನಕ್ಕೆ ಕೇಳಿಬಂದವು. ಈ ಮಧ್ಯೆ ಗೃಹಸಚಿವ ಅಶೋಕ್ ಹೆಸರು ಕೂಡಾ ಅಲ್ಲೊಮ್ಮೆ ಇಲ್ಲೊಮ್ಮೆ ಕೇಳಿಬರುತ್ತಿತ್ತು.



'ಇಂತಹ ಸನ್ನಿವೇಶದಲ್ಲಿ ಸದಾನಂದ ಗೌಡರ ವಿರೋಧಿ ಮತಗಳು ಹಂಚಿ ಹರಿದುಹೋಗುತ್ತವೆ. ಅದರ ಬದಲಿಗೆ ನಾವೆಲ್ಲ ಸೇರಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಬೇಕು' ಎಂದು ಈಶ್ವರಪ್ಪ ಮತ್ತು ಅನಂತಕುಮಾರ್ ತೀರ್ಮಾನಿಸಿದರು. ಈ ಮಧ್ಯೆ ಅನಂತ್‌ಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಹೇರುವ ಹೈಕಮಾಂಡ್ ಪ್ಲಾನ್‌ಅನ್ನು ದೆಹಲಿ ನಾಯಕರು ಡ್ರಾಪ್ ಮಾಡಿದರು. ಯಾಕೆಂದರೆ ಅನಂತ್‌ಕುಮಾರ್ ಅವರನ್ನು ನಾಯಕನನ್ನಾಗಿ ಮಾಡಿದರೆ ಪಕ್ಷ ಎರಡು ಹೋಳಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಬೆಂಗಳೂರಿಗೆ ಬಂದಿದ್ದ ಅರುಣ್ ಜೇಟ್ಲಿ ಮತ್ತು ರಾಜನಾಥ್ ಸಿಂಗ್ ಹೈಕಮಾಂಡಿಗೆ ಹೇಳಿದ್ದರು. ಈ ಸುದ್ದಿ ತಲುಪಿದ ಕೂಡಲೇ "ಮುಖ್ಯಮಂತ್ರಿ ಸ್ಪರ್ಧೆಯಿಂದ ಹಿಂದೆ ಸರಿ" ಎಂದು ಅಢ್ವಾನಿ ತನ್ನ ಶಿಷ್ಯ ಅನಂತ್‌ಗೆ ಸೂಚಿಸಿದರು. ಅದೇ ಸಂದರ್ಭದಲ್ಲಿ ಯಡಿಯೂರಪ್ಪ ಪಕ್ಷದ ರಾಜ್ಯಾಧ್ಯಕ್ಷ ಆಗಬಾರದು ಎಂಬ ಏಕೈಕ ಕಾರಣಕ್ಕೆ ಈಶ್ವರಪ್ಪ ಅವರ ಬಾಯಲ್ಲಿ "ನಾನು ಮೂರು ವರ್ಷಕ್ಕೆ ಅಧ್ಯಕ್ಷನಾಗಿ ಆಯ್ಕೆಯಾದವನು. ನಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲ..." ಎಂದು ಬಲವಂತವಾಗಿ ಹೇಳಿಸಿದರು. ಮಾತ್ರವಲ್ಲ, ಲಿಂಗಾಯತ ಸಮುದಾಯದ ಜಗದೀಶ್ ಶೆಟ್ಟರ್ ಅವರೇ ಮತ್ತೊಬ್ಬ ಲಿಂಗಾಯತ ನಾಯಕ ಯಡ್ಡಿಯನ್ನು ಮಟ್ಟಹಾಕಲು ಸರಿಯಾದ ವ್ಯಕ್ತಿ ಎಂಬ ತೀರ್ಮಾನಕ್ಕೆ ಈಶ್ವರಪ್ಪ ಮತ್ತು ಅನಂತಕುಮಾರ್ ಜೋಡಿ ಬಂದಿತು.

"ಯಾವುದೇ ಕಾರಣಕ್ಕೆ ಸದಾನಂದ ಗೌಡರನ್ನು ಹೊರತುಪಡಿಸಿ ಬೇರೆ ಯಾರೂ ಮುಖ್ಯಮಂತ್ರಿ ಆಗಕೂಡದು. ಹಾಗೆಯೇ ಪಕ್ಷದ ರಾಜ್ಯ ಅಧ್ಯಕ್ಷನಾಗಿ ನನ್ನನ್ನೇ ಆಯ್ಕೆ ಮಾಡಬೇಕು" ಎಂಧು ಯಡಿಯೂರಪ್ಪ ಹೈಕಮಾಂಡ್‌ಗೆ ಆದೇಶ ನೀಡಿದರು. ಭ್ರಷ್ಟಾಚಾರದ ಆರೋಪದ ಮೇಲೆ ಸಿಎಂ ಕುರ್ಚಿಯಿಂದ ಕೆಳಗಿಳಿಯುತ್ತಿರುವ ಈ ಮನುಷ್ಯ ರಾಷ್ಟ್ರೀಯ ಪಕ್ಷವಾದ ಬಿಜೆಪಿ ಹೈಕಮಾಂಡಿಗೆ ಆದೇಶ ನೀಡುವುದನ್ನು ಎಲ್ಲಾ ನಾಯಕರು ಗಂಭೀರವಾಗಿ ಪರಿಗಣಿಸಿದರು. ಯಾವುದೇ ಕಾರಣಕ್ಕೂ ಯಡಿಯೂರಪ್ಪನವರ ಮನುಷ್ಯ ಸಿಎಂ ಕುರ್ಚಿಯಲ್ಲಿ ಕುಳಿತುಕೊಳ್ಳಬಾರದು ಎಂಬ ತೀರ್ಮಾನಕ್ಕೆ ಹೈಕಮಾಂಡ್ ಬಂದಿತು.


ಹೀಗಾಗಿ ಮೊನ್ನೆ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ದಿನದಂದು ಬೆಳಗ್ಗೆ ಅಢ್ವಾನಿಯವರು ರಾಷ್ಟ್ರೀಯ ಟಿವಿ ಚಾನೆಲ್‌ನಲ್ಲಿ ಮಾತನಾಡುತ್ತಾ "ನಮಗೆ ವ್ಯಕ್ತಿ ಮುಖ್ಯವಲ್ಲ, ಸಿದ್ಧಾಂತ ಮುಖ್ಯ, ಪಕ್ಷ ಮುಖ್ಯ. ಆ ಕಾರಣಕ್ಕಾಗಿ ಒಂದುವೇಳೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಪತನವಾದರೂ ಪರವಾಗಿಲ್ಲ. ಯಡ್ಡಿಯ ಉತ್ತರಾಧಿಕಾರಿ ಅವರ ಕಡೆಯವರು ಆಗಬಾರದು..." ಎಂದು ಹೇಳಿದರು.

ಇದರರ್ಥ, ಯಡ್ಡಿ ಸೂಚಿಸಿದ ವ್ಯಕ್ತಿಯನ್ನು ನಾಯಕನಾಗಿ ಮಾಡಿದರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿಯ ವರ್ಚಸ್ಸು ಮತ್ತು ಇಮೇಜ್ ಹಾಳಾಗುತ್ತದೆ ಎಂಬುದಾಗಿತ್ತು. ಆದರೆ ಇತ್ತ ಕರ್ನಾಟಕದಲ್ಲಿ 65 ಶಾಸಕರನ್ನು ತನ್ನ ಜೊತೆಗಿರಿಸಿಕೊಂಡಿದ್ದ ಯಡಿಯೂರಪ್ಪ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಕುರ್ಚಿ ತನ್ನ ವಿರೋಧಿ ಬಣದವರಿಗೆ ನೀಡಬಾರದೆಂದು ಹಠ ಹಿಡಿದರು.

ರಾಜ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಧರ್ಮೇಂದ್ರ ಪ್ರಧಾನ್ ಒಮ್ಮೆ ಅನೌಪಚಾರಿಕವಾಗಿ ಮಾತನಾಡುತ್ತಾ "ನಮಗೆ ಮೈಸೂರು ಯುದ್ಧ ಮುಖ್ಯವಲ್ಲ, ಅದರ ಬದಲಿಗೆ ನಾವು ಕುರುಕ್ಷೇತ್ರ ಯುದ್ಧದ ಬಗ್ಗೆ ಹೆಚ್ಚು ಗಮನ ನೀಡುತ್ತಿದ್ದೇವೆ" ಎಂದು ಹೇಳಿದ್ದು ಕೂಡಾ ಮಾರ್ಮಿಕವಾಗಿತ್ತು ಮತ್ತು ಅಢ್ವಾನಿಯವರ ಮಾತನ್ನು ಪುಷ್ಟೀಕರಿಸಿತ್ತು. ಅಂದರೆ ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರವನ್ನು ವಿಸರ್ಜಿಸಲು ಸ್ವತಃ ಹೈಕಮಾಂಡ್ ಅತ್ಯುತ್ಸಾಹದಲ್ಲಿತ್ತು. ಇದಕ್ಕೆ ಕಾರಣ ಸಿಂಪಲ್: ಯಡ್ಡಿಯ ಬದಲು ಅನಂತ್‌ಕುಮಾರ್ ಬಣದ ವ್ಯಕ್ತಿ ಮುಖ್ಯಮಂತ್ರಿಯಾಗಬೇಕು ಎಂಬುದು ಹೈಕಮಾಂಡಿನ ಇರಾದೆ.

ಈ ಕಾರಣಕ್ಕಾಗಿಯೇ ಭಾರತೀಯ ರಾಜಕಾರಣದ ಚರಿತ್ರೆಯಲ್ಲಿ ಅದರಲ್ಲೂ ಬಿಜೆಪಿ ಪಕ್ಷದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರಹಸ್ಯ ಮತದಾನದ ಮುಖಾಂತರ ನಾಯಕನ ಆಯ್ಕೆಯ ಕಸರತ್ತಿಗೆ ಹೈಕಮಾಂಡ್ ಕೈಹಾಕಿತು. ಇದರ ಹಿಂದಿದ್ದ ತರ್ಕ ಇಷ್ಟೆ: ಜಗದೀಶ ಶೆಟ್ಟರ್‌ಗೆ ಯಡ್ಡಿ ಬಣದ ಏಳೆಂಟು ಲಿಂಗಾಯತ ಶಾಸಕರು ಜಾತಿ ಮೇಲಿನ ಅಭಿಮಾನದಿಂದ ಮತ ಹಾಕಬಹುದು ಎಂದು ಲೆಕ್ಕಾಚಾರ. ಒಂದು ದಿನದ ಮೊದಲೇ ಯಡ್ಡಿ ಬಣದ ಲಿಂಗಾಯತ ಶಾಸಕರಿಗೆ ಲಿಂಗಾಯತ ಸ್ವಾಮೀಜಿಗಳ ಮುಖಾಂತರ 'ವಿಪ್' ಕೂಡಾ ಜಾರಿ ಮಾಡಿಸಿ ಜಗದೀಶ್ ಶೆಟ್ಟರನ್ನು ಗೆಲ್ಲಿಸಬೇಕೆಂದು ತೆರೆಮರೆಯಲ್ಲಿ ತಂತ್ರ ಮಾಡಿದರು. ಈ ಕಾರಣಕ್ಕಾಗಿಯೇ ಯಡಿಯೂರಪ್ಪ ಬಣದಲ್ಲಿ ಗುರುತಿಸಿಕೊಂಡಿದ್ದ ಬಳ್ಳಾರಿಯ ರೆಡ್ಡಿ ಸಹೋದರರು ಕೊನೆಯ ಎರಡು ದಿನ ಅನಂತ್‌ಕುಮಾರ್ ಗುಂಪಿನಲ್ಲಿ ಗುರುತಿಸಿಕೊಂಡರು. ಅಷ್ಟೇ ಅಲ್ಲ, ಚುನಾವಣೆಯ ದಿನ ಕ್ಯಾಪಿಟಲ್ ಹೋಟೆಲ್‌ನಲ್ಲಿ ರೆಡ್ಡಿ ಮತ್ತು ಒಂಬತ್ತು ಜನ ಶಾಸಕರು ಮೂರನೆಯ ಬಣವಾಗಿ ಗುರುತಿಸಿಕೊಂಡು ಬೇರೆ ಸ್ಥಳದಲ್ಲಿ ಕುಳಿತುಕೊಂಡಿದ್ದರು.


ಅನಂತಕುಮಾರ್ ಮತ್ತು ಬಳ್ಳಾರಿಯ ರೆಡ್ಡಿ ಸಹೋದರರು ಅನಾದಿಕಾಲದಿಂದಲೂ ಸ್ನೇಹಿತರಾಗಿರುವುದರಿಂದ ಆ ಗ್ಯಾಂಗನ್ನು ಯಡ್ಡಿ ಬಣದಿಂದ ಹೊರತರುವಲ್ಲಿ ಅನಂತಕುಮಾರ್ ಯಶಸ್ವಿಯಾಗಿದ್ದರು. ಆದರೆ ಅವರ ಲೆಕ್ಕಾಚಾರ ಯಡವಟ್ಟಾಗಿದ್ದೇ ಲಿಂಗಾಯತ ಶಾಸಕರ ವಿಷಯದಲ್ಲಿ.



ಒಬ್ಬನೇ ಒಬ್ಬ ಲಿಂಗಾಯತ ಶಾಸಕ ಅನಂತ್‌ಕುಮಾರ್‌ರ ಸಿಹಿಮಾತು ಕೇಳಿ ಮರುಳಾಗಲಿಲ್ಲ! ಸ್ವಾಮೀಜಿಗಳ 'ವಿಪ್'ಗೂ ಬೆಲೆ ನೀಡಲಿಲ್ಲ, ಬದಲಾಗಿ ಅವರೆಲ್ಲ ಬಂಡೆ ಕಲ್ಲಿನಂತೆ ಯಡ್ಡಿ ಜೊತೆಗೆ ಗಟ್ಟಿಯಾಗಿ ನಿಂತರು. ಹೀಗಾಗಿ ಕೊನೆಯಲ್ಲಿ ಹೈಕಮಾಂಡಿನ ಆಶಯಕ್ಕ ವಿರುದ್ಧವಾಗಿ ಲೋಕಸಭಾ ಸದಸ್ಯ ಡಿ.ವಿ.ಸದಾನಂದ ಗೌಡ ನಾಯಕನಾಗಿ ಆಯ್ಕೆಯಾದರು.

ಯಡಿಯೂರಪ್ಪ ತನ್ನ ಶಾಸಕರಿಗೆಲ್ಲ ಮುಂದಿನ ಚುನಾವಣೆಯಲ್ಲಿ ಟಿಕೆಟ್ ನೀಡುವುದು ಮಾತ್ರವಲ್ಲ, ಚುನಾವಣೆಯ ಎಲ್ಲಾ ಖರ್ಚನ್ನು ಭರಿಸುತ್ತೇನೆ ಎಂಬ ಆಶ್ವಾಸನೆಯನ್ನು ನೀಡಿದರು. ಆದರೆ ಅನಂತ್ ಬಣದಿಂದ ಯಾವುದೇ ಶಾಸಕರಿಗೆ ಇಂತಹ ಭರವಸೆಯನ್ನು ನೀಡಲು ಯಾವುದೇ ನಾಯಕ ಮನಸು ಮಾಡಲಿಲ್ಲ! ಅಷ್ಟೆ ಅಲ್ಲ, ಆರೆಸ್ಸೆಸ್ ನಾಯಕರು ಮತ್ತು ಸ್ವಾಮೀಜಿಗಳ ಮಾತು ಕೇಳಿ ಲಿಂಗಾಯತ ಶಾಸಕರು ಜಗದೀಶ ಶೆಟ್ಟರಿಗೆ ಮತ ಹಾಕುತ್ತಾರೆ, ಆದ್ದರಿಂದ ಶಾಸಕರಿಗೆ ಹಣ ಕೊಡುವ ಅಗತ್ಯವಿಲ್ಲ ಎಂದು ಅನಂತ್‌ಕುಮಾರ್ ಕೂಲಾಗಿದ್ದರು. ಆದರೆ ಶಾಸಕರು ಈಗ ಸಿದ್ಧಾಂತ ಮತ್ತು ಪಕ್ಷ ನಿಷ್ಠೆ ಮರೆತು ವ್ಯಕ್ತಿ ನಿಷ್ಠೆಯನ್ನು ತೋರಿಸುತ್ತಿದ್ದಾರೆ ಎಂಬುದು ಅನಂತ್ ತಂಡಕ್ಕೆ ಅರಿವಾದದ್ದೇ ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರ!


ಯಡ್ಡಿ ಒಂದೆಡೆ ಪಡ್ಡೆಹುಡುಗರ ತರಹ ವರ್ತಿಸುವ ರೇಣುಕಾಚಾರ್ಯ, ಬೇಳೂರು ಗೋಪಾಲಕೃಷ್ಣ, ಹರೀಶ್ ಮತ್ತು ಇತರೆ ಶಾಸಕರನ್ನು ತನ್ನ ಪರ ಮಾಧ್ಯಮಗಳ ಮುಂದೆ ಮಾತನಾಡಲು ಕಳುಹಿಸಿಕೊಟ್ಟರೆ ಮತ್ತೊಂದೆಡೆ ಪಕ್ಷದ ವರಿಷ್ಠರೊಂದಿಗೆ ಮಾತನಾಡಲು ಸಜ್ಜನರೆನಿಸಿಕೊಂಡಿರುವ ಬೊಮ್ಮಾಯಿ, ನಿರಾಣಿ ಮತ್ತು ಪ್ರಭಾಕರ್ ಕೋರೆಗಳನ್ನು ಕಳುಹಿಸಿಕೊಡುತ್ತಿದ್ದರು. ಹಾಗೆಯೇ ಇನ್ನೊಂದು ಕಡೆ "ರೆಸಾರ್ಟ್ ಅರೆಸ್ಟ್" ಆಗಿದ್ದ ಶಾಸಕರ ಬೇಡಿಕೆಗಳನ್ನು ಪೂರೈಸಲು ಪುಣ್ಯಕೋಟಿಗಳಂತಿರುವ ವಿ.ಎಸ್.ಆಚಾರ್ಯ ತರಹದವರನ್ನು ಕಳುಹಿಸಿಕೊಡುತ್ತಿದ್ದರು.



ಆದರೆ ಅನಂತ್‌ಕುಮಾರ್ ಬಣದಲ್ಲಿ ಇಂತಹ ತಂತ್ರಗಾರಿಕೆಯ ಕೊರತೆ ಎದ್ದು ಕಾಣುತಿತ್ತು. ಅಶೋಕ್, ಈಶ್ವರಪ್ಪ ಮತ್ತು ಸಿ.ಟಿ.ರವಿ ಮಾಧ್ಯಮದ ಮುಂದೆ ಮಾತನಾಡಲು ಬರುತ್ತಿದ್ದರೆ ವಿನಃ ಶಾಸಕರ ಕುಂದುಕೊರತೆಗಳನ್ನು, ಬೇಡಿಕೆಗಳನ್ನು ಈಡೇರಿಸಲು ಯಾರೂ ಇರಲೇ ಇಲ್ಲ! ಇವೆಲ್ಲಕ್ಕಿಂತ ಮುಖ್ಯವಾಗಿ ಸದಾನಂದ ಗೌಡರನ್ನು ಆಯ್ಕೆ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ಎಂಟು ಶಾಸಕರನ್ನು ಯಡ್ಡಿ ಒಂದೇಟಿಗೆ ಬುಟ್ಟಿಗೆ ಹಾಕಿಕೊಂಡಿದ್ದರು!

ಕೊನೆಗೆ ಹೈಕಮಾಂಡಿಗೆ ಮುಖಭಂಗವಾದರೂ, ಅನಂತ್‌ಕುಮಾರ್ ಬಣ್ಣ ಬಯಲಾದರೂ, ಈಶ್ವರಪ್ಪನವರ ಮುಖ ಮುದುಡಿದರೂ ಚುನಾವಣೆಯ ಮೂಲಕ ಶಾಸಕಾಂಗದ ನಾಯಕನನ್ನು ಆಯ್ಕೆ ಮಾಡಿರುವುದು ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವದ ಸೂಚನೆ ಎನ್ನುತ್ತಿರುವುದು 'ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬ ಮಾತನ್ನು ನೆನಪಿಸುತ್ತಿದೆ.....

• ಶೆಣೈ




ಸದಾ 'ಆನಂದ'ದ ಹಿಂದೆ ದುಃಖದ ಕಾರ್ಮೋಡ...

ಸದಾನಂದ ಗೌಡ ಅಂದಾಕ್ಷಣ ಕಣ್ಣೆದುರು ಬರುವುದು ನಗು ಮತ್ತು ಕಾಯಂ ಮಂದಹಾಸ. ಅದೇ ಅವರ ಟ್ರೇಡ್‌ಮಾರ್ಕ್ ಆಗಿ ಚಾಲ್ತಿಯಲ್ಲಿದೆ. ಆದರೆ ಅದರ ಹಿಂದೆ ನೋವಿನ ಕಾರ್ಮೋಡವಿರುವುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

ಪಕ್ಷ, ರಾಜಕೀಯಗಳನ್ನೆಲ್ಲ ಬದಿಗಿರಿಸಿ ಸದಾನಂದ ಗೌಡರ ಬದುಕನ್ನು ದಿಟ್ಟಿಸಿದರೆ ನೋವಿನ ಕಾರ್ಮೋಡ ಸ್ಪಷ್ಟವಾಗಿ ಗೋಚರಿಸುತ್ತದೆ. ಅದರಲ್ಲಿ ಪುತ್ರಶೋಕವೆಂಬುದು ಮೊದಲ ಸ್ಥಾನದಲ್ಲಿದ್ದರೆ, ದೈಹಿಕ ಕಾಯಿಲೆಗಳೂ ಜೊತೆಯಾಗಿ ಹೈರಾಣುಗೊಳಿಸಿವೆ.

1981 ರಲ್ಲಿ ಡಾಟಿಯೊಂದಿಗೆ ದಾಂಪತ್ಯ ಜೀವನಕ್ಕೆ ಅಡಿಯಿಟ್ಟ ಸದಾನಂದಗೌಡರಿಗೆ ಕೌಶಿಕ್ ಹಾಗೂ ಕಾರ್ತಿಕ್ ಎಂಬಿಬ್ಬರು ಗಂಡುಮಕ್ಕಳು ಜನಿಸಿದವು. ದುರಂತವೆಂದರೆ ಈಗ್ಗೆ ಎಂಟು ವರ್ಷಗಳ ಹಿಂದೆ ಹಿರಿಯ ಮಗ ಕೌಶಿಕ್ ಮೋಟಾರ್ ಸೈಕಲ್ ಅಪಘಾತದಲ್ಲಿ ಅಸುನೀಗಿದ. ಈ ದುಃಖದ ನಡುವೆಯೇ ಅದನ್ನು ಸಾರ್ವಜನಿಕವಾಗಿ ತೋರಿಸಿಕೊಳ್ಳದೆ ರಾಜಕೀಯವಾಗಿ ನೆಲೆಗೊಳ್ಳಲೆತ್ನಿಸಿದ. ಸದಾನಂದರಿಗೆ ಈಗೊಂದು ಆರೇಳು ವರ್ಷದ ಹಿಂದೆ ದೈಹಿಕ ಕಾಯಿಲೆ ಬಾಧಿಸಿತು. ಅದು ತೀವ್ರ ಸ್ವರೂಪ ಪಡೆದು ತೀವ್ರ ನಿಗಾಘಟಕಕ್ಕೂ ದಾಖಲಾಗಿದ್ದರು. ಬದುಕುವುದೇ ಕಷ್ಟವೆಂಬಂಥ ಪರಿಸ್ಥಿತಿ ವಾರಗಟ್ಟಲೆ ಮುಂದುವರೆದು ಹೇಗೋ ಬಚಾವಾಗಿದ್ದರು. ಆದರೆ ಇಂದಿಗೂ ಅದರ ಬಾಧೆಗಳಿವೆ.



ಜಖಂಗೊಂಡ ಕಾರ್ತಿಕ್ ಕಾರು...

ಇನ್ನು 2008 ರಲ್ಲಿ ಮತ್ತೊಂದು ಆಘಾತ ಎದುರಾಗಿತ್ತು. ತನ್ನ ಸ್ನೇಹಿತನೊಂದಿಗೆ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಕಾರಲ್ಲಿ ಮಣಿಪಾಲದಿಂದ ಉಡುಪಿಗೆ ವಾಪಸಾಗುತ್ತಿದ್ದ ಸದಾನಂದರ ಎರಡನೇ ಮಗ ಕಾರ್ತಿಕ್ ಭಯಂಕರ ಆಕ್ಸಿಡೆಂಟ್ ಮಾಡಿಕೊಂಡಿದ್ದ. ಕಾರ್ತಿಕ್‌ನ ತಲೆ ಸೇರಿದಂತೆ ಇಡೀ ದೇಹ ನಜ್ಜುಗುಜ್ಜಾಗಿತ್ತು. ಆತನೊಂದಿಗೆ ಅಪಘಾತವಾದಾಗ ಕಾರ್‌ನಲ್ಲಿದ್ದ ಸ್ನೇಹಿತ ಸಂತೋಷ್ ಕಾಂಚನ್ ಆಸ್ಪತ್ರೆಯಲ್ಲೇ ಅಸುನೀಗಿದ್ದ. ಅಂತೂ ಭಾರೀ ಶಸ್ತ್ರ ಚಿಕಿತ್ಸೆಗಳ ತರುವಾಯ ಕಾರ್ತಿಕ್ ಸುಧಾರಿಸಿಕೊಂಡಿದ್ದ.

ಈ ರೀತಿ ಅನೇಕ ಹೊಡೆತಗಳಿಗೆ ಸಿಕ್ಕು ನೋವಿನ ನಡುವೆಯೂ ನಗುತ್ತಿರುವವರು ಸದಾನಂದ ಗೌಡ. ಇಂಥಾ ಹೊಡೆತಗಳಿಂದಲೇ ಈತನಿಗೆ ಬದುಕಿನ ನಶ್ವರತೆಯ ಅರಿವಾಗಿರಲಿಕ್ಕೂ ಸಾಕು. ಇದೆಲ್ಲದರ ನಡುವೆಯೇ ಅರಸಿ ಬಂದ ಮುಖ್ಯಮಂತ್ರಿಗಿರಿಯನ್ನು ಹೇಗೆ ನಿಭಾಯಿಸುತ್ತಾರೆ, ಈತನ ಮುಖದ ನಗು ಜನಸಾಮಾನ್ಯರ ಮುಖದಲ್ಲೂ ಪ್ರತಿಫಲಿಸುವಂಥಾ ಆಡಳಿತ ನಡೆಸಿಯಾರೇ....


ಇವು ಸದ್ಯದ ಪ್ರಶ್ನೆಗಳು.....

ಬಿಜೆಪಿಗೆ ಈಗ ಹಿಂದೂತ್ವಕ್ಕಿಂತ ಜಾತಿಯೇ ಲಾಭಕರ

ದುಡ್ಡು, ಅಧಿಕಾರ ಇವೆರಡೂ ಸಿಗುವುದಾದರೆ ಸಿದ್ಧಾಂತ ಯಾವನಿಗೆ ಬೇಕು ಹೇಳಿ?

ಬಿಜೆಪಿಯ ಹೊಸ ವರಸೆ ಇದು.

ಸಂಘ ಪರಿವಾರದ ಹಿಂದೂತ್ವವಾದಿ ಸಿದ್ಧಾಂತವು ಜನವಿರೋಧಿ ಹಾಗೂ ಸಮಾಜ ವಿರೋಧಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಆದರೂ ಅವರಿಗೆ ಒಂದು ಸಿದ್ಧಾಂತ ಅಂತ ಇದೆಯಲ್ಲ, ಈಗ ಆ ಘೋರ ಹಿಂದೂತ್ವವಾದಿ ಸಿದ್ಧಾಂತದಿಂದ ಆದ ಲಾಭ ಹೆಚ್ಚೋ ಅಥವಾ ಜಾತಿ ರಾಜಕೀಯದಿಂದ ಸಿಗುತ್ತಿರುವ ಲಾಭ ಜಾಸ್ತಿಯಾ ಎಂದು ಬಿಜೆಪಿಗಳು ಲೆಕ್ಕ ಹಾಕುತ್ತಿದ್ದಾರೆ.



ವಾಮನಾಚಾರ್ಯ

ಕರ್ನಾಟಕದಲ್ಲಿ ಯಡ್ಡಿ ಮತ್ತು ಗ್ಯಾಂಗ್‌ನ ಭ್ರಷ್ಟಾಚಾರ-ಪುಂಡಾಟಗಳಿಗೆ ಕಡಿವಾಣ ಹಾಕುವ ಬದಲಿಗೆ ಹೇಗೊ ಅಡ್ಜಸ್ಟ್ ಮಾಡಿಕೊಳ್ಳೋಣ ಎನ್ನುವ ಬಿಜೆಪಿ ಹೈಕಮಾಂಡ್‌ನ ವರ್ತನೆಗಳೇ ಇದಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕದಂತಹ ದೊಡ್ಡ ರಾಜ್ಯದಲ್ಲಿ ಲಿಂಗಾಯತ ಜನಾಂಗ, ಮಠಾಧೀಶರು, ಭ್ರಷ್ಟ ಲಿಂಗಾಯತ ಉನ್ನತಾಧಿಕಾರಿಗಳು ಹಾಗೂ ದೊಡ್ಡ ದೊಡ್ಡ ಲಿಂಗಾಯತ ಬ್ಯುಸಿನೆಸ್‌ಮೆನ್‌ಗಳ ಒಂದು ದುಷ್ಟಕೂಟ ಈಗ ಅಸ್ತಿತ್ವಕ್ಕೆ ಬಂದಿದೆ. ಈ ಗುಂಪಿನ ರಾಜಕೀಯ ನಾಯಕನಾಗಿ ಯಡಿಯೂರಪ್ಪ ಮೆರೆಯುತ್ತಿದ್ದಾನೆ. ಹಣ-ಅಧಿಕಾರವೇ ಆದ್ಯತೆಯಾಗಿರುವ ಈ ಖೂಳರ ಗುಂಪಿಗೆ ಹಿಂದೂತ್ವವಾದರೂ ಸೈ ಅಥವಾ ಬೇರೆ ಎಂಥದ್ದೇ ಸ್ಲೋಗನ್ ಆದರೂ ಸರಿ ಒಟ್ಟಿನಲ್ಲಿ ಅಧಿಕಾರ ತಮ್ಮ ಬಳಿ ಇರಬೇಕು ಎನ್ನುವ ಅಜೆಂಡಾ ಇದೆ. ಇವರೆಲ್ಲಾ ಈಗ ಬಿಜೆಪಿಯಲ್ಲಿರುವುದರಿಂದ ಬಿಜೆಪಿ ಪಾರ್ಟಿಯು ಕೂಡಾ ದುಡ್ಡು-ಅಧಿಕಾರ ಹಿಂದೂತ್ವದಿಂದ ಬಂದರೇನು ಲಿಂಗಾಯತರ ಪ್ರಬಲ ಲಾಬಿ ಮೂಲಕ ಬಂದರೇನು ಎಲ್ಲಾ ಒಂದೇ ಎನ್ನುವ ತೀರ್ಮಾನ ಮಾಡಿದಂತಿದೆ.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯ ಕರ್ನಾಟಕದ ಚಡ್ಡಿ ವಾಮನಾಚಾರ್ಯರ ಮಾತುಗಳನ್ನು ಸರಿಯಾಗಿ ಕೇಳಿಸಿಕೊಂಡರೆ ನಮಗಿದು ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ.

ಕಳೆದ ವಾರ ಟಿವಿ ಚಾನಲ್ ಒಂದರ ಚರ್ಚೆಯಲ್ಲಿ ಭಾಗವಹಿಸಿದ್ದ ವಾಮನಾಚಾರಿ ತಮ್ಮ ಪಕ್ಷದ ಹೊಸ ನಿಲುವುಗಳ ಬಗ್ಗೆ ಹೀಗೆ ವಿವರಿಸಿದ್ದಾರೆ.

1. ಈಗ ಜೊತೆಗಿರುವ ಪ್ರಬಲ ಜಾತಿಯವರನ್ನು ದೂರ ಮಾಡಿಕೊಳ್ಳಕೂಡದು. ಎದುರು ಹಾಕಿಕೊಳ್ಳಬಾರದು.

2. ಏನೇ ಆಗಲಿ ಕೈಲಿರುವ ಅಧಿಕಾರ ಕಳೆದುಕೊಳ್ಳಬಾರದು.

3. ವ್ಯಕ್ತಿಗಿಂತ ಪಕ್ಷ ದೊಡ್ಡದು ಎನ್ನುವುದನ್ನು ಸಾಬೀತು ಮಾಡಬೇಕು.

4. ಹಗರಣ ಮುಕ್ತ ಸರ್ಕಾರ ಕೊಡಬೇಕು.

ಈ ಹೊಸ ಗೈಡ್‌ಲೈನ್ಸ್‌ಗಳನ್ನು ಬಿಜೆಪಿಯ ನ್ಯಾಷನಲ್ ಲೀಡರ್‌ಗಳು ಕರ್ನಾಟಕದಲ್ಲಿ ಬಿಕ್ಕಟ್ಟು ಹುಟ್ಟಿಕೊಂಡಾಗ ನೀಡಿದ್ದರಂತೆ.

ಏನಿದರ ಅರ್ಥ?

ಜೊತೆಗಿರುವ ಪ್ರಬಲ ಜಾತಿಗಳ ವಿರೋಧ ಕಟ್ಟಿಕೊಳ್ಳಬಾರದೆಂದರೇನೆ ಇನ್ನುಳಿದ ದಮನಿತ, ಹಿಂದುಳಿದ ಹಾಗೂ ದಲಿತರ ಪರ ಬಹಿರಂಗವಾಗಿ ನಿಲ್ಲಬಾರದೆಂಬುದು ತಾನೆ?

ಹಾಗಾದರೆ ಇವರ 'ಹಿಂದೂಗಳೆಲ್ಲಾ ಒಂದು' ಎನ್ನುವ ಸ್ಲೋಗನ್‌ನ ಗತಿಯೇನು?

ವಾಸ್ತವ ಏನೆಂದರೆ ಈ ಸ್ಲೋಗನ್ ಈಗೇನು ಕಣ್ಮರೆಯಾಗಿಬಿಡುವುದಿಲ್ಲ, ಆದರೆ **practicle politics** ನಲ್ಲಿ ಇವೆಲ್ಲಾ ಜಾಸ್ತಿ ಓಟು-ಸೀಟು ತರುವುದಿಲ್ಲ ಅನಿಸಿಬಿಟ್ಟಿರಬಹುದು ಬಿಜೆಪಿ ನಾಯಕರಿಗೆ. ಹಾಗಾಗಿಯೇ ಕರ್ನಾಟಕದಲ್ಲಿ ಲಿಂಗಾಯತರಿಂದ ದೂರವಾಗದ ರೀತಿಯಲ್ಲಿ ರಾಜಕೀಯ ನಡೆಸಬೇಕೆಂದು ಹೊಸ ಮುಖ್ಯಮಂತ್ರಿ ಸ್ಥಾನಕ್ಕೆ ಲಿಂಗಾಯತ ಜಗದೀಶ್ ಶೆಟ್ಟರ್ ಪರ ಹೈಕಮಾಂಡ್ ಲಾಬಿ ನಡೆಸಿತು. ಆದರೆ ಯಡ್ಡಿ ಗ್ಯಾಂಗ್ ಹಿಂದೂತ್ವ ಲಿಂಗಾಯತ ಮುಂತಾದ್ದನ್ನೆಲ್ಲಾ ಬೇಕಾದಾಗ ಬಳಸಿ, ಬೇಡವಾದಾಗ ನಿರ್ಲಕ್ಷಿಸುತ್ತಾ ಈಗ ಹೊಸ ಹಂತಕ್ಕೆ ತಲುಪಿದೆ.

ಈಗದು ಹಿಂದೂತ್ವವೂ ಅಲ್ಲ, ಬಿಜೆಪಿಯೂ ಅಲ್ಲ ಕೊನೆಗೆ ಹಂಡ್ರೆಡ್ ಪರ್ಸೆಂಟ್ ಲಿಂಗಾಯತ ಲಾಬಿಯೂ ಅಲ್ಲದ ಹೊಸ ಸಂಯೋಜನೆಯಿದು.

ಯಡ್ಡಿಯೇ ಇದರ ಕೇಂದ್ರಬಿಂದು. ಇದರೊಳಗಿನ ತಿರುಳನ್ನು ಇನ್ನಷ್ಟು ಬಗೆದು ನೋಡಿದರೆ ಅಲ್ಲಿ ಮಾತ್ರ ನಮಗೆ ಹಣ-ಅಧಿಕಾರದಾಹಿ ಲಿಂಗಾಯತ ಶ್ರೀಮಂತರ ಲಾಬಿ ಕಾಣಿಸುತ್ತದೆ.

ಈ ಹಲ್ಲುಬೀರ ಸದಾನಂದ ಗೌಡ ಏನೇ ಆದರೂ ಯಡ್ಡಿಯ ಕೈಗೊಂಬೆ ತಾನೆ?

ಬಿಜೆಪಿ ಹೈಕಮಾಂಡ್ ಇದನ್ನು ಈಗ ಒಪ್ಪಿಕೊಳ್ಳುವ ಮೂಲಕ ಮುಂದಿನ ಲೋಕಸಭಾ ಚುನಾವಣೆಯ ಹೊತ್ತಿಗೆ ಕಾಂಗ್ರೆಸ್‌ನ ಇನ್ನೊಂದು ರೂಪದಂತೆ ತನ್ನನ್ನು ತಾನೇ ಬದಲಿಸಿಕೊಂಡರೂ ಆಶ್ಚರ್ಯವಿಲ್ಲ.

ಯಡ್ಡಿ ಬಗಲಲ್ಲೇ ಇದ್ದ ದುಷ್ಮನ್ ಬಸು ಬೊಮ್ಮಾಯಿ!

ಲೋಕಾಯುಕ್ತರು ವರದಿ ಸಲ್ಲಿಸಿದಲ್ಲಿಂದ ಯಡ್ಡಿಯ ತಲೆ ಉರುಳುವವರೆಗಿನ ನಾಟಕದಲ್ಲಿ ಬಿಜೆಪಿಯ ಬಾಲಬಡುಕರ ಪಡೆಯೊಂದು ವಿಪರೀತ ಕಷ್ಟ ಪಡುತ್ತಿತ್ತು. ಆದರೆ ಅವರಲ್ಲನೇಕರು ಅನಿವಾರ್ಯ, ಸ್ವಾರ್ಥಗಳಿಂದ ಯಡ್ಡಿ ಹಿಂದಿದ್ದರೇ ಹೊರತು ಅಚಲ ನಿಷ್ಠೆ ಖಂಡಿತಾ ಇರಲಿಲ್ಲ. ಇಂಥ ಸ್ಥಿತಿಯಲ್ಲೇ ಯಡ್ಡಿ ಬಗಲಲ್ಲಿ ನಿಂತು ಜೋಲುಮೋರೆ ಹಾಕಿದ್ದವನು ಬಸವರಾಜ ಬೊಮ್ಮಾಯಿ. ಈತ ಸಾಕ್ಷಾತ್ ಬಿಜೆಪಿ ಹೈಕಮಾಂಡ್ ಮುಂದೆಯೇ ಯಡ್ಡಿ ವಿರುದ್ಧದ ನಾಟಕ ಮಂಡಿಸಿ, ಯಡ್ಡಿಯಿಂದಲೇ ಕಪಾಳಮೋಕ್ಷ ಮಾಡಿಸಿಕೊಂಡ ಕಥೆ ನಿಜಕ್ಕೂ ಚೇತೋಹಾರಿಯಾಗಿದೆ!

ಆರಂಭದಲ್ಲಿ ಯಡಿಯೂರಪ್ಪ ಹೈಕಮಾಂಡ್‌ಗೇ ಸೆಡ್ಡು ಹೊಡೆದು ಬಲಪ್ರದರ್ಶನಕ್ಕೆ ಮುಂದಾದನಲ್ಲಾ? ಆ ಸಂದರ್ಭದಲ್ಲಿ ಕೆಲ ಶಾಸಕರ ಸಹಿಯುಳ್ಳ ಪತ್ರವನ್ನು ನಿತಿನ್ ಗಡ್ಕರಿಗೆ ಫ್ಯಾಕ್ಸ್ ಮಾಡಿಸಿದ್ದ. ಇದೆಲ್ಲವೂ ಕಗ್ಗಂಟಾದಾಗ, ಎಲ್ಲಾ ತಂತ್ರಗಳೂ ಬುಡಮೇಲಾದಾಗ ಯಡ್ಡಿ ಅಕ್ಷರಶಃ ಬರಗೆಟ್ಟ ಸ್ಥಿತಿ ತಲುಪಿದ್ದ. ಆಸುಪಾಸಿನ ಭಟ್ಟಂಗಿಗಳು ಏನೇ ಹೇಳಿದರೂ ಗೋಣಾಡಿಸುವ ಮಟ್ಟಕ್ಕೆ ತಲುಪಿದ. ಇದನ್ನೇ ಬಳಸಿಕೊಂಡ ಬಸು ತರಹೇವಾರಿ ಮನೆಹಾಳು ಐಡಿಯಾ ಗಳನ್ನ ಕೊಟ್ಟು ಯಾಮಾರಿಸಿದ್ದ. ತಮಾಷೆಯೆಂದರೆ ಯಡ್ಡಿ ತನ್ನ ಬುಡಕ್ಕೇ ಭರ್ಜಿ ಇರಿಯುವ ಉತ್ಸಾಹದಲ್ಲಿದ್ದ ಬಸುವನ್ನು ವಿಪರೀತ ನಂಬಿದ. ಅದು ಎಷ್ಟರಮಟ್ಟಿಗೆಂದರೆ, ಪ್ರಭಾಕರ ಕೋರೆಯನ್ನು ಕರೆದುಕೊಂಡು ದೆಹಲಿಗೆ ಹೋಗಿ ಗಡ್ಕರಿಯನ್ನು ಭೇಟಿಯಾಗಿ ತನಗಿರುವ ಶಾಸಕರ ಬೆಂಬಲದ ಬಗ್ಗೆ ತಿಳಿಸುವ ಜವಾಬ್ದಾರಿಯನ್ನು ಬಸುಗೆ ಒಪ್ಪಿಸಿದ.

ಚೆಕ್ಕಿಬಾರಿ ರೊಟ್ಟಿಗೆ ಬಿದ್ದಂತೆ ಸಂಭ್ರಮಿಸಿದ ಬೊಮ್ಮಾಯಿ ಕೋರೆಯನ್ನು ಬೆಂಗಳೂರಲ್ಲೇ ಬಿಟ್ಟು ದೆಹಲಿಗೆ ಹಾರಿದ. ತದನಂತರ ಗಡ್ಕರಿಯ ಮುಂದೆ ಕುಕ್ಕರಿಸಿದವನು ಅಸಲಿಯತ್ತು ಪ್ರದರ್ಶಿಸಿ ಬಿಟ್ಟ. 'ಎಲ್ಲಾ ಶಾಸಕರೂ ಒಟ್ಟಾಗಿದ್ದಾರೆ, ತಾವು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿದ್ದೇವೆ' ಅಂದುಬಿಟ್ಟ. ಅದಲ್ಲದೆ 'ನಂಗೆ ಗೃಹಸಚಿವ ಸ್ಥಾನ ಕೊಡಿ' ಅಂತಲೂ ಅಂಗಲಾಚಿದ!



ಸೈಡಲ್ಲಿದ್ದುಕೊಂಡೇ ಸ್ಕೆಚ್....!

ಹೇಳಿಕೇಳಿ ಗಡ್ಕರಿ ಯಡಿಯೂರಪ್ಪನ ಪಾಪದ ಸಂಪತ್ತಿನ ಪಾಲುದಾರ. ಅದಲ್ಲದೆ ಬಸು ಬೊಮ್ಮಾಯಿ ಬೆಂಗಳೂರು ಬಿಡುವುದಕ್ಕೆ ಮೊದಲೇ ಯಡ್ಡಿ ಗಡ್ಕರಿಗೆ ಫೋನಾಯಿಸಿ ತನ್ನ ಷರತ್ತುಗಳನ್ನು ಸ್ಥೂಲವಾಗಿ ವಿವರಿಸಿದ್ದ. ಇದರಿಂದಾಗಿ ರಾಂಗಾದ ಗಡ್ಕರಿ 'ಯಡ್ಡಿ ಹೇಳಿದ್ದೇ ಬೇರೆ, ನೀನು ಹೇಳುತ್ತಿರೋದೇ ಬೇರೆ ಇದೆಯಲ್ಲಾ' ಅಂತ ಬೊಮ್ಮಾಯಿಗೆ ಜಾಡಿಸಿದ್ದಾನೆ. ಬಸು ಹೊರಟ ಬಳಿಕ ಯಡ್ಡಿಗೆ ಫೋನಾಯಿಸಿದ ಗಡ್ಕರಿ ನಡೆದದ್ದನ್ನೆಲ್ಲ ಒದರಿಬಿಟ್ಟಿದ್ದಾನೆ.

ಇಂಥದ್ದೊಂದು ಡೀಲು ಕುದುರಿಸಿ ಗೃಹಸಚಿವನಾಗುವ ಕನಸು ಹೊತ್ತು ಬೆಂಗಳೂರಿಗೆ ಬಂದಿಳಿದ ಬಸು ಸೀದಾ ಯಡ್ಡಿ ಬಳಿ ಬಂದು ಹಲ್ಕಿರಿದಿದ್ದಾನೆ. ಅದಾಗಲೇ ಬಲಿಜ ಸಮಾಜದ ಸಮಾವೇಶಕ್ಕೆ ಹೊರಡೋ ಧಾವಂತದಲ್ಲಿದ್ದ ಯಡ್ಡಿ ಸೀದಾ ಹೊರಟಿದ್ದಾನೆ. ಸದರಿ ಸಮಾವೇಶದಲ್ಲಿ ಅಪ್ಪಟ ನಾಟಕ ಮಾಡಿ ಸುಸ್ತಾದ ಯಡ್ಡಿ ಮಧ್ಯಾಹ್ನದ ಹೊತ್ತಿಗೆ ಮನೆಗೆ ಮರಳಿ ಶಾಸಕರೊಂದಿಗೆ ಊಟ ಮುಗಿಸಿ ರೂಮಿಗೆ ತೆರಳಿದ.

ತದನಂತರ ರಾಜೀನಾಮೆಯ ಗಡುವು ವಿಸ್ತರಿಸುತ್ತಾ ಸಾಗಿದನಲ್ಲಾ ಯಡ್ಡಿ? ಆಗ ರೂಮು ಹೊಕ್ಕ ಬಸು 'ವರಿಷ್ಠರು 2.30ಕ್ಕೆ ರಾಜೀನಾಮೆ ಕೊಡಿ. ಇಲ್ಲದಿದ್ದರೆ ಶಿಸ್ತುಕ್ರಮ ಜರುಗಿಸುವುದಾಗಿ ಹೇಳಿದ್ದಾರೆ' ಅಂದಿದ್ದಾನೆ.

ಮೊದಲೇ ಕುರ್ಚಿ ಕಳಕೊಳ್ಳೋ ಫೀಲಿಂಗ್‌ನಲ್ಲಿದ್ದ ಯಡ್ಡಿಗೆ ಬಸುವಿನ ಮುಖ ನೋಡುತ್ತಲೇ ಸಿಟ್ಟು ಕಿತ್ತಿಟ್ಟು ಬಂದಿದೆ. ತಕ್ಷಣ ಎದ್ದು ಬಸುವಿನ ಕೆನ್ನೆಗೆ ಛಟಾರನೆ ಬಾರಿಸಿದ್ದಾನೆ. ಈ ಸೌಂಡು ಹೊರಗೆ ನೆರೆದಿದ್ದವರಿಗೂ ಕೇಳಿಸಿ ಕೋಣೆಯತ್ತ ಮುಖ ತಿರುಗಿಸಿದರೆ, ಅದರ ಹಿಂದೆಯೇ ಬಸು ಬೊಮ್ಮಾಯಿ ಕರವಸ್ತ್ರದಿಂದ ಕೆನ್ನೆ ಒರೆಸುತ್ತಾ ಹೊರಬಂದ!

ಇದು ಯಡ್ಡಿ ಬಣದಲ್ಲೇ ಇರುವ ಸಮಯಸಾಧಕರ ಕೃತ್ಯಕ್ಕೊಂದು ಉದಾಹರಣೆಯಷ್ಟೇ.

ಸದಾನಂದ ಗೌಡ ಕೆಸರು ಗದ್ದೆ ಗೂಟ


ನಾನು ತಿಂದೆ, ನೀನೂ ತಿನ್ನು!

ಇದು ಪ್ರಜಾತಂತ್ರದ ತರಲೆ; ಪ್ರಜಾಪ್ರಭುತ್ವದ ದುರಂತ!!

ಜನಪರ ಬದ್ಧತೆ, ಬೇರು ಮಟ್ಟದ ಹೋರಾಟ, ಸಂವಿಧಾನದ ಕನಿಷ್ಠ ಆಶಯದ ಅರಿವು, ಮಾಸ್ ಲೀಡರಿಕೆ ಯಾವುದೂ ಇಲ್ಲದ ದೇವರಕುಂಡ ವೆಂಕಟಪ್ಪಗೌಡ ಸದಾನಂದ ಗೌಡ ಅಚಾನಕ್ ಈ ರಾಜ್ಯದ ಮುಖ್ಯಮಂತ್ರಿಯಂಥ ಅತ್ಯುನ್ನತ ಪೀಠ ಏರಿಬಿಟ್ಟಿದ್ದಾರೆ! ಇದು ನಾಡಿನ ಜನರಿಗಷ್ಟೇ ಅಲ್ಲ, ಸಾಕ್ಷಾತ್ ಸದಾನಂದ ಗೌಡರಿಗೂ ತಕ್ಷಣಕ್ಕೆ ಅರಗಿಸಿಕೊಳ್ಳಲಾಗದ ಆಶ್ಚರ್ಯಾಘಾತದ ಸಂಗತಿ!!

ದಕ್ಷಿಣ ಕನ್ನಡದ ಗುಡ್ಡಗಾಡು ತಾಲ್ಲೂಕು ಸುಳ್ಯದ ಮಂಡೆಕೋಲು ಗ್ರಾಮದ ದೇವರಕುಂಡದ ಸದಾನಂದ ಗೌಡರಿಗೆ ಮತಾಂಧ ಮಾತುಗಾರಿಕೆಯೇ ರಾಜಕೀಯ ಬಂಡವಾಳ; ನಿಗೂಢ ನಗೆಯೇ ಹಳ್ಳಿಯಿಂದ ದಿಲ್ಲಿತನಕ ಬೆಳೆಸಿರುವ ಕ್ಯಾಲಿಬರ್. ಸದಾನಂದ ಗೌಡ ಮಂಡೆಕೋಲು ವ್ಯವಸಾಯ ಸೇವಾ ಸಹಕಾರಿ ಸಂಘದ ಚೇರ್‌ಮನ್‌ಗಿರಿಯಿಂದ ಸಿಎಂ ಪದವಿಯ ತನಕ ಸಾಗಿಬಂದಿರುವುದು ಪಕ್ಕಾ ಸಂಘಪರಿವಾರದ ಹಿಡನ್ ಅಜೆಂಡಾದಿಂದ. ಡಿ.ವಿ. ಸದಾನಂದನೆಂಬ ಪುತ್ತೂರು-ಸುಳ್ಯ ಕಡೆಯ ಸಂಡೆ ಲಾಯರ್ ಡಿ.ವಿ. ಸದಾನಂದ 'ಗೌಡ'ನಾಗಿದ್ದು ಪುತ್ತೂರಿನ ಎಮ್ಮೆಲ್ಲೆ ಆಗಿದ್ದು, ಎಂಪಿ ಆಗಿದ್ದು, ರಾಜ್ಯ ಬಿಜೆಪಿ ಅಧ್ಯಕ್ಷನಾಗಿದ್ದು ಒಂದೊಂದು ಚೆಡ್ಡಿ ಪುರಾಣವನ್ನೇ ಅಡಗಿಸಿಟ್ಟುಕೊಂಡಿದೆ.

ಮತಾಂಧ ಮಾತುಗಾರ

ಸುಳ್ಯದ ಮಂಡೆಕೋಲು-ದೇವರಕುಂಡ ಕೇರಳದ ಗಡಿಯಲ್ಲಿರುವ ಬೆಟ್ಟ-ಗುಡ್ಡಗಳಿಂದ ಆವೃತವಾದ ದುರ್ಗಮ ಹಳ್ಳಿ. ಇಲ್ಲಿಯ ವೆಂಕಟಪ್ಪಗೌಡರದು ಕೆಳಮಧ್ಯಮ ವರ್ಗಕ್ಕೆ ಸೇರಿದ ಕೃಷಿಕ ಕುಟುಂಬ. ಅರೆಭಾಷೆ ಗೌಡ ಜಾತಿಯ ಈ ಕುಟುಂಬದ ಕುಡಿ ಮುಂದೊಂದು ದಿನ ರಾಜ್ಯದ ಮುಖ್ಯಮಂತ್ರಿ ಆಗಬಹುದೆಂದು ಆತನನ್ನು 'ಜಾತಿ ರಾಜಕಾರಣ'ದ ಲೆಕ್ಕಾಚಾರದಿಂದ ರಾಜಕೀಯಕ್ಕೆ ತಂದಿದ್ದ ಸ್ಥಳೀಯ ಜನಸಂಘದ ಭೀಷ್ಮ ಉರಿಮಜಲು ರಾಮಭಟ್ಟರೂ ಎಣಿಸಿರಲಿಕ್ಕಿಲ್ಲ, ಈ ರಿಮೋಟ್ ಹಳ್ಳಿ ಹೈದ ಸದಾನಂದ ಶಾಲೆ, ಕಾಲೇಜು, ಲಾಯರಿಕೆ ಕಲಿತದ್ದು ಮಾತ್ರ ಒಂದು ಸಂಘರ್ಷ. ಉಳಿದ ಆತನ ರಾಜಕೀಯ ಬದುಕು ಲಾಟರಿ ಅಷ್ಟೇ!

ಸದಾನಂದ ಗೌಡರನ್ನು ಬಾಲ್ಯದಲ್ಲಿ ಕಂಡ ಗುರುಗಳು-ಗೆಳೆಯರು ಮತ್ತು ದೊಡ್ಡವನಾಗಿ ಶಾಸಕ-ಸಂಸದನಾದಾಗ ನೋಡಿದ ಸಾಮಾನ್ಯ ಜನರು ವ್ಯಕ್ತಪಡಿಸುವ ಸಾಮಾನ್ಯ ಅಭಿಪ್ರಾಯ-ಡೀವಿ ಚಾಲಾಕಿ ಮಾತಿನ ಮಲ್ಲ, ನಾಲಿಗೆಯನ್ನು ತನ್ನ ಅನುಕೂಲಕ್ಕೆ-ಜನರಿಗೆ ಮಂಕುಬೂದಿ ಎರಚಲಿಕ್ಕೆ ಹೇಗೆಬೇಕೋ ಹಾಗೆ ಝಳಪಿಸ ಬಲ್ಲಾತ. ಈ ನಾಲಿಗೆ ಬಲದಿಂದಲೇ ಆತ ಮಂಗಳೂರು ಲಾ ಕಾಲೇಜಿನ ವಿದ್ಯಾರ್ಥಿ ಸಂಘದ ನಾಯಕನಾಗಿದ್ದ; ಮಂಡೆಕೋಲು ಸೊಸೈಟಿ ಅಧ್ಯಕ್ಷನಾಗಿದ್ದ, ಆರೆಸ್ಸೆಸ್‌ನ ಮುಂಚೂಣಿ ಶೂದ್ರ ಸೈನಿಕನಾಗಿದ್ದ, ಸುಳ್ಯ ತಾಲ್ಲೂಕು ಬಿಜೆಪಿ ಅಧ್ಯಕ್ಷನಾಗಿದ್ದ, ಹಾಗೆಂಬುದು ಇವತ್ತಿಗೂ ಕರಾವಳಿ ಬಿಜೆಪಿಯಲ್ಲಿ ಜನಜನಿತ.

ರಾಜಕೀಯ ಪಟು

ಲಾ ಕಲಿತು ವಕೀಲಿ ಶುರು ಹಚ್ಚಿಕೊಂಡಿದ್ದ ಸದಾನಂದ 1982 ರ ಸುಮಾರಿಗೆ ಸರ್ಕಾರಿ ವಕೀಲನಾಗಿ ನೇಮಕವಾಗಿದ್ದರು. ಉತ್ತರ ಕನ್ನಡ ಶಿರಸಿ ಕೋರ್ಟಿಗೆ ವರ್ಗಾಯಿಸಲಾಗಿದ್ದ ಸದಾನಂದ ಅಲ್ಲಿ ಒಂದು ವರ್ಷ ಕಳೆಯುವುದರಲ್ಲಿ ಬೋರ್ ಹೊಡೆದಿತ್ತು, ಸುಳ್ಯದ ಗ್ರಾಮ-ಸೊಸೈಟಿ-ಚೆಡ್ಡಿ ರಾಜಕಾರಣದ ಸೆಳೆತ ಜೋರಾಗಿತ್ತು, ಒಂದು ಶುಭ ಮುಂಜಾನೆ ನೌಕರಿಗೆ ರಾಜೀನಾಮೆ ಒಗೆದು ಸೀದಾ ಸುಳ್ಯಕ್ಕೆ ಬಂದುಬಿಟ್ಟ ಬಿಸಿರಕ್ತದ ಕುದಿ ಆರೆಸೆಸ್ ತುಡಿತದ ಸದ್ದ! ಸುಳ್ಯ-ಪುತ್ತೂರಿನ ಕೋರ್ಟಿಗೆ ಕರಿಕೋಟು ಏರಿಸಿಕೊಂಡು ಹೋಗಿಬರಲಾರಂಭಿಸಿದರು. ಆರೆಸ್ಸೆಸ್ ಗರಡಿ ಮನೆಗೂ ಆತ ಆಗಾಗ 'ತರಬೇತಿ'ಗೆಂದು ಹೋಗುತ್ತಿದ್ದರು.

ಆಗಲೇ ಮಾತುಗಾರ. ಆರೆಸ್ಸೆಸ್‌ನ ಹಿಂದೂತ್ವ-ರಾಷ್ಟ್ರ ಪ್ರೇಮದ ಹುಸಿ ಕಲ್ಪನೆಯ ಗಲೀಜು ತಲೆ ತುಂಬಿಕೊಂಡರೆ ಏನಾದೀತು? ಸದ್ದ ಪಕ್ಕಾ ಕೋಮುವಾದಿಯಾಗಿ ತಯಾರಾಗತೊಡಗಿದ. ಆತನ 'ಸಾಧನೆ' ನೋಡಿದ ಜನಸಂಘದ-ಆರೆಸ್ಸೆಸ್‌ನ ರಿಂಗ್‌ಮಾಸ್ಟರ್‌ಗಳು ಸುಳ್ಯದ ಬಿಜೆಪಿ ಅಧ್ಯಕ್ಷ ಪಟ್ಟ ಕೊಟ್ಟರು. ಆ ವೇಳೆ ಸುಳ್ಯದಲ್ಲಿ ಕಾಂಗ್ರೆಸ್ ಜಡಭರತ ಕೆ. ಕುಶಲನೆಂಬಾತ ಶಾಸಕನಾಗಿದ್ದ. ಹೇಳಿಕೇಳಿ ಸುಳ್ಯ ಟಚ್ಚಬಲ್ ಅರೆಭಾಷೆ ಗೌಡರ ಮುಖಂಡರ ಹಿಡಿತದಲ್ಲಿದ್ದ ಮೀಸಲು ಕ್ಷೇತ್ರವಾಗಿತ್ತು. ಗೌಡರದೇ ಇಲ್ಲಿ ಎಲ್ಲಾ ಪಕ್ಷದಲ್ಲಿ ಪ್ರಾಬಲ್ಯ. ಇಂಥ ಊರಲ್ಲಿ 80 ರ ದಶಕದಲ್ಲಿ ಕೊಲೆಯೊಂದು ಆಗುತ್ತದೆ.


ಆ ಕೊಲೆಯ ಪಾತಕಿಯನ್ನು ಪೊಲೀಸರಿಂದ ಹಿಡಿಯಲಾಗಲಿಲ್ಲ, ಆಳುವ ಕಾಂಗ್ರೆಸನ್ನು ಗುರಿ ಮಾಡಿ ಸದಾನಂದ ಧರಣಿ ನಡೆಸಿದರು. ತಿಂಗಳುಗಟ್ಟಲೆ ಈ ಸತ್ಯಾಗ್ರಹ ಬಿಜೆಪಿ ಮಾಡಿತು. ಅಂತೂ ಪೊಲೀಸರು ಕೊಲೆಗಡುಕನ ಹಿಡಿದರು. ಆಗ ಬಂತು ಸದಾನಂದನಿಗೆ ಪೊಲಿಟಿಕಲ್ ಖದರು; 'ಸದ್ದ.... ಬಿಜೆಪಿ ಸದ್ದ'ನೆಂದೇ ಆತ ಸುಳ್ಯ ಭಾಗದಲ್ಲಿ ಫೇಮಸ್ ಆಗಿಹೋದರು. ಆ ಹೊತ್ತಲ್ಲಿ ಪಕ್ಕದ ಪುತ್ತೂರು ಕ್ಷೇತ್ರದಲ್ಲಿ ಬಿಜೆಪಿಯ ಉರಿಮಜಲು ರಾಮಭಟ್ ಶಾಸಕರಾಗಿದ್ದರು. ಭಟ್ಟರ ಕಣ್ಣಿಗೆ ಬಿದ್ದ 'ಸದ' ಪುತ್ತೂರಿಗೂ ತನ್ನ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡುಬಿಟ್ಟ.

ರಾಮಭಟ್: ಗಾಡ್‌ಫಾದರ್

• ನಹುಷ

ಕಾಂಗ್ರೆಸ್ ಎದುರು ಸೋತಿದ್ದ ರಾಮಭಟ್ಟರಿಗೆ ಕ್ಷೇತ್ರದಲ್ಲಿ ಪ್ರಬಲರಾಗಿದ್ದ ಅರೆಭಾಷೆ ಗೌಡರ ಒಲಿಸಿಕೊಳ್ಳುವ ದರ್ದಿತ್ತು. ಹಾಗಾಗಿ ಆತ ಸದ್ದನನ್ನು ಪುತ್ತೂರು ಕೋರ್ಟಿಗೆ ಬರುವಂತೆ 'ತಂತ್ರ' ಮಾಡಿದರು; ಆತನನ್ನು ಪುತ್ತೂರು ಭಾಗದ ಗೌಡರ ಮುಖಂಡನಂತೆ ಬಿಂಬಿಸಿದರು. ಸದಾನಂದ ಗೌಡನ ಬಳಸಿಕೊಂಡು ಮತ್ತೆ ಎಮ್ಮೆಲ್ಲೇ ಆಗುವ ಹಿಕಮತ್ತು ಪುರೋಹಿತಶಾಹಿ ಮಂತ್ರ-ಮಸಲತ್ತಿನ ಭಟ್ಟರದಾಗಿತ್ತು, ಆದರೆ ಗೌಡರಷ್ಟೆ ಬಲಾಢ್ಯರಾಗಿದ್ದ ಬಲ್ಲವರ ವಿನಯಕುಮಾರ್ ಸೊರಕೆ ಎದುರು ಭಟ್ಟರಿಗೆ ಮತ್ತೆ ಗೆಲ್ಲಲು ಆಗಲೇ ಇಲ್ಲ,

ಆಗ ಆತ ಕಾಂಗ್ರೆಸ್‌ನ ವಿನಯಕುಮಾರ್ ಸೊರಕೆಯ ಹಾವಳಿಗೆ ಕಡಿವಾಣ ಹಾಕಲು ದಾಳವಾಗಿ ಬಳಸಿದ್ದೇ ಈ ಸದ್ದನನ್ನು, ತಾನು ಎಮ್ಮೆಲ್ಲೆಗಿರಿಗೆ ನಿಂತರೆ ಇನ್ನು ಪುತ್ತೂರಲ್ಲಿ ಗೆಲ್ಲಲಾರೆನೆಂಬುದು ಖಾತ್ರಿಯಾಗಿದ್ದ ಭಟ್ಟರು ಸದಾನಂದ ಗೌಡರನ್ನು ಪುತ್ತೂರಿನಲ್ಲಿ ಬಿಜೆಪಿ ಕ್ಯಾಂಡಿಡೇಟ್ ಮಾಡಿದರು. ಸದಾ ಶಾಸಕನಾದರೆ ತನ್ನ 'ಪ್ರಾಕ್ಸಿ' ಆಗುತ್ತಾನೆಂಬ ದೂ(ದು)ರಾಲೋಚನೆ ಈ ಭೀಷ್ಮಜ್ಜನದಾಗಿತ್ತು. ಆದರೆ ಮೊದಲ ಪ್ರಯತ್ನದಲ್ಲಿ ಸದಾ ಸೋತುಹೋದರು. ಎರಡನೇ ಬಾರಿ 1994 ರಲ್ಲಿ ಸ್ಪರ್ಧಿಸಿದಾಗ ಬರೀ 400


ಯಡ್ಡಿಯ ಗುಲಾಮ!

ಮತದಂತರದಿಂದ ಗೆದ್ದರು. ಅದು ಸದ್ದನದಾಗಲಿ, ಬಿಜೆಪಿ ಬ್ರಾಹ್ಮಣರದಾಗಲಿ ದಿಗ್ವಿಜಯವೇನಾಗಿರಲಿಲ್ಲ,

ಕಾಂಗ್ರೆಸ್‌ನ ಒಡಕು; ಶಾಸಕ ಸೊರಕೆ ಮೇಲಿನ ಬಂಟರ ಸಿಟ್ಟು ಇಲ್ಲಿ ಕೆಲಸ ಮಾಡಿತ್ತು, ಹೀಗಾಗಿ ಕೂದಲೆಳೆ ಅಂತರದಿಂದ ಸದ್ದ ಶಾಸಕನಾಗಿ ಹೋದ. ಆ ಬಳಿಕ ಪುತ್ತೂರು ಸುಳ್ಯದಲ್ಲಿ ನಡೆದ ಕೋಮುಗಲಭೆಗಳು, ಸದ್ದನ ಮತಾಂಧ ಮಾತುಗಾರಿಕೆ ಕಾಂಗ್ರೆಸ್ ಅನ್ನು ಮೇಲೇಳದಂತೆ ಮಾಡಿತು. ಸದ್ದ 1999 ರಲ್ಲಿ ಮತ್ತೆ ಗೆದ್ದರು. ಆಗ ಆತ ಗುರು ರಾಮಭಟ್ಟರನ್ನೇ ಮೀರಿ 'ಬೆಳೆದು'ಬಿಟ್ಟರು. ಕರಾರುವಾಕ್ಕಾದ 'ಕೋಮು ರಾಜಕಾರಣ, ಗೌಡ ಓರಿಯೆಂಟೆಂಡ್ ಪಾಲಿಟಿಕ್ಸ್ ಸದ್ದ ಶುರು ಹಚ್ಚಿಕೊಂಡಿದ್ದರು. ಹೀಗಾಗಿ ಸಂಘಪರಿವಾರದ ಕೇಶವಕೃಪಾದಲ್ಲೂ ಆತನ 'ಕೀರ್ತಿ' ಹಬ್ಬಿತ್ತು, ಹೀಗಾಗಿ ಆತನಿಗೆ ಬಿಜೆಪಿಯ ಶಾಸಕಾಂಗದ ಉಪನಾಯಕನ ಪಟ್ಟ ಕೊಡಲಾಗಿತ್ತು,

ಸಂಸದನಾದ 'ಗೌಡ'

ಡಿ.ವಿ. ಸದಾನಂದ ದಕ್ಷಿಣ ಕನ್ನಡ ಬಿಜೆಪಿ ವಲಯದಲ್ಲಿ 'ಡಿವಿ' ಎಂದೇ ಖ್ಯಾತರಾಗಿ ಹೋಗಿದ್ದರು. ಎರಡನೇ ಬಾರಿ ಶಾಸಕನಾದಾಗ. ಕರಾವಳಿ ಆರೆಸ್ಸೆಸ್ ಡಾನ್ ಡಾ. ಕಲ್ಲಡ್ಕ ಪ್ರಭಾಕರ ಭಟ್ಟರೂ ಈತನ ಕಮ್ಯುನಲ್ ಚಾಕಚಕ್ಯತೆ ಕಂಡು ಹತ್ತಿರ ಇಟ್ಟುಕೊಂಡಿದ್ದರು. ಅದೇ ಹೊತ್ತಿಗೆ ಮೂರು ಬಾರಿ ಮಂಗಳೂರು ಪಾರ್ಲಿಮೆಂಟರಿ ಕ್ಷೇತ್ರದಿಂದ ಗೆದ್ದು 'ಗರ್ವ'ದಿಂದ ಅಂಡಲೆಯುತ್ತಿದ್ದ ಧನಂಜಯಕುಮಾರ್ ಸಂಘ ಪರಿವಾರದ ಕೇಡಿಗಳ ಕಣ್ಣು ಕೆಂಪಾಗಿಸಿದ್ದ, ಧನಂಜಯನ ರಗಳೆ-ರಂಗೀಲಾ-ಭ್ರಷ್ಟಾಚಾರ-ಜನದ್ರೋಹದಿಂದ ಬಿಜೆಪಿ ಬೇಸೇ ದಕ್ಷಿಣ ಕನ್ನಡದಲ್ಲಿ ಒಡೆದು ಹೋಗುವಂತಾಗಿತ್ತು, ಆಗ ಎಚ್ಚೆತ್ತುಕೊಂಡ ಆರೆಸ್ಸೆಸ್ ಹಿರಿಯರು ಧನಂಜಯಗೆ ಕೊಕ್ ಕೊಟ್ಟು ಡಿವಿಗೆ ಎಂಪಿ ಮಾಡಲು ಸ್ಕೆಚ್ ಹಾಕಿದರು.

ಧನಂಜಯನ 'ಉಪಟಳ'ದಿಂದ ಅನಂತ್‌ಕುಮಾರ್ ಕಿರಿಕಿರಿಗೊಂಡಿದ್ದರು. ಪ್ರಥಮ ಎನ್‌ಡಿಎ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಧನಂಜಯ್ ಮತ್ತೆ ಎಂಪಿಯಾದರೆ ತನಗೆ ಛಾನ್ಸ್ ಸಿಗದೆಂಬ ಕಾರಣಕ್ಕೆ ಆತನ ಬಾಲ ಕಟ್ ಮಾಡಲು ಅನಂತ್‌ಕುಮಾರ್ ಪ್ಲಾನ್ ಹಾಕಿದ್ದರು. ಹೀಗಾಗಿ ಆತನೂ ಡಿವಿಗೆ ಎಂಪಿ ಟಿಕೆಟ್ ಕೊಡುವ ಕರಾಮತ್ತಿನಲ್ಲಿ ಸಕ್ರಿಯ ಪಾತ್ರವಾಡಿದ್ದರು. ಒಟ್ಟಿನಲ್ಲಿ ಡೀವಿಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿತ್ತು.

ಎಂಪಿ ಆಗುವ ಆಸೆಯಲ್ಲಿ ಡೀವಿ ತನ್ನ ಹೆಸರಿಗೆ ಸರ್ಜರಿ ಮಾಡಿಕೊಂಡಿದ್ದು ಕುತೂಹಲಕರವಾಗಿದೆ. ಡಿ.ವಿ. ಸದಾನಂದ ಇದು ಆತನ ಒರಿಜಿನಲ್ ನಾಮಧೇಯ. ಸದ್ದ-ಡಿವಿ ಎಂಬುದು ಸಂದರ್ಭಕ್ಕೆ ತಕ್ಕಂತ ಅಂಟಿಕೊಂಡಿದ್ದ ನಿಕ್‌ನೇಮ್‌ಗಳು. ಆದರೆ ಸದಾನಂದ ತನ್ನ ಹೆಸರಿನ ಕೊನೆಯಲ್ಲಿ 'ಗೌಡ' ಎಂದು ಸೇರಿಸಿಕೊಂಡಿದ್ದು ಮಾತ್ರ ಓಟ್‌ಬ್ಯಾಂಕ್ ರಾಜಕಾರಣದ ದೂರದೃಷ್ಟಿಯಿಂದ. ಕಾರಣ ಇಷ್ಟೇ. ಮಂಗಳೂರು ಲೋಕಸಭಾ ವ್ಯಾಪ್ತಿಯಲ್ಲಿದ್ದ ಕೊಡಗು ಮತ್ತು ಪುತ್ತೂರು-ವಿಟ್ಲ-ಸುಳ್ಯ ಭಾಗದಲ್ಲಿ ಅರೆಭಾಷೆ ಗೌಡರ ಬಾಹುಳ್ಯವಿತ್ತು, ಆ ಮತದಾರರನ್ನು ರಕ್ತ ಸಂಬಂಧದ ಮಮಕಾರದಿಂದ ಸೆಳೆವ ಏಕೈಕ ಕಾರಣಕ್ಕೆ ಡಿ.ವಿ. ಸದಾನಂದರು ಡಿ.ವಿ. ಸದಾನಂದ 'ಗೌಡ'ನಾಗಿ ನಾಮಾಂತರಗೊಂಡಿದ್ದರು. ಇದು ಬಿಜೆಪಿ ಸಂಘಪರಿವಾರದ 'ಮತಾಂತರ'ದಷ್ಟೇ 'ಆಕ್ಷೇಪಾರ್ಹ' ಆಗಿತ್ತು!

ಗೌಡರಿಗೇನು ಮಾಡಿದ?

ತಾನು ಕೊಡಗು-ದಕ್ಷಿಣ ಕನ್ನಡ 'ಅರೆಭಾಷೆ ಗೌಡ'ರ ಪ್ರಶ್ನಾತೀತ ಮುಖಂಡ ಮಣಿ ಎಂದು ಪೋಸು ಕೊಡುತ್ತ ಬಂದ ಗೌಡ ಸ್ವಜಾತಿ ಶೂದ್ರರಿಗೆ ಸಂಘ ಪರಿವಾರದ ಮತಾಂಧತೆ ಬೋಧಿಸಿ ದಾರಿ ತಪ್ಪಿಸಿದ್ದು ಬಿಟ್ಟರೆ ಬೇರೇನೂ ಮಾಡಲಿಲ್ಲ. ಇವತ್ತಿಗೂ ಅತ್ಯಂತ ಹಿಂದುಳಿದಿರುವ ಹುಟ್ಟೂರು ಸುಳ್ಯದ ಉದ್ಧಾರಕ್ಕೆ ಗೌಡ ಎಂಪಿ, ಎಮ್ಮೆಲ್ಲೆಯಾಗಿದ್ದಾಗ ಮಾಡಿದ್ದೇನು ಕಾಣಿಸುವುದಿಲ್ಲ, ಅತಿ ಹಿಂದುಳಿದ ಗೌಡ ಸಮುದಾಯಕ್ಕೆ ದನಿಯಾಗಬಹುದೆಂದು ಆಶಿಸಿದ್ದ ಡಿವಿಎಸ್ ಗೌಡ ಬಿಜೆಪಿಯ ಕೋಮುವಾದಿ ರಾಜಕಾರಣದ, ಯಡ್ಡಿಯ ನಿರ್ಲಜ್ಜ ಕುರ್ಚಿ ಕಸರತ್ತಿಗೆ 'ಧ್ವನಿ'ಯಾಗಿದ್ದು ಮಾತ್ರ ವಿಪರ್ಯಾಸ!

ಎಂಪಿ, ಎಮ್ಮೆಲ್ಲೆ ಆಗಿದ್ದಾಗ ಗೌಡ ಕ್ಷೇತ್ರದ ಆಗುಹೋಗುಗಳ ಬಗ್ಗೆ ಅಸೆಂಬ್ಲಿ-ಪಾರ್ಲಿಮೆಂಟಿನಲ್ಲಿ ಮಾತಾಡಿದ್ದು ಅಷ್ಟಕ್ಕಷ್ಟೇ. ಹಾಗಂತ ಕೋಮು ಭಾವನೆ

ಗೌಡರ ಐಎಸ್‌ಐ ಗುಮ್ಮ!!

ಕೋಮು ರಾಜಕಾರಣವನ್ನೇ ಬಂಡವಾಳ ಮಾಡಿಕೊಂಡು ಬದುಕಿರುವ ಸದಾನಂದ ಗೌಡರಿಗೆ, ಮಂಗಳೂರಿನ ಎಂಪಿಯಾಗಿದ್ದಾಗ ಆಗಾಗ ಐಎಸ್‌ಐ -ಮುಸ್ಲಿಂ ಭಯೋತ್ಪಾದಕರ ಕನಸು ಬೀಳುತ್ತಿದ್ದ ಕತೆ ರೋಚಕವಾಗಿದೆ. ಮಂಗಳೂರು-ಕೊಡಗು ಏರಿಯಾದ ಜನರ ಜ್ವಲಂತ ಸಮಸ್ಯೆಗಳಿಗ್ಯಾವುದಕ್ಕೂ ಸ್ಪಂದಿಸದೆ ಬರೀ ಚೆಡ್ಡಿ ರಾಜಕಾರಣದಲ್ಲಿ ನಿರತರಾಗಿರುತ್ತಿದ್ದ ಗೌಡರ ಬಗ್ಗೆ ಕ್ಷೇತ್ರವಾಸಿಗಳು ರೋಸಿ ಹೋಗಿದ್ದರು. ಅದು ಎಸ್‌ಈಝಡ್ ಸಮಸ್ಯೆ ಇರಲಿ, ಮೀನುಗಾರರ-ಅಡಿಕೆ ಬೆಳೆಗಾರರ-ರೈತರ ಸಮಸ್ಯೆ ಇರಲಿ, ಹಾಸನ-ಬೆಂಗಳೂರು ರೈಲು ಮಾರ್ಗದ ಸಮಸ್ಯೆಯೇ ಆಗಿರಲಿ ಅಥವಾ ಕೋಮು ಗಲಭೆಯಲ್ಲಿ ನೊಂದವರ ಸಂಕಷ್ಟವಾಗಿರಲಿ ಸದ್ದಣ್ಣ ತಲೆ ಕೆಡಿಸಿಕೊಂಡಿದ್ದೇ ಇಲ್ಲ,

ಹೀಗಾಗಿ ಆತ ಆಗಾಗ ಕೋಮು ಕಿತಾಪತಿಯ ಮಾತಾಡಿ ಅಮಾಯಕ ಜನರ ಗೊಂದಲಗೊಳಿಸಿ ಸೇಫ್ ಆಗಲು ಹವಣಿಸುತ್ತಿದ್ದರು. "ನನಗೆ ಪಾಕಿಸ್ತಾನಿ ಐಎಸ್‌ಐ ಭಯೋತ್ಪಾದಕರು ಕೊಲ್ಲುವುದಾಗಿ ಫೋನ್ ಮಾಡಿದ್ದಾರೆ.... ಫೋನ್ ದುಬೈನಿಂದ ಬಂದಿದೆ... ಇದರಲ್ಲಿ ಮುಸ್ಲಿಮರ ಕೈವಾಡವಿದೆ... ಕೇರಳದಿಂದ ನನ್ನನ್ನು ಕೊಲ್ಲಲು ಪಾತಕಿಗಳು ಬರುತ್ತಿದ್ದಾರೆ...." ಎಂದೆಲ್ಲ ಗೌಡ ಗೌಜಿ ಮಾಡಿದ್ದರು. ಇದು ಆತನನ್ನು ಬಿಜೆಪಿಯಲ್ಲಿ ಲೆಮ್‌ಲೈಟಿಗೆ ತಂದಿತೇ ಹೊರತು ಆತನ ಬಗ್ಗೆ ಜನರಲ್ಲಿ ಒಂಚೂರು ವಿಶ್ವಾಸ ಮೂಡಲಿಲ್ಲ, ಬದಲಿಗೆ ಸದಾನಂದ ಗೌಡ ಪಕ್ಕಾ ಸಮಯಸಾಧಕ-ಸೋಗಲಾಡಿ ಎಂದು ಸಾಬೀತಾಗಿಹೋಗಿತ್ತು,

ಇಂಥ ಚೀಪ್ ಗಿಮಿಕ್‌ಗಳಲ್ಲಿ ಸದಾನಂದ ಗೌಡ ಸಿದ್ಧಹಸ್ತ, ಯಡ್ಡಿ ಈ ಬೂಟಾಟಿಕೆಗೆ ಮರುಳಾದರಾ? ಹಾಗಂತ ಆತನ ಐಎಸ್‌ಐ ಗುಮ್ಮನ ಕತೆ ಬಲ್ಲವರು ಜೋಕ್ ಮಾಡುತ್ತಿದ್ದಾರೆ.

ಸಲು ಗೌಡ ಸದ್ದು ಮಾಡಿದ್ದೇ ಮಾಡಿದ್ದು. ಪುತ್ತೂರಿನ ...ನ್ಯ ಭಟ್ ಎಂಬ ಬ್ರಾಹ್ಮಣರ ಹುಡುಗಿಯನ್ನು ಸಾಬರ ...ತನೆ ಮಿಲ್ಕಿ ಅಶ್ರಫ್‌ನೆ ಕೊಂದು ಹಾಕಿದನೆಂದು ...ನ್ಯ ಮಾಯಾಭಟ್ ಎಂಬ ಕೊಂಕಣಿ ಬ್ರಾಹ್ಮಣರ ...ಹುಗಿ ಸಾಬರ ಜಾತಿಗೆ ಬಲವಂತವಾಗಿ ಸೇರಿದ್ದಾಳೆಂದು ...ಮು ಕ್ರೌರ್ಯವೆದ್ದಾಗ ಆ ಬೆಂಕಿಯಲ್ಲಿ ಡಿವಿಎಸ್ ... ಮೈಕಾಯಿಸಿಕೊಂಡಿದ್ದರು. ಇದೆಲ್ಲ ಆತನ ಕೋಮು ... ರಾಜಕಾರಣಕ್ಕೆ ದೊಡ್ಡ ಬ್ರೇಕ್ ಒದಗಿಸಿತ್ತು.

ಗುರುವಿಗೇ ತಿರುಮಂತ್ರ

...ಜನಪರ ಸಾಧನೆಗಿಂತ ಸದ್ದು-ಸುದ್ದಿ ಮಾಡಿಯೇ ...ಸ್ಥರಾಗಿದ್ದ ಡಿವಿಎಸ್ ಗೌಡ ಎಂಪಿಗಿರಿಯ ಒಂದು ... ಕಳೆಯುವುದರಲ್ಲೇ ಕಂಗಾಲಾಗಿ ಹೋಗಿದ್ದರು. ...ಕ್ಷೇತ್ರದ ಕಷ್ಟ-ಸುಖ, ಬೇಕು-ಬೇಡಗಳನ್ನೆಲ್ಲ ಕಡೆಗಣಿಸಿ ...ಪಿ, ಆರೆಸ್ಸೆಸ್, ಹಿಂಜಾವೇಯಂಥ ಶುದ್ಧ ಮತಾಂಧ ...ಗಳನ್ನು ಮಜಭೂತಾಗಿ ಕಟ್ಟಲು ಎಂಪಿಗಿರಿ ಕಳೆದದ್ದೇ ...ಸ್ಟಾಗಿತ್ತು. ಆರೆಸ್ಸೆಸ್ ಬಾಸ್ ಕಲ್ಲಡ್ಕ ಭಟ್ಟರ ಪಾದ ...ಸೆಯೇ ಗೌಡರಿಗೆ ದಿನನಿತ್ಯದ 'ಕರ್ಮ'ವಾಗಿ ಹೋಗಿತ್ತು. ...ಕ್ಕ ಪ್ರಭಾಕರ ಭಟ್ಟ ಮತ್ತಾತನ ಭಾವ ಪುತ್ತೂರಿನ ...ಸಂಘದ ಹಿರಿಯ ಧುರೀಣರ ನಡುವಿನ ಕೋಳಿ ...ಜಗಳದಲ್ಲಿ ಗೌಡರ ಹೆಸರಂತೂ ಸಂಪೂರ್ಣ ಕೆಟ್ಟು ಖರಾಬ್ ಹೋಗಿತ್ತು!

...ಖುದ್ದು ಪುತ್ತೂರಿನಲ್ಲೇ ಡಿವಿಎಸ್ ಗೌಡರ ...ವಾದಿಂದ ಆತನಿಗೆ ಒಂದರ ಹಿಂದೊಂದರ ಸೋಲೇ ...ಲಾಗ ತೊಡಗಿತ್ತು. ಪಾರ್ಟಿಯಲ್ಲಿ ನೆಲೆ-ಬೆಲೆ ...ಮಂತಾಗಿತ್ತು. ಸ್ಥಳೀಯ ಶಾಸಕಿ ಶಕುಂತಲಾ ಶೆಟ್ಟಿ ... ಗಟ್ಟಿಗಿತ್ತಿ ಚೆಡ್ಡಿಣಿ ಜನಪ್ರಿಯಳಾಗಿದ್ದು ಡಿವಿ ಗೌಡ ...ತನ ದೇವಮಾನವ ಕಲ್ಲಡ್ಕ ಭಟ್ಟರಿಗೆ ಸಹಿಸಲಾಗಲಿಲ್ಲ. ...ಆರೆಸ್ಸೆಸ್ ಶಾಲೆಗೆ ಲಕ್ಷಗಟ್ಟಲೆ ಕಾಸು ಕೊಡಿಸಿಕೊಡಲು ... ಸ್ವಪಕ್ಷದ ಶಾಸಕಿ ಶಕುಂತಲಾ ಶೆಟ್ಟಿಯನ್ನು ಹಣಿಯಲು ... ಭಟ್ಟ ಡಿವಿಎಸ್‌ಗೌಡನನ್ನು ಬಳಸಿಕೊಂಡರು. ಶೂದ್ರ ...ನಿಗೆ ಬ್ರಾಹ್ಮಣ ಭಟ್ಟನ ಪುರೋಹಿತಶಾಹಿ ಹಿಕಮತ್ತು ...ವಾಗಲೇ ಇಲ್ಲ. ಆತ ಬೇಕಂತಲೇ ಶಕು ಅಕ್ಕಳ ...ಮೇಲೆ ದಾಳಿ ಮಾಡತೊಡಗಿದ. ಆಗ ರಾಜ್ಯ ಬಿಜೆಪಿಯ ...ಕ್ಷನಾಗಿದ್ದ ಗೌಡನ ಪ್ರಹಾರಕ್ಕೆ ನಿರಪರಾಧಿ ಶಕು ...ಸಿಹೋದರು.

...ಜಗ ಆಕೆಯ ನೆರವಿಗೆ ಬಂದವರು ಮಾಜಿ ...-ಡಿವಿಗೆ ರಾಜಕೀಯ ದೀಕ್ಷೆ ಕೊಟ್ಟಿದ್ದ ರಾಮಭಟ್ಟರು. ...ಂದ ಕಲ್ಲಡ್ಕರ ಕೀಲುಗೊಂಬೆಯಂತಾಗಿದ್ದ ಗೌಡ ... ಹೋದರು. ಆರೆಸ್ಸೆಸ್ ಧಣಿಗಳ ಸಂಪ್ರೀತಗೊಳಿಸಲು ...ವಿಗೇ ತಿರುಮಂತ್ರ ಹಾಕಿದರು. ಗುರು ರಾಮಭಟ್ಟ ...ಗೆ ಶಾಪ ಹಾಕುತ್ತ ಬಿಜೆಪಿಯಿಂದ ಹೊರಹೋದರು. ... ಬಿಜೆಪಿ ಅಧ್ಯಕ್ಷ ಗೌಡರ ಅವಕೃಪೆಗೆ ಈಡಾಗಿದ್ದ ...ಗೆ ಬಿಜೆಪಿ ಅಸೆಂಬ್ಲಿ ಟಿಕೆಟ್ ಸಿಗಲಿಲ್ಲ. ಸದಾನಂದ ...ರ ಮೋಸ-ವಂಚನೆ-ದಾದಾಗಿರಿಯಿಂದ ಬೇಸತ್ತ ಚೆಡ್ಡಿ ...ಮುಗರು ಪುತ್ತೂರಲ್ಲಿ ಶ್ರೀರಾಮಸೇನೆ ಕಟ್ಟಿಕೊಂಡರು. ...ರೆಲ್ಲ ಸೇರಿ 'ಸ್ವಾಭಿಮಾನಿ ವೇದಿಕೆ' ಕಟ್ಟಿ ಶಕುಳನ್ನು ...ಕಾಯ ಬಿಜೆಪಿ ಅಭ್ಯರ್ಥಿಯಾಗಿ ನಿಲ್ಲಿಸಿ ದೊಡ್ಡ ಮೊತ್ತದ ... ಕಿತ್ತುಕೊಂಡರು. ಇದು ಡಿವಿಎಸ್ ಗೌಡರಿಗೆ ... ಮಂಗಳೂರಿಂದ ಎಂಪಿಯಾಗುವ ಧೈರ್ಯವನ್ನು ...ಗಿಸಿಬಿಟ್ಟಿತು. ಕಲ್ಲಡ್ಕ ಭಟ್ಟರು ಉಪಾಯವಾಗಿ ...ಎಸ್ ಗೌಡರನ್ನು ಪಕ್ಕದ ಉಡುಪಿ-ಚಿಕ್ಕಮಗಳೂರು ...ಕ್ಕೆ ಸಾಗಹಾಕಿದರು.

...ಬರೋಬ್ಬರಿ ಆರು ತಿಂಗಳು ಉಡುಪಿ-ಚಿಕ್ಕಮಗಳೂರು ...ದಲ್ಲಿ ತಾನೇ ಬಿಜೆಪಿಯ ಹುರಿಯಾಳೆಂದು-ಇಲೆಕ್ಷನ್ ...ಚಾರಿ ಮಾಡಿದ್ದ ರಾಜ್ಯ ಬಿಜೆಪಿ ಅಧ್ಯಕ್ಷ ಗೌಡರು ...ದ್ದು ಮಾತ್ರ ಬರೀ ಇಪ್ಪತ್ತು ಸಾವಿರ ಚಿಲ್ಲರೆ ಮತಗಳಿಂದ. ...ಲ ಹದಿನೈದೇ ದಿನ ಕಾಂಗ್ರೆಸ್ ಕ್ಯಾಂಡಿಡೇಟಾಗಿ ...ಾರ ಮಾಡಿದ್ದ ಜಯಪ್ರಕಾಶ್ ಹೆಗ್ಡೆ ಎಂಬ ...ಮಿಕ್‌ಮ್ಯಾನ್ ಗೌಡರ ಬೆವರಿಳಿಸಿಬಿಟ್ಟಿದ್ದರು. ...ರಚಿತ ಮಂಗಳೂರು ಕ್ಷೇತ್ರದಲ್ಲಿ ಸ್ವಜಾತಿ ಗೌಡರ ... (ಕೊಡಗು ಮೈಸೂರಿಗೆ ಸೇರಿದ್ದರಿಂದ) ...ಮೆಯಾಗಿದೆ ಎಂದು ಭಾವಿಸಿ ಗೌಡರ ಹೆಚ್ಚು ...ವಿರುವ ಚಿಕ್ಕಮಗಳೂರು ನಂಬಿ ಬಂದಿದ್ದ ಈ ...ಸಾಹೆ ಗೌಡನನ್ನು ಅಲ್ಲಿಯ ಒಕ್ಕಲಿಗರು ತಮ್ಮವನೆಂದು ...ಸಲೇ ಇಲ್ಲ. ಒಟ್ಟಿನಲ್ಲಿ ಕೂದಲೆಳೆ ಅಂತರದಲ್ಲಿ ...9 ರ ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಗೌಡರಿಗೆ ... ಲಾಟರಿ ಹೊಡೆಯಿತು. ಉಡುಪಿ-ಚಿಕ್ಕಮಗಳೂರು ...ಕ್ಕೆ ದುರಾದೃಷ್ಟ ಕಾಡಿತು!!

ಅಂದರಿಕಿ ಮಂಚಿವಾಳ್ಳು

...ದಕ್ಷಿಣ ಕನ್ನಡದ ಕಂಬಳ ಕ್ರೀಡೆ ಬಲ್ಲವರು ಡಿವಿಎಸ್ ...ರನ್ನು ಅರಲು (ಕೆಸರು) ಗೂಟ ಅನ್ನುತ್ತಾರೆ. ಕೆಸರು ...ನಲ್ಲಿ ಹುಗಿದ ಗೂಟ ಎತ್ತ ಎಳೆದರೂ ಅತ್ತ ಅಡ್ಜಸ್ಟ್ ...ಗುತ್ತದೆ. ಇಂಥ ಗುಣಧರ್ಮದ ಸದಾನಂದ ಗೌಡ ...ಪಿಯ ಕೌರವರಿಗೂ ಭಾವ; ಪಾಂಡವರಿಗೂ ...ಸಿ ಆಟ ಆಡಿ ರಾಜ್ಯಾಧ್ಯಕ್ಷತೆ, ಕೇಂದ್ರ ಪರಿಷ್ಕರ ...ಪಾದ ಪಡೆದುಕೊಂಡಿದ್ದರು. ಅತ್ತ ಜೆಡಿಎಸ್ ...ಯೋ ದೇವೇಗೌಡರಿಗೂ ತಾನೂ 'ಗೌಡ' ಎಂಬ


(12ನೇ ಪುಟಕ್ಕೆ)

ಭೂಗಳ್ಳ ಸದಾನಂದ

ರಾಜ್ಯದ ಬಿಜೆಪಿ ನಾಯಕರ ಪೈಕಿ ಯಾರು ಭೂಗಳ್ಳ ಅಂತ ಹುಡುಕುವುದಕ್ಕಿಂತಾ ಯಾರು ಭೂಗಳ್ಳ ಅಲ್ಲ ಅಂತ ಹುಡುಕುವುದೇ ಈಗ ಸುಲಭದ ಕೆಲಸ. ಕೈಗೆ ಚೂರುಪಾರು ಅಧಿಕಾರ ಸಿಕ್ಕ ತಕ್ಷಣ ನುಂಗಲು ಶುರುಮಾಡುವ ಈ ಹಿಂದೂ ವೀರರ ಸಾಲಿಗೆ ಹೊಸ ಮುಖ್ಯಮಂತ್ರಿ ಸದಾನಂದ ಗೌಡರೂ ಸೇರಿದ್ದಾರೆ. ಯಡಿಯೂರಪ್ಪನ ಕಳ್ಳತನದ ತರಬೇತಿ ಶಾಲೆಯಲ್ಲಿ ಚೆನ್ನಾಗಿ ಟ್ರೈನಿಂಗ್ ಪಡೆದುಬಂದಂತೆ ಕಾಣುತ್ತಿರುವ ಸದಾನಂದನ ಭೂಗಳ್ಳತನದ ಎರಡು ಪ್ರಕರಣಗಳನ್ನು 'ಲಂಕೇಶ್' ಕರ್ನಾಟಕದ ಜನತೆಯ ಮುಂದಿಡುತ್ತಿದೆ.

• ನರುಪ. ಸಾರ್ವ ತೀತ

ಅದರಲ್ಲಿ ಮೊದಲನೆಯದ್ದು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಬಿಡಿಎ ಕಾಯ್ದೆ ಉಲ್ಲಂಘಿಸಿ ಅಕ್ರಮವಾಗಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸುತ್ತಿರುವ ಪ್ರಕರಣ. ಇನ್ನೊಂದು ಸುಳ್ಯ ತಾಲ್ಲೂಕಿನಲ್ಲಿ ಸದಾನಂದನ ಕೆ.ಎಸ್. ಗೌಡ ಎಜುಕೇಷನಲ್ ಟ್ರಸ್ಟ್ 10.5 ಎಕರೆಯಷ್ಟು ಮೀಸಲು ಅರಣ್ಯ ಭೂಮಿಯನ್ನು ಕಬಳಿಸಿರುವ ಕೇಸ್. ಇವೆರಡರಲ್ಲೂ ಹಾಲಿ ಮುಖ್ಯಮಂತ್ರಿ ಸದಾನಂದ ಗೌಡರ ನೇರ ಕೈವಾಡವಿದ್ದು ಕಾಯ್ದೆ ಕಾನೂನುಗಳು, ಸರ್ಕಾರದ ನೀತಿ ನಿಯಮಾವಳಿಗಳನ್ನೆಲ್ಲಾ ಕಾಲ ಕಸದಂತೆ ನಿರ್ಲಕ್ಷಿಸಲಾಗಿದೆ.



ಕೆ.ಎಸ್. ಟ್ರಸ್ಟ್ ಭೂಹಗರಣ

ಎಡವಟ್ಟು ಯಡ್ಡಿಯ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಮುಖ್ಯಮಂತ್ರಿ ಪಾತ್ರಧಾರಿ ಸದಾನಂದ ಗೌಡರಿಗೆ ಪಟ್ಟವೇರುವ ಮೊದಲೇ ಭೂ ಭಾನ್ಗಡಿಗಳು ಸುತ್ತಿಕೊಳ್ಳುತ್ತಿವೆ. ಬೆಂಗಳೂರಲ್ಲಿ ವಾಸ್ತವ್ಯದ ನಿವೇಶನದಲ್ಲಿ ಮಲ್ಟಿ ಸ್ಟೋರ್ ವಾಣಿಜ್ಯ ಸಂಕೀರ್ಣ ಕಟ್ಟಿಸಿರುವ ಕಳ್ಳಾಟ ಬಹಿರಂಗವಾಗಿದೆ. ಆದರೆ ಇತ್ತ ಸುಳ್ಯದಲ್ಲಿ ಬರೋಬ್ಬರಿ 10 ಎಕರೆ ಮೀಸಲು ಅರಣ್ಯ ಸ್ವಾಹಾ ಮಾಡಿರುವ ಡಿವಿಎಸ್ ಗೌಡರ ಪುರಾಣ ಅದ್ಯಾಕೋ ರಾಜ್ಯಮಟ್ಟದಲ್ಲಿ ಸುದ್ದಿಯೇ ಮಾಡಿಲ್ಲ.

ಹಕೀಕತ್ತು ಇಷ್ಟೇ! ಸಿಎಂ ಸದಾನಂದ ಗೌಡ ಗೌರವಾಧ್ಯಕ್ಷರಾಗಿರುವ ಆತನ ರಕ್ತ ಸಂಬಂಧಿ ಕೆಎಸ್. ಗೌಡ ಎಜುಕೇಷನ್ ಟ್ರಸ್ಟ್‌ಗೆ ರಿಸರ್ವ್ ಫಾರೆಸ್ಟ್‌ನ 10 ಎಕರೆ ಪ್ರದೇಶ ಕಾನೂನುಬಾಹಿರವಾಗಿ ಸರ್ಕಾರ ಹಸ್ತಾಂತರಿಸಿದೆ. ಬಿಜೆಪಿಯ ರಾಜ್ಯಾಧ್ಯಕ್ಷರು-ಸಂಸದರೂ ಆಗಿ ಸದಾನಂದ ಗೌಡ ಪ್ರಭಾವ ಬೀರೀ ಈ ಕೊಳಕು ಕಾರ್ಯಾಚರಣೆ ಮಾಡಿದ್ದಾರೆ. ಈ ಪ್ರಕರಣ ಲೋಕಾಯುಕ್ತರ ತನಿಖೆಯಲ್ಲೂ ಇದೆ.

ಮಂಗಳೂರು-ಕೊಡಗು ಗಡಿಯಲ್ಲಿರುವ ಸುಳ್ಯ ತಾಲ್ಲೂಕಿನ ಕಲ್ಲಡ್ಕ ಗ್ರಾಮದ ಮೀಸಲು ಅರಣ್ಯದ ಸರ್ವೆ ನಂಬರ್ 171 ಪಿ 7 ರಲ್ಲಿನ 10 ಎಕರೆ ಭೂಮಿಯನ್ನು ಡಿವಿಎಸ್ ಗೌಡರ ಕುಟುಂಬದ ಟ್ರಸ್ಟ್‌ಗೆ ಪಿಡಿಆರ್ ಸಿಆರ್ 54/08-09 ರಂತೆ ಮಂಜೂರು ಮಾಡಲಾಗಿದೆ. ಇದು ಅರಣ್ಯ ಭೂಮಿಯಾದ್ದರಿಂದ ಖಾಸಗಿಯವರಿಗಿರಲಿ, ಸರ್ಕಾರಿ ಇಲಾಖೆಗಳಿಗೂ ಸಾರ್ವಜನಿಕ ಉದ್ದೇಶಕ್ಕೆ ಕೊಡುವುದು ಕಷ್ಟ! ದಲಿತ ಸಮುದಾಯದ ಕೊರಗರ ಅಭಿವೃದ್ಧಿ ಒಕ್ಕೂಟ ಈ ಅರಣ್ಯ ಭೂಮಿಯನ್ನು ಕೊರಗರ ವಸತಿ ಉದ್ದೇಶಕ್ಕೆ ಕೊಡುವಂತೆ ಹಿಂದೆ ಕೇಳಿತ್ತು. ಆದರೆ ಮೀಸಲು ಅರಣ್ಯವೆಂದು ಹೇಳಿ ಕೋರಿಕೆ ತಿರಸ್ಕರಿಸಲಾಗಿತ್ತು.

ಹಾಗೆಯೇ ಸ್ಥಳೀಯ ಕಲ್ಲಡ್ಕ ಪಂಚಾಯತ್ ಮುಸ್ಲಿಮರ ದಫನ್ ಭೂಮಿಗೆ ಈ ಜಾಗದಲ್ಲಿ ಸ್ವಲ್ಪ ಕೇಳಿತ್ತು. ಅಲ್ಲದೆ ಭಾರತೀಯ ಕಿಸಾನ್ ಸಂಘ ಎಣ್ಮೂರು ರೈತರು 2008 ರ ಆಗಸ್ಟ್ 23 ರಂದು ಸರ್ಕಾರಕ್ಕೆ ಪತ್ರ ಬರೆದು ವಿದ್ಯುತ್ ಸಬ್ ಸ್ಟೇಷನ್‌ಗೆ ಇದರಲ್ಲಿ ಒಂದಿಷ್ಟು ಜಾಗ ಮಂಜೂರಿ ಮಾಡಲು ಕೇಳಿತ್ತು. ಆಗಲೂ ಮೀಸಲು ಅರಣ್ಯವೆಂದು ಅರಣ್ಯ ಇಲಾಖೆ-ಸರ್ಕಾರ ಜಾಗ ಕೊಡಲು ನಿರಾಕರಿಸಿತ್ತು! ಆದರೆ ಅಧಿಕಾರಸ್ಥ ಡಿವಿಎಸ್ ಗೌಡ ಅಂದಿನ ಸಿಎಂ ಯಡ್ಡಿಯನ್ನು ಬಳಸಿಕೊಂಡು ಅನಾಮತ್ತು 10 ಎಕರೆ ಈ ಮೀಸಲು ಅರಣ್ಯ ಜಾಗ ಅಪಹರಿಸಿಬಿಟ್ಟಿದ್ದಾರೆ.

ಕಂದಾಯ ಮಂತ್ರಿಯಾಗಿದ್ದ ಕರುಣಾಕರ ರೆಡ್ಡಿಗೆ ಡಿವಿಎಸ್ ಗೌಡರ ಕುಟುಂಬದ ಎಜುಕೇಷನ್ ಟ್ರಸ್ಟ್‌ನವರು ಪತ್ರ ಒಂದನ್ನು ಬರೆದು ತಮ್ಮ ಐಟಿಐ ಕಾಲೇಜಿನಲ್ಲಿ 300 ರಷ್ಟು ವಿದ್ಯಾರ್ಥಿಗಳಿದ್ದು, ಅವರಿಗೆ ಆಟದ ಮೈದಾನ ಬೇಕಾಗಿದೆ. ಹಾಗಾಗಿ ಸರ್ವೆ ನಂಬರ್ 171 ಪಿ 7 ರಲ್ಲಿನ 20 ಎಕರೆ ಜಾಗ ಕೊಡಿ ಎಂದು ಕೇಳುತ್ತಾರೆ. 10.7.2008 ರಲ್ಲಿ ಡಿವಿಎಸ್ ಗೌಡರ ಗೌಡರ ಪಾಳೆಯದ ಅಡಿಯಾಳಿನಂತಾಗಿರುವ ಸುಳ್ಯದ ಶಾಸಕ ಅಂಗಾರ ಎಂಬ ಪಾಪದ ದಲಿತನೂ ಸರ್ಕಾರಕ್ಕೆ ಪತ್ರ ಬರೆದು ಕೆ.ಎಸ್. ಗೌಡ ಟ್ರಸ್ಟ್‌ಗೆ ಕಲ್ಲಡ್ಕದ ಅರಣ್ಯಭೂಮಿ ಕೊಡಿಯೆನ್ನುತ್ತಾರೆ. ರಾಜ್ಯ ಬಿಜೆಪಿಯ ಪವರ್‌ಫುಲ್ ಅಧ್ಯಕ್ಷ ಡಿ.ವಿ. ಸದಾನಂದ ಗೌಡರು ತಮ್ಮ ಲೆಟರ್ ಹೆಡ್‌ನಲ್ಲಿ ಕಂದಾಯ ಮಂತ್ರಿಗೆ ಪತ್ರ ಬರೆದು 'ತಮ್ಮವರ' ಟ್ರಸ್ಟ್‌ಗೆ ಅರಣ್ಯ ಜಾಗ ಮಂಜೂರು ಮಾಡಿ ಅನ್ನುತ್ತಾರೆ.

ಇದೆಲ್ಲಾ ಇಟ್ಟುಕೊಂಡು ಸರ್ಕಾರದ ಮುಖ್ಯ ಕಾರ್ಯದರ್ಶಿ 31.8.2010 ರಂದು ಅರಣ್ಯ ಇಲಾಖೆಯ ಅಭಿಪ್ರಾಯ ಕೇಳಿದ್ದಾರೆ. ಅದಕ್ಕೆ ಹಿಂದೆಲ್ಲ ಸಾರ್ವಜನಿಕರ ಉದ್ದೇಶಕ್ಕೆ ಈ ಜಾಗ ಕೇಳಿದಾಗ ರೂಲ್ಸ್ ಫಾಲೋ ಮಾಡುವವರಂತೆ ಹಾರಾಡಿದ್ದ ಅರಣ್ಯ ಇಲಾಖಾಧಿಕಾರಿಗಳು ಕಮಕ್‌ಕಿಮಕ್ ಎನ್ನದೆ ಗೌಡರ ಟ್ರಸ್ಟ್‌ಗೆ ಜಾಗ ಕೊಡಲು ಒಪ್ಪಿಗೆ ಸೂಚಿಸಿದ್ದಾರೆ. ಇದೆಲ್ಲ ಶರವೇಗದಲ್ಲಿ ನಡೆದು ಹೋಗಿದೆ.

ಇದು ಯಡ್ಡಿಯ ಭೂಕರ್ಮಕಾಂಡದಷ್ಟೇ ಸೀರಿಯಸ್ ಕೇಸ್. ಸದಾನಂದ ಗೌಡರ ಕರಾಮತ್ತಿನಿಂದಾದ ಭಾನ್ಗಡಿ. ಇದು ಸಿಎಂ ಸದಾನಂದ ಗೌಡರ ಕೊರಳಿಗೆ ಉರುಳಾದೀತಾ? ಲೋಕಾಯುಕ್ತರು ನಿಷ್ಠೂರವಾಗಿ ಬೇಗ ತನಿಖೆ ಮುಗಿಸಿದರೆ ಗೌಡರಿಗೆ ಗಂಡಾಂತರ ಗ್ಯಾರಂಟಿ. ಹಾಗಂತ ಈ ಜಾಗದ ಮಹಿಮೆ ಬಲ್ಲ ಸುಳ್ಯ-ಪುತ್ತೂರಿನ ಜನ ಹೇಳುತ್ತಿದ್ದಾರೆ!

ಬಿಡಿಎ ಸೈಟ್ ಅಕ್ರಮ



ಕರ್ನಾಟಕದ ಹೊಸ ಸಿಎಮ್ಮೂ ಭೂಗಳ್ಳ ಕಣ್ರಿ......!

ನಮ್ಮ ಬಹುತೇಕ ರಾಜಕಾರಣಿಗಳಿಗೆ ತಾವಿರುವ ಹಾಗೂ ಓಡಾಡುವ ಊರುಗಳೆಲ್ಲಾ ಒಂದೊಂದು ಸರ್ಕಾರಿ ಸೈಟು ಹಾಗೂ ಮನೆ ಲಪಟಾಯಿಸುವ ಭ್ರಷ್ಟ ಹವ್ಯಾಸವೊಂದಿದೆ. ಬೆಂಗಳೂರಿನಲ್ಲಿ ಸ್ವಂತ ಮನೆಗಳಿರುವ ಅನೇಕ ಶಾಸಕರೂ ಸಹ ತಮಗೆ ಎಲ್ಲೂ ನೆಲೆಯಿಲ್ಲವೆಂದು ಸುಳ್ಳು ಅಫಿಡವಿಟ್ ನೀಡಿ ಬಿಡಿಎ ಸೈಟು ಕಬಳಿಸುವ ಚಾಳಿ ಹೊಂದಿದ್ದಾರೆ.

ಸದಾನಂದ ಗೌಡರೂ ಅದೇ ಗುಂಪಿಗೆ ಸೇರಿರುವವರೇ ಆಗಿದ್ದಾರೆ.

ಬೆಂಗಳೂರಿನ ಹೊಸೂರು-ಸರ್ಜಾಪುರ ರಸ್ತೆಯ ಎಚ್‌ಎಸ್‌ಆರ್ ಲೇಔಟ್‌ನಲ್ಲಿ 2007 ರ ಫೆಬ್ರವರಿ 2 ರಂದು ಸದಾನಂದ ಗೌಡರು ಬಿಡಿಎ ಮೂಲಕ ಒಂದು 50x80 ಅಡಿ ಅಳತೆಯ ಸೈಟು ಮಂಜೂರು ಮಾಡಿಸಿಕೊಂಡಿದ್ದಾರೆ. ಸರ್ವೆ ನಂ. 12 ಮತ್ತು 13 ರಲ್ಲಿ ವಿಂಗಡಿಸಲಾಗಿದ್ದ 2 ಬಿ ಸಂಖ್ಯೆಯ ಈ ದೊಡ್ಡ ಸೈಟಿಗೆ ಮಂಜೂರಾದ ಕಾಲದಲ್ಲೇ ಒಂದು ಕೋಟಿ ರೂಗಿಂತ ಜಾಸ್ತಿ ಬೆಲೆಯಿತ್ತು. ಆದರೆ ಜುಜುಬಿ ಏಳು ಲಕ್ಷ ಚಿಲ್ಲರೆ ಮೊತ್ತಕ್ಕೆ ಸೈಟ್ ಸದಾನಂದನ ಬಾಯಿಗೆ ಬಿತ್ತು. ಅದೇ ವೇಳೆಗೆ ಈ ಸೈಟಿನ ಬೆನ್ನಿಗಿದ್ದ 13 ಬಿ ಸಂಖ್ಯೆಯ 50x80 ಅಳತೆಯ ಇನ್ನೊಂದು ಸೈಟು ಬಿಜೆಪಿಯ ಶಾಸಕ ಜೀವರಾಜ್‌ಗೆ ಸಿಕ್ಕಿತು.

ನೆನಪಿಡಿ,

ಇದು ವಸತಿ ಉದ್ದೇಶಕ್ಕಾಗಿ ಮಾತ್ರ ನೀಡಲಾಗಿದ್ದ ಬಿಡಿಎ ನಿವೇಶನಗಳಾಗಿದ್ದವು.

ಅದೇ ಜಾಗದಲ್ಲಿ ಈಗ ಸದಾನಂದ ಕಾಂಪ್ಲೆಕ್ಸ್ ಎಬ್ಬಿಸುತ್ತಿದ್ದಾರೆ.

ಈ ಹಗರಣದ ಸ್ವರೂಪ ಇಷ್ಟಕ್ಕೇ ಸೀಮಿತವಾಗಿಲ್ಲ,

ಶಾಸಕ ಜೀವರಾಜ್‌ಗೆ ಮಂಜೂರಾಗಿರುವ ಸೈಟನ್ನೂ ತಮ್ಮ ಸೈಟನೊಂದಿಗೆ ಸೇರಿಸಿಕೊಂಡೇ ಈ ಬೃಹತ್ ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ಕಟ್ಟಿಸುತ್ತಿದ್ದಾರೆ.

ಇದೊಂದು ಅಕ್ರಮ ನಿರ್ಮಾಣ.

ಏನಾಯಿತೆಂದರೆ,

2009 ಜೂನ್ 4 ರಂದು ಸದಾನಂದ ಗೌಡರು ಬಿಡಿಎಗೆ ಒಂದು ಅರ್ಜಿ ನೀಡಿ ತಮ್ಮ ಸೈಟ್ 2 ಬಿ ಹಾಗೂ ಜೀವರಾಜ್‌ರ ಸೈಟ್ 13 ಬಿ ಇವೆರಡನ್ನೂ ಒಟ್ಟಿಗೆ ಸೇರಿಸಿ (Amalgamate) ಕಟ್ಟಡ ಕಟ್ಟಲು ಅನುಮತಿ ಕೇಳುತ್ತಾರೆ. ಆದರೆ ಬಿಡಿಎ ದಿನಾಂಕ 24.09.09 ರಲ್ಲಿ ಪತ್ರ ಸಂಖ್ಯೆ ಬೆಂ ಅಪ್ರಾ: ನಾಯೋಸ/ಜಿ-161/ 984/ 2009-10 ರ ಮೂಲಕ ಉತ್ತರಿಸಿ 'ಅನುಮತಿ ನಿರಾಕರಿಸುತ್ತದೆ.'

ಆದರೆ ಸದಾನಂದರು ಬಿಡಿಎ ಆದೇಶಕ್ಕೆ ಕವಡೆ ಕಾಸಿನ ಬೆಲೆಯನ್ನು ನೀಡದೆ ತಮಗಿಷ್ಟ ಬಂದ ರೀತಿಯಲ್ಲೇ ಕಾಂಪ್ಲೆಕ್ಸ್ ನಿರ್ಮಾಣ ಮುಂದುವರೆಸುತ್ತಾರೆ.

ಹೇಗಿದೆ ರಾಜ್ಯದ ಹೊಸ ಮುಖ್ಯಮಂತ್ರಿಯ ಕಾನೂನು ಪರಿಪಾಲನೆ?

ಬಿಡಿಎ ನಿಯಮಾವಳಿಯ ಪ್ರಕಾರ ಒಬ್ಬನೇ ವ್ಯಕ್ತಿಯ ಹೆಸರಿನಲ್ಲಿ ಅಕ್ಕಪಕ್ಕದಲ್ಲಿ ಸೈಟುಗಳಿದ್ದರೆ ಮಾತ್ರ ಅವನ್ನು ಸೇರಿಸಲು ಒಪ್ಪಲಾಗುತ್ತದೆ. ಅದನ್ನು ಬಿಟ್ಟು ಗಂಡ-ಹೆಂಡತಿ, ಅಣ್ಣ-ತಮ್ಮ, ತಂದೆ-ಮಕ್ಕಳ ಹೆಸರುಗಳಲ್ಲಿ ಸೈಟುಗಳಿದ್ದರೂ ಅದನ್ನು ಒಟ್ಟಿಗೆ-ಸೇರಿಸಿ ಕಟ್ಟಡ ರಚಿಸಲು ಅನುಮತಿ ನೀಡುವುದಿಲ್ಲ. ಕಾನೂನು ಹೀಗಿರುವಾಗ ಸದಾನಂದ ಗೌಡನ್ಯಾಕೆ ಅದಕ್ಕೆ ಮನ್ನಣೆ ನೀಡಲಿಲ್ಲ?

ಇಷ್ಟೇ ಅಲ್ಲ,

ವಸತಿ ನಿರ್ಮಾಣಕ್ಕೆಂದು ಕೊಟ್ಟಿರುವ ಸೈಟ್‌ಗಳಲ್ಲೇ ಈತ ಭರ್ಜರಿ ಕಾಂಪ್ಲೆಕ್ಸ್ ಕಟ್ಟಿಸುತ್ತಿರುವುದೂ ಅಕ್ರಮವಾಗಿದೆ.

ಈ ಕಾಂಪ್ಲೆಕ್ಸ್ ಈಗಾಗಲೇ ಐದು ಅಂತಸ್ತುಗಳಷ್ಟು ನಿರ್ಮಾಣಗೊಂಡಿದೆ. ಆದರೆ ಬಿಡಿಎ ಅನುಮತಿ ನೀಡಿರುವುದು ಕೇವಲ ಮೂರು ಅಂತಸ್ತುಗಳಿಗೆ ಮಾತ್ರ!

ಇದು ಕಾನೂನಿನ ಉಲ್ಲಂಘನೆಯೇ ಆಗಿದೆ.


ಬೆಂಗಳೂರಿನಲ್ಲಿ ವಸತಿ ಉದ್ದೇಶಕ್ಕೆಂದು ಮೂರು ಅಂತಸ್ತುಗಳವರೆಗೆ ಮಾತ್ರ ಕಟ್ಟಡ ಕಟ್ಟಲು ಅನುಮತಿ ಕೊಡುತ್ತಾರೆ. ಆದರೆ ಸದಾನಂದ ಗೌಡರು ಮಾತ್ರ ವಸತಿ ಉದ್ದೇಶದ ಸೈಟಿನಲ್ಲಿ ಕಾಂಪ್ಲೆಕ್ಸ್ ಕಟ್ಟಿಸುತ್ತಾರೆ, ಅನುಮತಿಯೇ ಇರದಿದ್ದರೂ ಮೂರಂತಸ್ತಿನ ಬದಲಾಗಿ ಐದಂತಸ್ತಿನ ಕಾಂಪ್ಲೆಕ್ಸ್ ಎಬ್ಬಿಸುತ್ತಾರೆ. ಕಾನೂನುಬಾಹಿರವಾಗಿ ಪಕ್ಕದವರ ಸೈಟನ್ನು ತಮ್ಮದರ ಜೊತೆಗೇ ಸೇರಿಸಿಕೊಂಡು ಕಾಯ್ದೆ ಉಲ್ಲಂಘಿಸುತ್ತಾರೆ.


ಇಂತಾ ವ್ಯಕ್ತಿ ಈಗ ರಾಜ್ಯದ ಮುಖ್ಯಮಂತ್ರಿ.

ಇಲ್ಲಿ ಬಿಡಿಎಗೂ ಒಂದು ಪ್ರಶ್ನೆ ಕೇಳಬೇಕಿದೆ.

ಬೆಂಗಳೂರಿನಲ್ಲಿ ಪ್ರತಿನಿತ್ಯ ಬಿಡಿಎಯ ಬುಲ್ಡೋಜರ್‌ಗಳು ಒಂದಲ್ಲಾ ಒಂದು ಕಡೆ ಬಡವರ ಮನೆಗಳನ್ನು ಕೆಡವುವ ಕೆಲಸ ಮಾಡುತ್ತಿರುತ್ತವೆ.

(ಮುಂದಿನ ಪುಟಕ್ಕೆ...)





ಅಡ್ವಾಣಿಗೆ ಮಣ್ಣು ಮುಕ್ಕಿಸಿದ ಯಡ್ಡಿ!

ಬಿಜೆಪಿಯ ನ್ಯಾಷನಲ್ ಲೀಡರ್, ಹಿರೀಕ, ಈ ಹಿಂದಿನ ಹಾಗೂ ನಾಳಿನ ಪ್ರಧಾನಿ ಅಭ್ಯರ್ಥಿ ಇತ್ಯಾದಿ ಬಿರುದಾಂಕಿತ ಎಲ್.ಕೆ. ಅಡ್ವಾಣಿ ಕರ್ನಾಟಕದ ಅಖಾಡದಲ್ಲಿ ಮಣ್ಣು ಮುಕ್ಕಿದ್ದಾರೆ.

ಅಡ್ವಾಣಿಯನ್ನು ಹೀಗೆ ಸೋಲಿಸಿ, ಹೆಡೆಮುರಿ ಕಟ್ಟಿ ಮೂಲೆಗೆ ತಳ್ಳಿದ್ದು ಬೇರ್‍ಯಾರೂ ಅಲ್ಲ, ಅದೇ ಬಿಜೆಪಿಯ ಲಿಂಗಾಯತರ ನಾಯಕ ಯಡಿಯೂರಪ್ಪ! ಬಹುಶಃ ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಈ ಸೋಲನ್ನು ಅರಗಿಸಿಕೊಳ್ಳಲು ವರ್ಷಗಳೇ ಬೇಕಾಗಬಹುದು. **A party with a difference** ಎಂದು ಸುಳ್ಳು ಸುಳ್ಳೇ ಪ್ರಚಾರ ಮಾಡಿಕೊಳ್ಳುತ್ತಿದ್ದ ಬಿಜೆಪಿ ಇನ್ನು ಮುಂದೆ ಈ ಹಿಂದಿನ ಬಿಜೆಪಿಯಾಗಿ ಉಳಿಯುವುದಿಲ್ಲ ಎಂಬುದನ್ನು ಕರ್ನಾಟಕದ ರಾಜಕೀಯ ಘಟನೆಗಳು ಹೇಳುತ್ತಿವೆ.



ಕರ್ನಾಟಕದ ಮಟ್ಟಿಗೆ ಬಿಜೆಪಿಯ ದೆಹಲಿ ನಾಯಕರು ಹೈಕಮಾಂಡ್ ಅಲ್ಲ ಎನ್ನುವುದನ್ನು ಇದು ತೋರಿಸಿಕೊಟ್ಟಿದೆ. ರಾಜ್ಯ ಬಿಜೆಪಿಯೊಳಗಿನ ಭಿನ್ನಮತೀಯ ಗುಂಪು ಮತ್ತೆ ಕೆಲಸ ಶುರು ಮಾಡಲಿದೆ ಎಂಬುದನ್ನು ಇದು ಮತ್ತೆ ಸಾಬೀತು ಮಾಡುತ್ತಿದೆ. ಹಾಗೆ ನೋಡಿದರೆ ಕಳೆದ ಮೂರು ವರ್ಷಗಳಿಂದಲೂ ಬಿಜೆಪಿಯೊಳಗೆ ಒಂದಲ್ಲಾ ಒಂದು ಭಿನ್ನಮತೀಯರ ಗುಂಪು ಆಕ್ಟೀವ್ ಆಗಿ ಇದ್ದೇ ಇತ್ತು. ಒಮ್ಮೆ ಯಡ್ಡಿ ಗುಂಪು ಭಿನ್ನರ ರೀತಿ ವರ್ತಿಸಿದರೆ ಇನ್ನೊಮ್ಮೆ ರೆಡ್ಡಿ ಗುಂಪು.... ಮತ್ತೊಮ್ಮೆ ಹೈಕಮಾಂಡ್ ನಿಷ್ಠರ ಗುಂಪು ಭಿನ್ನರ ಗುಂಪಾಗಿ ವರ್ತಿಸುತ್ತಿತ್ತು. ಕಳೆದ ಒಂದು ವಾರದ ಘಟನೆಗಳಂತೂ ದಿನಕ್ಕೊಂದು ಗುಂಪು ಭಿನ್ನರ ಅವತಾರದಲ್ಲಿ ಕೆಲಸ ಮಾಡಿದೆ.

ಈಗ ಸದಾನಂದ ಗೌಡರ ಸರ್ಕಾರದ ವಿರುದ್ಧವಿರುವ ಭಿನ್ನರ ಗುಂಪು ಯಾರದ್ದು ಗೊತ್ತೆ?

ಹೈಕಮಾಂಡ್ ನಿಷ್ಠರದ್ದು!

ರೆಡ್ಡಿ ಬಣದ್ದು!!

ಸದಾನಂದರ ಪ್ರಮಾಣ ವಚನ ಸಮಾರಂಭದಲ್ಲಿ ಶೆಟ್ಟರ್ ಬಣ ಹಾಗೂ ರೆಡ್ಡಿ ಕ್ಯಾಂಪಿನ ಯಾವೊಬ್ಬ ಶಾಸಕರೂ ಕಾಣಿಸಿಕೊಳ್ಳಲಿಲ್ಲ. ಇದು ಶುರುವಾಗಲಿರುವ ಹೊಸ ಕದನಕ್ಕೆ ಮುನ್ನುಡಿಯಂತಿದೆ.

ಹೈಕಮಾಂಡ್‌ಗೇ ಯಡ್ಡಿ ಕಡಿವಾಣ

ಲೋಕಾಯುಕ್ತರ ತನಿಖಾ ವರದಿಯಲ್ಲಿ ತನ್ನ ಭ್ರಷ್ಟಾಚಾರಗಳ ಪ್ರಸ್ತಾಪ ಇದ್ದೇ ಇರುತ್ತದೆಂಬುದು ಯಡ್ಡಿಗೆ ಗ್ಯಾರಂಟಿ ತಿಳಿದಿತ್ತು. ವರದಿ ಸಲ್ಲಿಕೆಯಾದ ನಂತರ ಉದ್ಭವಿಸಬಹುದಾದ ಪರಿಸ್ಥಿತಿಯ ಬಗ್ಗೆಯೂ ಯಡ್ಡಿಗೆ ಒಂದು ಅಂದಾಜಿತ್ತು. ಆಗಲೇ ಮುಂದೆ ಏನೇನು ದಾಳ ಉರುಳಿಸಬೇಕೆಂಬ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ರೆಡಿ ಮಾಡಿಕೊಂಡ ಯಡ್ಡಿ ಕೊನೆಗೂ ತಮ್ಮ ಹಠ ಸಾಧಿಸಿದ್ದಾರೆ.

ನೀವೇ ಗಮನಿಸಿ ನೋಡಿ ಈ ಬಿಕ್ಕಟ್ಟಿನ ಪ್ರಸಂಗದಲ್ಲಿ ಹೈಕಮಾಂಡ್ ಮೇಲುಗೈ ಸಾಧಿಸುವ ಒಂದೇ ಒಂದು ಅವಕಾಶವನ್ನು ಯಡ್ಡಿ ಬಿಟ್ಟುಕೊಡಲಿಲ್ಲ.

ರಾಜಕೀಯ ತಂತ್ರ ರೂಪಿಸುವ ವಿಚಾರದಲ್ಲಿ ಯಡ್ಡಿ ಪಾರ್ಟಿ ಹೈಕಮಾಂಡ್‌ಗಿಂತ ಮೈಲುಗಟ್ಟಲೆ ಮುಂದಿರುವಂತಿದೆ.

ವರಿಷ್ಠರು ಕರೆದ ತಕ್ಷಣ ದೆಹಲಿಗೆ ಹೋಗದೆ ನಿರ್ಲಕ್ಷಿಸುವುದು, 'ರಾಜೀನಾಮೆ ಕೊಡು' ಅಂತ ಹೈಕಮಾಂಡ್ ಕೇಳಿದಾಗ 'ನಾನ್ಯಾಕೆ ಕೊಡಲಿ' ಎಂದು ಉಲ್ಟಾ ಹೊಡೆದು ದೆಹಲಿ ನಾಯಕರ ಮಾನಮರ್ಯಾದೆಯನ್ನೆಲ್ಲಾ ಹರಾಜಾಕಿಬಿಟ್ಟರು ಯಡ್ಡಿ. ಕೊನೆಗೆ ರಾಜೀನಾಮೆ ಕೊಡುವಾಗಲೂ ತನಗೆ ಅನುಕೂಲವಾದ ದಿನ, ಸಮಯ ಹಾಗೂ ಸನ್ನಿವೇಶ ನಿರ್ಮಾಣಗೊಂಡ ನಂತರವೇ ಯಡ್ಡಿ ಕುರ್ಚಿ ಬಿಟ್ಟಿದ್ದು.

ಹಾಗೆ ನೋಡಿದರೆ ಇದೂ ಕೂಡ ಹೈಕಮಾಂಡ್ ಗೆಲುವಲ್ಲ, ಬದಲಾಗಿ ಸದಾನಂದ ಗೌಡರನ್ನು ಕೈಗೊಂಬೆ ಮಾಡಿಕೊಂಡು ಸೂಪರ್ ಸಿಎಂ ಆಗಲಿರುವ ಯಡ್ಡಿಯ ಗೆಲುವೇ ಆಗಿದೆ.

ಶೆಟ್ಟರ್‌ಗಾಗಿ ಹೈಕಮಾಂಡ್ ಪರದಾಟ

ಹೊಸ ಸಿಎಂ ಆಯ್ಕೆಯು ಸರ್ವಸಮ್ಮತವಾಗಿ ಆಗಲಿ ಎನ್ನುವ ಅಪೇಕ್ಷೆ ದೆಹಲಿ ನಾಯಕರಿಗಿತ್ತು. ಯಡ್ಡಿ ಹೆಸರೆತ್ತಿದರೆ ಈಗ ಉರಿದುಬೀಳುವ ಅಡ್ವಾಣಿಗಂತೂ ಯಡ್ಡಿ ಕ್ಯಾಂಪ್‌ನ ಯಾರೂ ಸಿಎಂ ಆಗಕೂಡದೆಂಬ ಖಚಿತ ನಿಲುವಿತ್ತು. ಆದರೆ ಯಡ್ಡಿ ಬಿಗಿಪಟ್ಟು ಹಾಕಿ ಕೂತರು. 'ಶಾಸಕರ ಅಭಿಪ್ರಾಯ ಕೇಳಿ ಹೊಸ ನಾಯಕನ ಆಯ್ಕೆ ಮಾಡಿ' ಅಂತಾ ಹಠ ಮಾಡಿದರು. ಪ್ರಜಾಪ್ರಭುತ್ವದ ನೆಲೆಯಲ್ಲಿ ಹೇಳಬೇಕೆಂದರೆ ಯಡ್ಡಿಯ ನಿಲುವು ಸರಿಯಿತ್ತು. ಆದರೆ ಎಪ್ಪತ್ತರಷ್ಟು ಶಾಸಕರು ಯಡ್ಡಿಯ ಅಭ್ಯರ್ಥಿ ಸದಾನಂದ ಗೌಡರ ಪರ ಕೈ ಎತ್ತುತ್ತಾರೆನ್ನುವುದು ಹೈಕಮಾಂಡ್‌ಗೆ ಗೊತ್ತಿತ್ತು. ಜೊತೆಗೆ ಈಗಲಾದರೂ ಕರ್ನಾಟಕ ಘಟಕದ ಪಕ್ಷವನ್ನು ಯಡ್ಡಿ ಹಿಡಿತದಿಂದ ಬಿಡಿಸಿ ಹೈಕಮಾಂಡ್ ಕಂಟ್ರೋಲಿಗೆ ಪಡೆಯಬೇಕೆಂಬ ಇಚ್ಛೆಯೂ ದೆಹಲಿ ನಾಯಕರಿಗಿತ್ತು. ಹಾಗಾಗಿಯೇ ಅವರು ಜಗದೀಶ್ ಶೆಟ್ಟರ್‌ರನ್ನು ಸರ್ವಸಮ್ಮತ ನಾಯಕನನ್ನಾಗಿ ಆರಿಸುವಂತೆ ಯಡ್ಡಿ ಕ್ಯಾಂಪ್‌ನ ಮೇಲೆ ಒತ್ತಡ ತಂದರು. ಆಗಸ್ಟ್ 1 ರಿಂದ 3 ನೇ ತಾರೀಖಿನ ತನಕ ನಡೆದದ್ದು ಇದೇ ಪುರಾಣ. ಬಿಜೆಪಿಯ ಹಿರಿ-ಕಿರಿ ಲೀಡರ್‌ಗಳೆಲ್ಲಾ ಯಡ್ಡಿ ಮನೆ, ಪಾರ್ಟಿ ಆಫೀಸು, ಭಾಸ್ಕರಿ ಹೋಟೆಲು, ಅಶೋಕಾ ಹೋಟೆಲೆಂದು ತಿಕ್ಕಲಿಡಿದವರಂತೆ ತಿರುಗಿದ್ದೂ ಇದೇ ಕಾರಣಕ್ಕೆ.

ಆದರೆ ಯಡ್ಡಿ ಮಣಿಯಲಿಲ್ಲ. ಕೊನೆಗೆ ಅಡ್ವಾಣಿ ಹಾಗೂ ಬಿಜೆಪಿ ಹೈಕಮಾಂಡ್ ಇಷ್ಟಕ್ಕೆ ವಿರುದ್ಧವಾಗಿ ಶಾಸಕರಿಂದ ರಹಸ್ಯ ಮತದಾನ ಮಾಡಿಸಬೇಕಾಯಿತು.

ಅಲ್ಲಿ ಯಡ್ಡಿ ನಿರೀಕ್ಷಿಸಿದ್ದ ಆದರೆ ಹೈಕಮಾಂಡ್‌ಗೆ ಬೇಡದಿದ್ದ ರಿಜಲ್ಟ್ ಬಂದೇ ಬಂತು.

ಸದಾನಂದ ಗೌಡ ಹೊಸ ಸಿಎಂ ಆದರು. ಆದರೆ ಯಡ್ಡಿ ನೇರವಾಗಿ ಸರ್ಕಾರವನ್ನು ತಮ್ಮ ಕಂಟ್ರೋಲಿನಲ್ಲಿ ಇಟ್ಟುಕೊಳ್ಳುತ್ತಾರೆ.

ಇದು ಎಲ್ಲರಿಗೂ ಅರ್ಥವಾಗಿದೆ.

ಹೈಕಮಾಂಡ್ ಸೋತು ಶರಣಾಗಿದೆ.

ಬಗೆ ಹರಿಯದ ಭಿನ್ನಮತ

ಸದಾನಂದ ಗೌಡರ ಪ್ರಮಾಣವಚನ ಸಮಾರಂಭಕ್ಕೆ ಜಗದೀಶ್ ಶೆಟ್ಟರ್ ಬರಲಿಲ್ಲ, ಅಶೋಕ್ ಇರಲಿಲ್ಲ, ರೆಡ್ಡಿ ಗುಂಪು ಅತ್ತ ತಲೆಯೇ ಹಾಕಲಿಲ್ಲ, ಮೈಸೂರಿನ ಸಚಿವ ರಾಮದಾಸ್ ಕಾಣಲಿಲ್ಲ... ಹೀಗೆ ಇದ್ದವರಿಗಿಂತ ಇರದಿದ್ದವರ ಪಟ್ಟಿಯೇ ಸಾಕಷ್ಟಿದೆ. ಸಾರಾಂಶದಲ್ಲಿ ಹೇಳಬೇಕೆಂದರೆ ಬಿಜೆಪಿ ಶಾಸಕರ ಪೈಕಿ ಅರ್ಧದಷ್ಟು ಮಂದಿ ಯಡ್ಡಿ-ಸದಾನಂದ ಗೌಡರ ಹಿಂದೆ ಇಲ್ಲ... ಮುಂದೆ ಇರುವುದೂ ಇಲ್ಲ. ಇಲ್ಲಿ ಗಮನಿಸಬೇಕಾದ ವಿಚಾರ ಏನೆಂದರೆ ಯಡ್ಡಿ ವಿರೋಧಿಗಳಾದ ಈ ಭಿನ್ನರ ಗುಂಪಿಗೆ ಬಿಜೆಪಿ ಹೈಕಮಾಂಡ್‌ನ ಬೆಂಬಲವಿದೆ.

'ಇನ್ನಾರು ತಿಂಗಳಲ್ಲಿ ಮತ್ತೆ ನಾನೇ ಸಿಎಂ ಆಗಿ ಬರ್‍ತೀನಿ' ಎಂದು ಯಡ್ಡಿ ಈಗಾಗಲೇ ಹೇಳಿದ್ದಾರೆ.

ಬಿಜೆಪಿಗೀಗ ಯಡ್ಡಿ ಅಂದರೆ ಬಿಸಿ ಬಿಸಿ ಕೆಂಡ ನುಂಗಿದ ಹಾಗೆ......!

ಈ ಬಿಜೆಪಿಗಳ ರಗಳೆ ಸದ್ಯಕ್ಕಂತೂ ಮುಗಿಯುವುದಿಲ್ಲ.

● ಪಾರ್ವತೀಶ

(ಹಿಂದಿನ ಪುಟದಿಂದ.)

ಒತ್ತುವರಿ, ಅಕ್ರಮ ಸೈಟು, ಅನಧಿಕೃತ ಮನೆ... ಇತ್ಯಾದಿ ನೆಪ ನೀಡಿ, ಹೇಳದೆ ಕೇಳದೆ ಮನೆ ಮನೆಗಳಿಗೆ ನುಗ್ಗಿ ಬೀಳಿಸಿ ಹೋಗುವ ಬಿಡಿಎ ಅಧಿಕಾರಿಗಳು ಈಗ್ಯಾಕೆ ಸುಮ್ಮನಿದ್ದಾರೆ?

ಸದಾನಂದ ಗೌಡ ಈ ರಾಜ್ಯದ ಕಾನೂನಿಗಿಂತ ದೊಡ್ಡವರಾ?

ಮಂಜೂರಾಗಿದ್ದು 40x60 ಲಪಟಾಯಿಸಿದ್ದು 50x80

ಇದೂ ಮೋಸವೇನೆ!

ಸದಾನಂದರಿಗೆ ವಾಸ್ತವವಾಗಿ ಸರ್ಕಾರ 40x60 ಅಳತೆಯ ಸೈಟ್ ನೀಡುವಂತೆ ಶಿಫಾರಸ್ಸು ಮಾಡಿತ್ತು. ಆದರೆ ಬಿಡಿಎಗೆ ಬರುವಷ್ಟರೊಳಗೆ ಅದರ ವಿಸ್ತೀರ್ಣ 50x80 ಆಗಿಬಿಟ್ಟಿದೆ.

ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಟಿ. ರಂಗನಾಥ್ ದಿನಾಂಕ 10.2.2004 ರಲ್ಲಿ ಬಿಡಿಎಗೆ ಒಂದು ಪತ್ರ ಬರೆದು (ಸಂಖ್ಯೆ ನ ಅ 2 222 ಬೆಂಭೂಸ್ವಾ/ 2003). ಆಗ ಶಾಸಕರಾಗಿದ್ದ ಸದಾನಂದ ಗೌಡರಿಗೆ ಬಿಡಿಎ ವತಿಯಿಂದ 40x60 ಅಡಿ ಅಳತೆಯ ಸೈಟ್ ನೀಡುವಂತೆ ಆದೇಶ ನೀಡಿದ್ದರು.

ಆದರೆ ಮುಂದೆ 2.2.2007 ರಲ್ಲಿ ಸದಾನಂದರಿಗೆ ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಬಿಡಿಎ ಸೈಟ್ ನೀಡಿದಾಗ ಅದರ ವಿಸ್ತೀರ್ಣ 50x80 ಅಡಿಗೆ ಹೆಚ್ಚಾಗಿಬಿಟ್ಟಿದೆ.

ಈ ಪವಾಡ ಹೇಗಾಗಿರಬಹುದು? ಬಿಡಿಎ ಅಧಿಕಾರಿಗಳಿಗೆ ಸದಾನಂದ ಗೌಡ ಲಂಚ ತಿನ್ನಿಸಿ ಈ ಅಕ್ರಮ ನಡೆಸಿದ್ದಾರೆಂಬುದಕ್ಕೆ ಇಲ್ಲಿರುವ ದಾಖಲೆಗಳೇ ಸಾಕ್ಷಿ.

ಶೆಟ್ಟರ್‌ಗೆ ಕೈಕೊಟ್ಟ ಪಂಚಮಸಾಲಿಗಳು



ಯಡಿಯೂರಪ್ಪ ಕುರ್ಚಿ ಬಿಟ್ಟಿಳಿಯುತ್ತಲೇ ಗದ್ದುಗೆ ಹಿಡಿಯುವ ರೇಸ್‌ನಲ್ಲಿ ಹಲವರ ಹೆಸರು ತೂರಿ ಬಂದಿತ್ತು. ಕಡೆಗೂ ನಿರ್ಣಾಯಕವಾಗಿ ನಿಂತುಕೊಂಡಿದ್ದು ಜಗದೀಶ್ ಶೆಟ್ಟರ್ ಹಾಗೂ ಸದಾನಂದಗೌಡ.

ಜಾತಿ ಲೆಕ್ಕಾಚಾರ, ಬಿಜೆಪಿ ಹೈಕಮಾಂಡ್‌ನ ಭವಿಷ್ಯತ್ತಿನ ಚಿಂತನೆಗಳನ್ನೆಲ್ಲಾ ಗ್ರಹಿಸಿದ ಮಂದಿ ಜಗದೀಶ್ ಶೆಟ್ಟರ್ ಸಿಎಂ ಆಗೋದು ಖಚಿತ ಅಂತಲೇ ಅಂದುಕೊಂಡಿದ್ದರು. ಯಾಕೆಂದರೆ ಶೆಟ್ಟರ್ ಪ್ರಭಾವೀ ಲಿಂಗಾಯತ ಸಮುದಾಯದವರು. ಈ ಸಮುದಾಯದ ನೆಲೆಯಾದ ಉತ್ತರ ಕರ್ನಾಟಕವೇ ಶೆಟ್ಟರ್ ತವರು ನೆಲವೆಂಬುದು ಮತ್ತೊಂದು ಕಾರಣ. ಆದರೆ ಇಂಥ ಲೆಕ್ಕಾಚಾರಗಳೆಲ್ಲ ತಲೆಕೆಳಗಾಗಿ ಒಕ್ಕಲಿಗ ಸಮುದಾಯದ ಸದಾನಂದಗೌಡ ಗೆಲುವಿನ ನಗೆ ಬೀರಿದ್ದಾರೆ.

ಇದು ಹೇಗೆ ಸಾಧ್ಯವಾಯಿತು ಎಂಬುದನ್ನು ಹುಡುಕುತ್ತಾ ಸಾಗಿದರೆ ಶೆಟ್ಟರ್‌ಗೆ ಲಿಂಗಾಯತ ಸಮುದಾಯದ ಪ್ರಭಾವೀ ಪಂಗಡವಾದ ಪಂಚಮಸಾಲಿಗಳೇ ಕೈಕೊಟ್ಟಿರುವ ವಿಚಾರ ಸ್ಪಷ್ಟವಾಗುತ್ತದೆ. ಗಮನೀಯ ಸಂಗತಿಯೆಂದರೆ ಇದರ ಹಿಂದೆಯೂ ಯಡಿಯೂರಪ್ಪನ ಜಾತಿ ರಾಜಕೀಯದ ನೆರಳಿದೆ.

ಯಡ್ಡಿ ಕಳೆದ ತಿಂಗಳು ತನ್ನ ಹೆಂಡತಿ ಮೈತ್ರಾದೇವಿಯ ತಂಗಿ ಮಗನ ನಿಶ್ಚಿತಾರ್ಥ ನಡೆಸಿದ್ದು ನಿಮಗೆ ನೆನಪಿರಬಹುದು. ಈ ಸಂದರ್ಭದಲ್ಲಿ ಪಂಚಮಸಾಲಿ ಪಂಗಡದ ಧಾರವಾಡ ಕುಂದಗೋಳದ ಶಾಸಕ ಚಿಕ್ಕನಗೌಡ್ರನೊಂದಿಗೆ ಸಂಬಂಧ ಕುದುರಿಸಿದ ಯಡ್ಡಿ. ಈತನ ಮಗಳು ನಂದಾ ಯಡ್ಡಿ ಫ್ಯಾಮಿಲಿಯ ಸೊಸೆಯಾದಳು. ಈ ಸಂಬಂಧದ ಹಿಂದೆ ಜಾತಿ ರಾಜಕೀಯದ ಸಂಚಿರುವುದನ್ನು 'ಪತ್ರಿಕೆ' ಆಗಲೇ ಬಯಲು ಮಾಡಿತ್ತು

ಅದೀಗ ನಿಜವಾಗಿದೆ. ಯಡ್ಡಿಯ ಗಿಮಿಕ್ಕಿಗೆ ಪಂಚಮಸಾಲಿ ಪಂಗಡ ಬಲಿ ಬಿದ್ದದ್ದೂ ಸ್ಪಷ್ಟವಾಗಿದೆ. ಹೇಳಿಕೇಳಿ ಲಿಂಗಾಯತ ಸಮುದಾಯದಲ್ಲಿ ಪಂಚಮಸಾಲಿ ಎಂಬುದು ಪ್ರಬಲ ಪಂಗಡ. ಅದೀಗ ಯಡ್ಡಿ ಪರ ವಾಲುತ್ತಿರುವುದನ್ನು ಗಮನಿಸಿದ ಇತರೆ ಲಿಂಗಾಯತ ಶಾಸಕರು ಯಡ್ಡಿ ಬಣ ತೊರೆಯಲು ಧೈರ್ಯ ತೋರಲಿಲ್ಲ. ಆದುದರಿಂದಲೇ ಅವರಲ್ಲಿ ಬಹುತೇಕರು ರಹಸ್ಯ ಮತದಾನದ ವೇಳೆ ಸದಾನಂದಗೌಡರಿಗೆ ಓಟು ಹಾಕಿದರು.

ಈ ಕಾರಣದಿಂದಾಗಿ ಜಗದೀಶ್ ಶೆಟ್ಟರ್ ಈಗ ಉಪಮುಖ್ಯಮಂತ್ರಿ ಸ್ಥಾನಕ್ಕೇ ತೃಪ್ತಿ ಪಟ್ಟುಕೊಳ್ಳುವಂತಾಗಿದ್ದು ಸತ್ಯ. ಪಂಚಮಸಾಲಿ ಪಂಗಡ ಖಂಡಿತವಾಗಿಯೂ ಯಡ್ಡಿಗೆ ಸಪೋರ್ಟು ಮಾಡಿ ತಪ್ಪೆಸಗಿದೆ. ಅದರ ಪರಿಣಾಮ ಇನ್ನೇನು ಹತ್ತಿರದಲ್ಲೇ ಗೋಚರಿಸಲಿದೆ.


(10ನೇ ಪುಟದಿಂದ.)

ಕೆಸರು ಗದ್ದೆ ಗೂಟ

ಟ್ರಂಪ್‌ಕಾರ್ಡ್ ತೋರಿಸಿ ಸಖ್ಯವೂ ಕುದುರಿಸಿಕೊಂಡಿದ್ದರು. 2004 ರ ಲೋಕಸಭೆ ಚುನಾವಣೆ ಹೊತ್ತಲ್ಲಿ ಮಂಗಳೂರು ಕೊಡಗು ಏರಿಯಾದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮುಸ್ಲಿಮರ ಮತ ಕಾಂಗ್ರೆಸ್‌ಗೆ ಹೋಗದೆ ಬಿಜೆಪಿಯ ಸದಾನಂದ ಗೌಡರಿಗೆ ಅನುಕೂಲ ಮಾಡಿಕೊಡಲೆಂದೇ . ದೇವೇಗೌಡರು ಅಲ್ಪಸಂಖ್ಯಾತರ ಒಲವಿನ ಎ.ಕೆ. ಸುಬ್ಬಯ್ಯರನ್ನು ಜೆಡಿಎಸ್ ಕ್ಯಾಂಡಿಡೇಟ್ ಮಾಡಿದ್ದರೆಂಬ ಅಪವಾದವೂ ಇದೆ.

ದೇವೇಗೌಡರೊಂದಿಗಿನ ಸ್ನೇಹ-ಸಂಬಂಧವನ್ನು ಡಿವಿಎಸ್ ಗೌಡ ಬಳಸಿಕೊಂಡು 20 ತಿಂಗಳ 'ಕೋಜಾ' ಸರ್ಕಾರದಲ್ಲಿ 'ಮಹತ್ತರ' ಪಾತ್ರವಾಡಿದ್ದಂತೂ ಖರೆ. ಕೋಜಾ ಮತ್ತು ಪಕ್ಕಾ ಬಿಜೆಪಿ ಸರ್ಕಾರದ ಎರಡೂ ಅವಧಿಯಲ್ಲಿ ಆಳುವ ಬಿಜೆಪಿ ಅಧ್ಯಕ್ಷನಾಗಿ ಸದಾನಂದ ಗೌಡ ಅಷುದ್ಧವಾಗಿ ಹಲವು ಬಾರಿ ಬಡಬಡಿಸಿ ಸೂತ್ರಸಿದ್ಧರಾಗಿದ್ದರು. ಕೋಮುವಾದವನ್ನು ಸಮರ್ಥಿಸುವ ಭರದಲ್ಲಿ ಆತ ಮನುಷ್ಯತ್ವ-ಶಿಷ್ಟಾಚಾರ- ಕನಿಷ್ಠ ಲಜ್ಜೆಯನ್ನೂ ಮೀರಿ ಮಾತಾಡಿದ್ದಾರೆ. ಮಾತು-ಮಾತಿಗೆ ಹಲ್ಲು ಕಿಸಿಯುವ ಗೌಡರ ನಗೆ ಖತರ್‌ನಾಕ್ ಎಂಬುದು ಆತ ಚರ್ಚ್-ಪಬ್ -ಅಲ್ಪಸಂಖ್ಯಾತರ ಮೇಲೆಲ್ಲ ದಾಳಿಯಾದಾಗ ಬೀರಿದ ಹುಸಿ ನಗೆ ಸಾಕ್ಷಿಯಂತಿದೆ!

ಆದರೆ ಸ್ವಂತಿಕೆ ಇಲ್ಲದ ಸದಾನಂದ ಗೌಡ ಕೇಸರಿ ಪಕ್ಷ-ಕೇಶವಕೃಪಾದಲ್ಲಿ-ದಿಲ್ಲಿ ಬಿಜೆಪಿ ವಲಯದಲ್ಲಿ ಅಜಾತಶತ್ರು-ನಿರಪಾಯಕಾರಿ ಎಂಬ ಅಭಿಪ್ರಾಯವಿದೆ. ಇಂಥ ಸಮನ್ವಯ ಸಿದ್ಧಾಂತಿ ಸದಾನಂದ ಗೌಡ ಸೈತಾನ ಯಡ್ಡಿಗೆ ನಂಬಿಗಸ್ಥನಾಗಿ ಕಂಡಿದ್ದು ಸಹಜವಾಗೇ ಇದೆ. ತಾನು ಹೇಳಿದಂತೆ ಕೇಳುವ 'ಸಾಕುಪ್ರಾಣಿ' ಎಂಬ ನಂಬಿಕೆಯಲ್ಲೇ ಯಡ್ಡಿ ಈತನನ್ನು ತಂದು ರಾಜ್ಯ ಬಿಜೆಪಿ ಅಧ್ಯಕ್ಷನಾಗಿಸಿಕೊಂಡಿದ್ದರು. ಸ್ವಾಮಿ ನಿಷ್ಠ ಗೌಡ ದೊರೆ ಯಡ್ಡಿಗೆ ವಿಶ್ವಾಸ ದ್ರೋಹ ಮಾಡಲಿಲ್ಲ. ಈ ಸೇವೆ -ಆಜ್ಞಾಧಾರಕ ಗುಣ ಯಡ್ಡಿಯನ್ನು ಪ್ರಸನ್ನವಾಗಿಸಿಬಿಟ್ಟಿದೆ. ಈ ಅರಲು ಗೂಟ ಬುದ್ಧಿ ಗೌಡರಿಗೆ ಸಿಎಂ ಸ್ಥಾನಕ್ಕೆ ತಂದು ನಿಲ್ಲಿಸಿದೆ ಅಷ್ಟೇ.



ಕೊಲ್‌ಗೇಟ್ ನಗೆಯ ಗೌಡ

ಭೂಗಳ್ಳತನ, ಗಣಿಗಳ್ಳತನ, ಹೈಕಮಾಂಡ್‌ಗೇ ಚಾಲೆಂಜ್ ಹಾಕಿದ ಅಧಿಕಪ್ರಸಂಗತನ ಮತ್ತು ಜಗಮೊಂಡುತನದಿಂದ ಕಾನೂನು-ಪಾರ್ಟಿ ವರಿಷ್ಠರು ಮತ್ತು ರಾಜ್ಯದ ಜನರನ್ನು ಎದುರುಹಾಕಿಕೊಂಡಿರುವ ಯಡ್ಡಿಗೆ ತಾನು ಜೈಲಿಗೆ ಹೋಗದಂತೆ ಬಚಾವಾಗಲು ಸದಾನಂದ ಗೌಡನೆಂಬ ಪೆದ್ದಣ್ಣ ಮುಖ್ಯಮಂತ್ರಿ ಆಗುವ ಜರೂರಿತ್ತು. ಪ್ರಾಕ್ಸಿ ಆಡಳಿತ ನಡೆಸಲು ಯಡ್ಡಿಗೆ ಸ್ವಂತಿಕೆ-ಸ್ವಾಭಿಮಾನವಿಲ್ಲದ ಸದಾನಂದ ಗೌಡರಿಗಿಂತ ಬೆಟರ್ ಕ್ಯಾಂಡಿಡೇಟ್ ಮತ್ತಾರು ಸಿಕ್ಕಾರು?

ಸಮಯಸಾಧಕತನವನ್ನೇ ಸಿದ್ಧಾಂತ ಮಾಡಿಕೊಂಡಿರುವ ಡಿ.ವಿ. ಸದಾನಂದ ಗೌಡ ರಾಜಕೀಯ ಸಂದರ್ಭಗಳ ಪಿತೂರಿಯಿಂದ ಎಮ್ಮೆಲ್ಲೇ, ಎಂ.ಪಿ, ಸಿಎಂ ಸ್ಥಾನ-ಮಾನ ಕಂಡಿದ್ದಾರಷ್ಟೇ. ಜನರ ಹಿತಕಾಯುವ ರಾಜಕಾರಣವನ್ನೆಂದಿಗೂ ಮಾಡದ ಈ ಸೋಗಲಾಡಿಗೆ ಪ್ರಜಾಪ್ರಭುತ್ವದ ದೌರ್ಬಲ್ಯದಿಂದ ಲಾಟರಿ ಒಂದರ ಹಿಂದೊಂದರಂತೆ ಹೊಡೆದಿದೆ. ಈ ಲಾಟರಿಯಿಂದ ಆತನ ಹೆತ್ತ ಸುಳ್ಯ-ದಕ್ಷಿಣ ಕನ್ನಡಕ್ಕೇನಾದರೂ ಪ್ರಯೋಜನವಾದೀತಾ? ಊಹುಂ, ಡಿವಿಎಸ್ ಗೌಡರ ಇತಿಹಾಸ -ಭೂಗೋಳ ಪರಿಗಣಿಸಿದರೆ ಆತನಿಂದ ಸೂತ್ರಧಾರ ಯಡ್ಡಿ ಬಳಗಕ್ಕೆ ಬಿಟ್ಟರೆ ಇನ್ಯಾರಿಗೂ ಬಿಲ್ಲ ಉಪಕಾರ ಆಗುವ ಸಣ್ಣ ಭರವಸೆಯೂ ಕಾಣದು.

ಸದಾನಂದ ಗೌಡರ ಅಂದರಿಕಿ ಮಂಚಿವಾಳ್ಳು ಗುಣಧರ್ಮ ಬಲ್ಲ ಭಿನ್ನಮತೀಯರು ಆತನನ್ನು ಈ ಬಾರಿ ನಂಬುವ ಸ್ಥಿತಿಯಲ್ಲೂ ಇಲ್ಲ. ಯಡ್ಡಿ ಹಣಿಯಲು ಅನಂತ್-ಈಶ್ವರಿ ಬಳಗ ಆದಷ್ಟು ಬೇಗ ಗೌಡನನ್ನು ಬಲಿ ಪೀಠಕ್ಕೆ ಏರಿಸಲಿದೆ; ಅಥವಾ ಯಡ್ಡಿಯೇ ಗೌಡರನ್ನು ಹರಕೆಯ ಕುರಿ ಮಾಡಿ ತಲೆ ತಪ್ಪಿಸಿಕೊಂಡರೂ ಅಚ್ಚರಿಯೇನಿಲ್ಲ.

ಕೊಲ್‌ಗೇಟ್ ನಗೆಯ ಗೌಡ ನಿಗೂಢವಾಗಿ ನಕ್ಕಷ್ಟು, ಮತಾಂಧ ಮಾತಾಡಿದಷ್ಟು, ತಲೆಬುಡವಿಲ್ಲದೆ ಬಡಬಡಿಸಿದ್ದಷ್ಟು ಸಲೀಸಾಗಿ ಆಡಳಿತ ನಡೆಸುವುದು ಸಾಧ್ಯವೇ ಇಲ್ಲ. ಚಡ್ಡಿಗಳ ಕಂತ್ರಿ ರಾಜಕಾರಣದಿಂದ-ಕುರ್ಚಿ ಕಸರತ್ತಿನಿಂದ ಕರುನಾಡಿಗೆ ಅದೆಂಥ ಕೇಡುಗಾಲ ಬಂತಲ್ಲವಾ?



ಲೋಕಾಯುಕ್ತರ ಶರಾ

ಬೇಲೇಕೇರಿ ಬಂದರು ಭಾನ್ಗಡಿಯಲ್ಲಿ ಖಾರಪುಡಿ ಮಹೇಶನೇ ಕಿಂಗ್‌ಪಿನ್!!

ರಾಜ್ಯ ರಾಜಕಾರಣದಲ್ಲಿ ಅಲ್ಲೋಲಕಲ್ಲೋಲವನ್ನೇ ಡಿರುವ 'ಲೋಕ ಪ್ರಸಿದ್ಧ' ಲೋಕಾಯುಕ್ತ ೋಷ್ ಹೆಗ್ಡೆಯ ಗಣಿ ಅಕ್ರಮ ತನಿಖಾ ವರದಿಯ ತು ಹಿಡಿದುಹೊರಟರೆ ಮೊದಲು ಬಂದು ನಿಲ್ಲು ೇ ಉತ್ತರ ಕನ್ನಡದ ಬೇಲೇಕೇರಿ (ಅಂಕೋಲಾ) ವರಿಗೆ. ಅಲ್ಲಿಂದ ಹೊರಟರೆ ಬಳ್ಳಾರಿ, ಹೊಸಪೇಟೆ, ಡೂರು... ಕಪ್ಪು ಬಂಗಾರದ ಅದಿರು ಗಣಿಗಳು ತ್ತವೆ!


ಈ ಗಣಿಗಳಿಂದ ಬೇಲೇಕೇರಿ ಬಂದರಿಗೆ ಬರುತ್ತಿದ್ದ ನ್ಂತರ ಮೆಟ್ರಿಕ್ ಟನ್ ಕಬ್ಬಿಣದ ಅಕ್ರಮ ಅದಿರಿನ ವೆ 'ಮೈನ್ಸ್ ಮಾಫಿಯಾ' ದೊರೆ ಜನಾರ್ದನ ಯ ಬಲಗೈ ಬಂಟ ಖತರ್‌ನಾಕ್ ಖಾರಪುಡಿ ಹೇಶನ ಮಸಲತ್ತಿದೆ. ಹಡಗೇರಿ ವಿದೇಶಕ್ಕೆ ಗುತಿತ್ತು. ಖಾರಪುಡಿಯದು ಬಲುದೊಡ್ಡ ಕಳ್ಳ ಣಿಕೆ ಜಾಲ. ಇದರಲ್ಲಿ ಡಿಸಿ, ಎಸ್ಪಿಗಳಿಂದ ಹಿಡಿದು ಆರ್‌ಟಿಓಗಳು, ಲೀಸ್ ಅಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಾರಿಗಳು, ಗಣಿ ಕಂಪನಿಗಳು, ರಫ್ತು ಉದ್ಯಮಿಗಳೆಲ್ಲ ಸೇರಿದ್ದರು. ೕಕೇರಿ ಬಂದರಿನ ರಫ್ತು ವಹಿವಾಟು ಖಾರಪುಡಿ ಮನದಿಚ್ಛೆಯಂತೆ ವರು ಮತ್ತು ಕಸ್ಟಮ್ಸ್ ಅಧಿಕಾರಿಗಳು ನಡೆಸುತ್ತಿದ್ದರು. ಬೇಲೇಕೇರಿ ದರಿನ ಈ ಕೋಟ್ಯಂತರ ರೂಪಾಯಿ ಕಳ್ಳ ವ್ಯವಹಾರದ ಡಾನ್ ರಪುಡಿ ಎಂಬುದು ಬಹಿರಂಗ ರಹಸ್ಯವಾಗಿತ್ತು.



ೕಕಾಯುಕ್ತ ವರದಿ ಬರುತ್ತಿದ್ದಂತೆಯೇ, ಖಾರಪುಡಿ ಹೇಶನೇ ಬೇಲೇಕೇರಿ ಬಂದರಿನ ದೋ ನಂಬರ್ ಧೆಯ ಕಿಂಗ್‌ಪಿನ್ ಎಂಬುದು ಅಧಿಕೃತವಾಗಿ ರಂಗವಾದಂತಾಗಿ ಹೋಗಿದೆ!



ಬೇಲೇಕಿರಿ ಬಂದರಿಗೆ ಅದಿರನ್ನು ಕದ್ದು ಸಾಗಿಸುವ ಮತ್ತಿಗೆ ಖಾರಪುಡಿ ಗ್ಯಾಂಗ್ 'ರಿಸ್ಕ್ ಟ್ರಾನ್ಸ್‌ಪೋರ್ಟ್' ಮ ನಾಮಕರಣ ಮಾಡಿತ್ತು. ನಕಲಿ ಪರ್ಮಿಟ್‌ಗಳ ರಾರು ಲಾರಿಗಳು ಬೇಲೇಕೇರಿಗೆ ಅದಿರು ಪ್ರತಿದಿನ ತ್ತಿದ್ದವು. ಒಂದು ಲಾರಿಯಲ್ಲಿ 20 ಮೆಟ್ರಿಕ್ ಟನ್ ರು ತುಂಬಿಸಲಾಗುತ್ತಿತ್ತು. ಈ ಕಳ್ಳ ಸಾಗಾಣಿಕೆಗೆ ರಪುಡಿ ಪಡೆ ಹೊಸಪೇಟೆಯ ಗಣಿ ಮತ್ತು ಭೂ ಜ್ಞಾನ ಇಲಾಖೆಯಿಂದ ಬರೋಬ್ಬರಿ 15,700 ಲೋಗ್ರಾಮ್ ಕಳ್ಳತನ ಮಾಡಿತ್ತು ಅಥವಾ ದುರ್ಬಳಕೆ ಮಾಡಿಕೊಂಡಿತ್ತು. ಹೋಲೋಗ್ರಾಮ್ ಬಳಸಿ ಪರ್ಮಿಟ್ ತಯಾರಿಸಿ ಬೇಲೇಕೇರಿಗೆ ಕಳ್ಳ ರು ತರಲಾಗುತ್ತಿತ್ತು. ಈ ನಕಲಿ ಪರ್ಮಿಟ್‌ನಿಂದ ಬಂದ ಅಕ್ರಮ ರು 40,000 ಟ್ರಿಕ್ ಟನ್. ರ ಬೆಲೆ 80,000 . ಇದು ಕ್ಕದ ಕಸಕ್ಕಾದ ಳ ಹಾನಿ ದು ೕಕಾಯುಕ್ತ ದಿಯಲ್ಲಿ ಸಲಾಗಿದೆ!!



ಯಡ್ಡಿ-ರೆಡ್ಡಿ ಕಳ್ಳರ ಗ್ಯಾಂಗ್....

ಲೋಕಾಯುಕ್ತ ಪೊಲೀಸರು ಬೇಲೇಕೇರಿ ಹಾರ್ಬರ್‌ನಿಂದ ಮ ಅದಿರು ರಫ್ತಾಗುತ್ತಿದೆಯೆಂಬ ದೂರು ಬಂದಾಗೊಮ್ಮೆ ು ಹಾಕಿದ್ದರು. ಆಗ ಸಿಕ್ಕಾಪಟ್ಟೆ ನಕಲಿ ಪರ್ಮಿಟ್‌ಗಳು ದ್ದವು. ಇವು ಆಂಧ್ರಪ್ರದೇಶದ ಗಣಿ ಮತ್ತು ಭೂ ವಿಜ್ಞಾನ ಖೆ ಆಂಧ್ರದ ಬಂದರುಗಳಿಗೆ ಹೊಸಪೇಟೆ ಗಣಿಗಳಿಂದ ದಿರು ಸಾಗಿಸಲು ಕೊಟ್ಟ ಪರವಾನಗಿ ಪತ್ರಗಳಾಗಿದ್ದವು. ಈ ನಕಲಿ ಪರ್ಮಿಟ್ ತೋರಿಸಿಯೇ ಖಾರಪುಡಿ ಮಹೇಶ್ ಮತ್ತಿತರ ಮಂದಿ (ಅಥವಾ ಕಂಪನಿ) 2009 ರ ನವೆಂಬರ್‌ನಿಂದ 2010 ರ ಏಪ್ರಿಲ್‌ತನಕ ಅವ್ಯಾಹತವಾಗಿ ಅದಿರನ್ನು ಬೇಲೇಕೇರಿಗೆ ಸಾಗಿಸಿದ್ದರು. ಈ ಅವಧಿಯಲ್ಲಿ ಖಾರಪುಡಿ ಅಂಡ್ ಅದರ್ಸ್ ಸಾಗಿಸಿದ ಅದಿರಿನ ಒಟ್ಟು ಬೆಲೆ 62,92,36,810 ರೂಪಾಯಿಗಳು!! ಈ 62 ಕೋಟಿ 92 ಲಕ್ಷದ ಅದಿರು ತರಹೇವಾರಿ ನಕಲಿ ಪರ್ಮಿಟ್‌ಗಳ ಮೇಲೆ ಕಾರವಾರ-ಬೇಲೇಕೇರಿ ಬಂದರಿಗೆ ಬಂದು ಹಡಗೇರಿ ಚೀನಾಕ್ಕೆ ಹೋಗಿದೆ!! ಲೋಕಾಯುಕ್ತ ವರದಿಯಲ್ಲಿ ಖಾರಪುಡಿ ಪುರಾಣ ರಸವತ್ತಾಗಿ ವಿವರಿಸಲಾಗಿದೆ....

ಅಷ್ಟೇ ಅಲ್ಲ, ಈ ಖದೀಮ ಖಾರಪುಡಿ ಕೋಟ್ಯಂತರ ರೂಪಾಯಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಚೋರರಿಂದ ಹಣ ಸಂಗ್ರಹಿಸಿ ಕಳ್ಳಸಾಗಾಣಿಕೆಗೆ ನೆರವಾಗುತ್ತಿದ್ದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಹಂಚುತ್ತಿದ್ದ 'ಕತೆ'ಯೂ ಲೋಕಾಯುಕ್ತ ವರದಿಯಲ್ಲಿದೆ. ಈ ಲಂಚದ ಹಣಕ್ಕೆ 'ರಿಸ್ಕ್‌ಮನಿ' ಎಂದು ಗಣಿಗಾರಿಕೆ ಭಾಷೆಯಲ್ಲಿ ಕರೆಯಲಾಗುತ್ತಿದೆ! ರಾಜ್ಯದ 617 ಅಧಿಕಾರಿಗಳಿಗೆ 40,92,88,860 ರೂಪಾಯಿ ಬಟವಾಡೆ ಮಾಡಿದ್ದಾನೆ. ಗಣಿ ಅಮೇಧ್ಯವನ್ನು ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಬಳ್ಳಾರಿ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಬೆಂಗಳೂರು, ಗದಗ್, ಹಾವೇರಿ, ಕೊಪ್ಪಳ, ಬಾಗಲಕೋಟೆ, ರಾಯಚೂರು, ಗುಲ್ಬರ್ಗಾ, ಬಿಜಾಪುರದ ಬೇರೆಬೇರೆ ಕೇಡರಿನ ಬ್ಯುರೋಕ್ರಾಟ್ ಅಧಿಕಾರಿಗಳು ಬಕಬಕನೆ ತಿಂದಿದ್ದಾರೆ! ಇದೆಲ್ಲ ಆದಾಯ ತೆರಿಗೆ ತನಿಖಾ ವಿಭಾಗದ ನಿರ್ದೇಶಕರಿಂದ ಪಡೆದ ದಾಖಲೆಗಳ ಮೂಲಕ ಲೋಕಾಯುಕ್ತ ತಂಡ ಕಂಡುಹಿಡಿದಿದೆ.

ದಕ್ಷ-ಪ್ರಾಮಾಣಿಕ ಫಾರೆಸ್ಟ್ ಆಫೀಸರ್ ಯು.ವಿ. ಸಿಂಗ್ ತಮ್ಮ ಜೀವಕ್ಕಿರುವ ರಿಸ್ಕ್ ಲೆಕ್ಕಿಸದೆ ಮಂತ್ರಿ ರೆಡ್ಡಿಯ ಸಹಚರ ಖಾರಪುಡಿ ಮಹೇಶನ ರಿಸ್ಕ್ ಟ್ರಾನ್ಸ್‌ಪೋರ್ಟ್-ರಿಸ್ಕ್ ಮನಿ ಕಲೆಕ್ಷನ್ ಕತೆಯನ್ನು ತಮ್ಮ ವರದಿಯಲ್ಲಿ ಎಳೆಎಳೆಯಾಗಿ ವಿವರಿಸಿದ್ದಾರೆ. ರಿಸ್ಕ್ ಮನಿಯನ್ನು ಪ್ರತಿ ಮೆಟ್ರಿಕ್ ಟನ್‌ಗಳ ರೂಪಾಯಿ 75 ರಿಂದ 700 ರೂ.ವರೆಗೆ ಅವ್ಯವಹಾರಿ ಅಧಿಕಾರಿಗಳಿಗೆ ಹಂಚಲಾಗುತ್ತಿದೆಂದು ಲೋಕಾಯುಕ್ತ ವರದಿಯಲ್ಲಿ ಹೇಳಲಾಗಿದೆ! 2010 ರ ಫೆಬ್ರವರಿ 20 ರಂದು ಲೋಕಾಯುಕ್ತ ಬೇಲೇಕೇರಿ ಬಂದರಿನಲ್ಲಿ ದಾಳಿ ಮಾಡಿದಾಗ ಅದಿರು ಸಾಗಾಟಕ್ಕೆ ಬಳಸಿದ್ದ ಹಲವು ನಕಲಿ ಪರ್ಮಿಟ್ ಸಿಕ್ಕಿದ್ದವು. ಇವು ಬಂದರಿನಲ್ಲಿ ಆಗುತ್ತಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಅದಿರು ಕಳ್ಳ ಸಾಗಾಣಿಕೆಯ ಕ್ಲೂ ಕೊಟ್ಟಿತ್ತು. ಕಾರವಾರದ ಶಾಸಕನಾಗುವ ಕನಸು ಕಾಣುತ್ತಿರುವ ಕಾಂಗ್ರೆಸ್ ಮುಖಂಡ ಸತೀಶ್ ಸೈಲ್‌ನ ಮಲ್ಲಿಕಾರ್ಜುನಾ ಶಿಪ್ಪಿಂಗ್‌ನ ರಫ್ತು ಅವ್ಯವಹಾರವನ್ನು ಲೋಕಾಯುಕ್ತ ವರದಿ ಅನಾವರಣ ಮಾಡಿದೆ. ಹಾಗೆಯೇ ಯಲ್ಲಾಪುರದ ಶಾಸಕನಾಗುವ ಆಸೆಯಲ್ಲಿರುವ ಮತ್ತೊಬ್ಬ ಕಾಂಗ್ರೆಸ್‌ನ ಖದೀಮ ಶಿವರಾಮ ಹೆಬ್ಬಾರನ 'ಡ್ರೀಮ್ ಲಾಜಿಸ್ಟಿಕ್'ನ ಅಕ್ರಮ ಅದಿರು ಸಾಗಾಟ ಸ್ಟೋರಿಯೂ ಲೋಕಾಯುಕ್ತ ವರದಿಯಲ್ಲಿದೆ.

ಬಳ್ಳಾರಿಯಿಂದ ಬೇಲೇಕೇರಿ ಬಂದರುವರೆಗಿನ ಕಪ್ಪು ಬಂಗಾರದ ಅದಿರಿನ ಕಳ್ಳಸಾಗಣೆ, ಕಳ್ಳ ರಫ್ತುಗಳ ಅಷ್ಟೂ ಆಯಾಮ ನಿಯಂತ್ರಿಸುತ್ತಿದ್ದುದೇ ಗಣಿ ಗೂಂಡಾ ದೊರೆಗಳಾದ ರೆಡ್ಡಿ ಬ್ರದರ್ಸ್ ಬೆಟಾಲಿಯನ್‌ನ ಕ್ಯಾಪ್ಟನ್ ಖಾರಪುಡಿ ಮಹೇಶನೆಂಬುದು ಲೋಕಾಯುಕ್ತ ವರದಿಯಿಂದ ನಿಸ್ಸಂಶಯವಾಗಿ ಸಾಬೀತಾಗಿ ಹೋಗಿದೆ. ಹಾಗೊಮ್ಮೆ ಈ ವರದಿ ಅನುಷ್ಠಾನವಾದರೆ ರೌಡಿ ಖಾರಪುಡಿ ಮಹೇಶನಷ್ಟೇ ಅಲ್ಲ, ಆತನ 'ಗುರು'ತ್ರಯರಾದ ರೆಡ್ಡಿ ಸೋದರರೂ ಜೈಲಲ್ಲಿ ಮುದ್ದೆ ಮುರಿಯುವಂತಾಗುತ್ತದೆ.



ಸಂತೋಷ್ ಹೆಗ್ಡೆ ಮತ್ತು ಯು.ವಿ.ಸಿಂಗ್

ಆ ದಿನ ಆದಷ್ಟು ಬೇಗ ಬರಲೆಂಬುದೇ ಕರ್ನಾಟಕದ ನೈಸರ್ಗಿಕ ಸಂಪತ್ತಿನ ಕಾಳಜಿ ಇರುವ ಮಂದಿಯ ಹಾರೈಕೆ!!

• ನಹುಷ

ಕಾರವಾರದ ಲಾಯರ್ ದೇಸಾಯಿ ಮತ್ತು ಲೋಕಾಯುಕ್ತ ವರದಿ!

ಕರ್ನಾಟಕ ಕಂಡ ಭಂಡ ಮುಖ್ಯಮಂತ್ರಿ ಯಡ್ಡಿಯ ದುಂಡಪಸ್ಟೇ ಚಂಡಾಡಿದ ಲೋಕಾಯುಕ್ತ ವರದಿಯ ಮೂಲ ಯಾವುದು? ಬಳ್ಳಾರಿಯಾ? ಬೇಲೇಕೇರಿ ಬಂದರಾ? ಬೈತಕೋಲ್ ಬಂದರಾ? ಗಣಿ ಗೆಬರುವುದು ಬಳ್ಳಾರಿ ಜಿಲ್ಲೆಯಲ್ಲಾದರೂ ಅದು ವಿದೇಶಕ್ಕೆ ರಫ್ತಾಗುವುದು ಉತ್ತರ ಕನ್ನಡದ ಬೇಲೇಕೇರಿ (ಅಂಕೋಲಾ) ಮತ್ತು ಬೈತಕೋಲ್ (ಕಾರವಾರ) ಬಂದರುಗಳಿಂದಾಗಿತ್ತು, ಇಲ್ಲಾಗುತ್ತಿದ್ದದ್ದು ಕಪ್ಪು ಬಂಗಾರದ ಅದಿರಿನ ಪಕ್ಕಾ ಕಳ್ಳ ಸಾಗಾಣಿಕೆ. ಹೀಗಾಗಿ ಉತ್ತರ ಕನ್ನಡದ ಕಾರವಾರ-ಅಂಕೋಲಾ-ಯಲ್ಲಾಪುರ ಏರಿಯಾದಲ್ಲಿ ಅಕ್ರಮ ಅದಿರು ವ್ಯವಹಾರ ಅಡ್ಡ-ನೇರ ಪರಿಣಾಮಗಳೆಲ್ಲ ಆಗಿ ಜನ ಕಂಗೆಟ್ಟು ಹೋಗಿದ್ದರು.

ಕಾರವಾರ-ಅಂಕೋಲಾ ಪ್ರದೇಶವಂತೂ ಸಾಕ್ಷಾತ್ ನರಕದಂತಾಗಿತ್ತು, ಅದಿರು ಲಾರಿಗಳ ಹಾವಳಿಯಿಂದ ಆದ ನರಬಲಿಗಂತೂ ಲೆಕ್ಕವೇ ಇಲ್ಲ, ಗಣಿ ಧಣಿಗಳ ದುಡ್ಡಿನ ದಾಹಕ್ಕೆ ಅದೆಷ್ಟೋ ಜನರ ಹಾಫ್ ಮರ್ಡರ್ ಆಗಿದೆ. ಬೇಲೇಕೇರಿ ಬೈತ್ ಕೋಲ್ ಏರಿಯಾದಲ್ಲಿ ಸಂಗ್ರಹಿಸಿದ್ದ ಅದಿರು ರಾಶಿಗಳಿಂದ ಪರಿಸರ ರೋಗಗ್ರಸ್ತವಾಗಿತ್ತು, ಬಾವಿಗಳು ಮಲಿನವಾಗಿತ್ತು, ಈ ಭಾಗದ ಜನರಿಗೆ ಹೃದಯ ಸಂಬಂಧಿ ಬೇನೆ-ಅಸ್ತಮಾ ಶುರುವಾಗಿತ್ತು, ಅದಿರು ಧೂಳಿಂದ ಬೇಲೇಕೇರಿ-ಬೈತಕೋಲ್‌ನ ಮನೆಗಳಲ್ಲಿ ಜನ ಜೀವಿಸುವ ಹಾಗೇಯಿರಲಿಲ್ಲ, ಜನರಿಗೆ ಕಾರವಾರ-ಅಂಕೋಲಾದ ಅರ್ಧ ಗಂಟೆ ಪ್ರಯಾಣಕ್ಕೆ ಎರಡು ತಾಸು ಹಿಡಿಯುತ್ತಿತ್ತು, ಜನರ ಸಂಕಟಕ್ಕೆ ಯಾವ ಜನಪ್ರತಿನಿಧಿ-ಅಧಿಕಾರಿಯೂ ಸ್ಪಂದಿಸುತ್ತಿರಲಿಲ್ಲ, ಬದಲಿಗೆ ಗಣಿ ಕಳ್ಳರ ಲಂಚ ತಿಂದಿದ್ದ ಅಧಿಕಾರಿಗಳು ಜನಸಾಮಾನ್ಯರ ಮೇಲೇ ದಾದಾಗಿರಿ ಮಾಡುತ್ತಿದ್ದರು.



ಕಿಶೋರ ದೇಸಾಯಿ


ಆಳುವವರು-ಅಧಿಕಾರಿಗಳು ಗಣಿ ಗೂಂಡಾಗಳ ಅಡಿಯಾಳಂತಾಗಿ ಹೋದಾಗ ಕಿಶೋರ ದೇಸಾಯಿ ಎಂಬೊಬ್ಬ ವಕೀಲ ಕಾರವಾರ-ಅಂಕೋಲೆಯ ಅಸಹಾಯಕರ ಪರ ಹೋರಾಟಕ್ಕೆ ನಿಂತಿದ್ದರು. ಬೀದಿಗಿಳಿದು ದೇಸಾಯಿ ಬೊಬ್ಬೆ ಹೊಡೆದರು; ಕಾನೂನು ರೀತಿಯ ಹಲವು ಹೋರಾಟ ಮಾಡಿದರು. ಇದ್ಯಾವುದಕ್ಕೂ ಗಣಿ ಮಾಫಿಯಾ ದೊರೆ ಜನಾರ್ದನ ರೆಡ್ಡಿಯ ಬಂಟ ಖಾರಪುಡಿ ಮಹೇಶನ 'ರಿಸ್ಕ್‌ಮನಿ' ಮುಕ್ಕುತ್ತಿದ್ದ ಅಧಿಕಾರಿಗಳು ಕ್ಯಾರೇ ಎನ್ನಲಿಲ್ಲ. ಆಗ ಕಿಶೋರ ದೇಸಾಯಿ ಅನಿವಾರ್ಯವಾಗಿ ಲೋಕಾಯುಕ್ತ ಸಂತೋಷ್ ಹೆಗ್ಡೆಗೇ ಖುದ್ದು ದೂರು ನೀಡಿದರು. ಗಣಿ ಮಾಫಿಯಾದ ಕಾನೂನುಬಾಹಿರ-ಸಮಾಜಬಾಹಿರ ಪಾತಕದಿಂದ ಉತ್ತರ ಕನ್ನಡಿಗರ ಕಾಪಾಡುವಂತೆ ಕೋರಿದರು.

ಕಾರವಾರದ ಜನಪರ ಹೋರಾಟಗಾರ ಕಿಶೋರ್ ದೇಸಾಯಿ ಲೋಕಾಯುಕ್ತರಿಗೆ ಕೊಟ್ಟಿದ್ದ ಈ ದೂರೇ ಗಣಿ ಧಣಿಗಳ ಕರ್ಮಕಾಂಡ ಬಯಲಿಗೆಳೆಯಲು ನ್ಯಾ. ಸಂತೋಷ್ ಹೆಗ್ಡೆ ತಂಡಕ್ಕೆ ಮೂಲ ಕಾರಣ-ಪ್ರೇರಣೆ ಆಗಿತ್ತು, ಇದು ಬಹುತೇಕರಿಗೆ ಗೊತ್ತಿರದ ವಾಸ್ತವ! ಗಣಿ ಹಗರಣದ ವರದಿ ಬಗ್ಗೆ ಮಾಧ್ಯಮದವರ ಮುಂದೆ ಲೋಕಾಯುಕ್ತ ಸಂತೋಷ್ ಹೆಗ್ಡೆ ಮಾತಾಡುವಾಗ "ಕಾರವಾರದ ನ್ಯಾಯವಾದಿ ದೇಸಾಯಿ ಎಂಬುವರು ನನಗೆ ಈ ಅಕ್ರಮ ಅದಿರು ವ್ಯವಹಾರದ ಬಗ್ಗೆ ಒಂದು ದೂರು ಕೊಟ್ಟಿದ್ದರು..... ಆ ಕಂಪ್ಲೇಂಟು ವಿಚಾರಣೆಯನ್ನು ನಾವೆತ್ತಿಕೊಂಡಾಗ ಇಷ್ಟೆಲ್ಲ ಹಗರಣ ಹೊರಬಂತು... ನಿಜವಾಗಿ ನನಗೆ ಆ ದೇಸಾಯಿಯ ಭದ್ರತೆ ಬಗ್ಗೆ ಭಯವಾಗುತ್ತಿದೆ....." ಎಂದು ಉದ್ಗರಿಸಿದ್ದರು. ನಕಲಿ ಪರ್ಮಿಟ್‌ನಲ್ಲಿ ಕೋಟ್ಯಂತರ ರೂಪಾಯಿ ಅದಿರು ತಂದು ಕಾರವಾರ-ಅಂಕೋಲಾದ ಬಂದರುಗಳ ಮೂಲಕ ಕಳ್ಳ ಸಾಗಾಣಿಕೆ ಆಗುತ್ತಿರುವುದು ಲೋಕಾಯುಕ್ತರ ಗಮನಕ್ಕೆ ತಂದಿದ್ದೇ ಡೇರ್ ಡೆವಿಲ್ ದೇಸಾಯಿ!!

ಕಾರವಾರದ ಸಮಾಜಮುಖಿಯಾದ ಯಾವುದೇ ಹೋರಾಟ ಪ್ರತಿಭಟನೆಯಿರಲಿ; ಅಲ್ಲೊಬ್ಬ ನೊಗ್ಗಾ ಮೀನಿನಂಥ ಸಪೂರದೇಹದ ವಿಕ್ಷಿಪ್ತ ವ್ಯಕ್ತಿಯೊಬ್ಬ ಇದ್ದೇ ಇರ್ತಾರೆ. ಕೈಯಲ್ಲಿ ಅಥವಾ ಮೈಯಲ್ಲಿ ಒಂದು ಕರಿಕೋಟು ಹಾಕಿಕೊಂಡು ಕಾನೂನುಬದ್ಧವಾಗಿ-ತರ್ಕಬದ್ಧವಾಗಿ ಜನ ಪರ ವಾದ ಮಂಡಿಸುವ ಈ ಮನುಷ್ಯನೇ ವಕೀಲ ಕೆ.ಆರ್. ದೇಸಾಯಿ ಯಾನೆ ಕಿಶೋರ ದೇಸಾಯಿ! ತನ್ನ ಬದುಕಿನ ರಿಸ್ಕನ್ನೂ ಲೆಕ್ಕಿಸದೆ ಸದಾ ಜನಪ್ರಜಾಪೀಡಕ ಪಾಲಿಟಿಸಿಯನ್, ಅಕ್ರಮ ದಂಧೆಕೋರರು, ಭ್ರಷ್ಟ ಅಧಿಕಾರಿಗಳ ಮತ್ತು ಜನ ವಿರೋಧಿ ಸರ್ಕಾರಿ ನೀತಿ-ಯೋಜನೆಗಳ ವಿರುದ್ಧ ಧ್ವನಿ ಎತ್ತುವ ಕಿಶೋರ್ ದೇಸಾಯಿ ರೌಡಿ ಎಮ್ಮೆಲ್ಲೆ ಎನಿಸಿದ್ದ ದಿವಂಗತ ಶಾಸಕ ವಸಂತ ಅಸ್ನೋಟಿಕರ್, ಆತನ ಸುಪುತ್ರ ಉಂಡಾಡಿ ಗುಂಡಣ್ಣ ಆನಂದ್ ಅಸ್ನೋಟಿಕರ್‌ಗೂ ಸೊಪ್ಪು ಹಾಕಿದವರಲ್ಲ!

ಕಾರವಾರದ ಬೈತಕೋಲ್‌ನಲ್ಲಿ ಜನವಸತಿ ಏರಿಯಾದಲ್ಲಿ ಅದಿರು ಡಂಪ್ ಮಾಡಿ ತೊಂದರೆ ಕೊಟ್ಟಾಗ, ಅದಿರು ಲಾರಿಗಳು ಹಾವಳಿ ಎಬ್ಬಿಸಿದಾಗ, ನಕಲಿ ಪರ್ಮಿಟ್ ಮೇಲೆ ಅದಿರು ಕಾರವಾರ-ಬೇಲೇಕೇರಿಯತ್ತ ಸಾಗಿಬಂದಾಗ, ಅದಿರು ಮಾಫಿಯಾದ ಜೊತೆ ಅಧಿಕಾರಿಗಳು ಮಿಂಗಲ್ ಆದಾಗ, ತಣ್ಣೀರು ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸರ್ಕಾರ-ಶಾಸಕ ಆನಂದ್ ಅಸ್ನೋಟಿಕರ್ ಹವಣಿಸಿದಾಗ ಅದೇ ಆನಂದ್ ಅಸ್ನೋಟಿಕರ್ ಕಾಳಿ ನದಿಯ ಉಸುಕನ್ನು ಮಾಲ್ಡೀವ್ಸ್‌ಗೆ ಅಕ್ರಮವಾಗಿ ಕಳಿಸಲು ಹಡಗು ತುಂಬಿದಾಗ, ಸೀಬರ್ಡ್ ಸಂತ್ರಸ್ತರಿಗೆ ಸರಿಯಾದ ಪರಿಹಾರ ಕೊಡದೆ ಸತಾಯಿಸಿದಾಗ, ಕೋಸ್ಟ್‌ಗಾರ್ಡ್‌ಗೆ ಬಡ ಮೀನುಗಾರರ ಜೀವನಾಧಾರ ಬೀಚ್ ವಶಪಡಿಸಿಕೊಳ್ಳಲು ಕುತಂತ್ರ ನಡೆಸಿದಾಗೆಲ್ಲಾ ಕೆಚ್ಚೆದೆಯಿಂದ ಜನರನ್ನು ಸಂಘಟಿಸಿ ಹೋರಾಡಿದ್ದು ಇದೇ ಕಿಶೋರ್ ದೇಸಾಯಿ. ಹಠಮಾರಿತನ, ಸಿಡುಕುತನ, ಛಲಬಿಡದ ಹೋರಾಟಗಾರಿಕೆಯಿಂದ ಕಾರವಾರ ರಕ್ಷಕನೆಂದೇ ಹೆಸರುವಾಸಿಯಾಗಿರುವ ಕಿಶೋರ್ ದೇಸಾಯಿ ರಾಜ್ಯ ಸರ್ಕಾರವೇ ಉರುಳಿ ಬೀಳುವಂಥ ಸ್ಫೋಟಕ ಗಣಿ ಅವ್ಯವಹಾರದ ತನಿಖಾ ವರದಿಯನ್ನು ಲೋಕಾಯುಕ್ತರು ಕೊಡುವಂತಾದ ಪ್ರಕ್ರಿಯೆ ಹಿಂದಿನ ಕಾರಣೀಕರ್ತನೆಂಬುದು ತಣ್ಣನೆಯ ಇತಿಹಾಸ! •

ಯಲಬುರ್ಗಾ ಬಡ ರೈತರ ಎದೆಮೇಲೆ ಹೈಟೆಕ್ ಆಸ್ಪತ್ರೆ


ರಾಯರೆಡ್ಡಿ

ಮಾತೆತ್ತಿದರೆ ಸಾಕು ರಾಮ ನಾಮ ಜಪಿಸುವ ಈ ಬಿಜೆಪಿ ಸರ್ಕಾರ ರೈತರ ನೆಮ್ಮದಿ ಕಿತ್ತುಕೊಂಡು ಖುಷಿ ಪಡುವ ವಿಕೃತ ಸ್ಥಿತಿ ತಲುಪಿದೆ. ಗಣಿ ಧೂಳಿನಲ್ಲಿ ಬಿದ್ದು ಹೊರಳಾಡುತ್ತಿರುವ ಈ ಸರ್ಕಾರ ಗದಗ, ಬಿಜಾಪೂರ, ಬಾಗಲಕೋಟೆ, ಗುಲ್ಬರ್ಗಾ ಮುಂತಾದೆಡೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಕೈಹಾಕಿ ಜನರ ವಿಶ್ವಾಸ ಕಳೆದುಕೊಂಡಿದೆ.

ಕೊಪ್ಪಳ ಜಿಲ್ಲೆ ಯಲ್ಬುರ್ಗಾ ತಾಲೂಕಿನಲ್ಲೂ ಇಂಥದ್ದೇ ಘಟನೆ ನಡೆದಿದೆ. ಯಡಿಯೂರಪ್ಪ ತಮ್ಮದು ನಾಲಿಗೆಯಲ್ಲ ಎಂಬುದನ್ನ ಸಾಬೀತುಪಡಿಸಿದ್ದಾರೆ. ಇನ್ನು ರೈತರ ಮೇಲೆ ಬಲಪ್ರಯೋಗ ಮಾಡುವುದಿಲ್ಲ ಅಂತ ಶಪಥ ಮಾಡಿದ್ದ ಯಡ್ಡಿ ಪೊಲೀಸರ ಮುಖಾಂತರ ಮುಗ್ಧ ರೈತರ ಮೇಲೆ ಲಾಠಿ ಪ್ರಯೋಗ ಮಾಡಿಸಿದ್ದಾರೆ.


2005-06ನೇ ಸಾಲಿನಲ್ಲಿ ಮಂಜೂರಾದ 100 ಹಾಸಿಗೆಯ ಹೈಟೆಕ್ ಆಸ್ಪತ್ರೆಯನ್ನು ಮೊದಲಿಂದಲೂ ರೈತರು ವಿರೋಧಿಸುತ್ತಲೇ ಬಂದಿದ್ದಾರೆ. ಈ ಆಸ್ಪತ್ರೆಯನ್ನು ಹಿಂದುಳಿದ ತಾಲೂಕಿಗೆ ಮಂಜೂರು ಮಾಡಿದ ಕೀರ್ತಿ ಆಗಿನ ಶಾಸಕ ಬಸವರಾಜ ರಾಯರೆಡ್ಡಿಯವರಿಗೆ ಸಲ್ಲುತ್ತದೆ. ಆದರೆ ಅದಕ್ಕೆ ಎಂತಹ ಭೂಮಿ ಬೇಕು ಎಂಬ ಕನಿಷ್ಠ ಮಟ್ಟದ ತಿಳಿವಳಿಕೆ ಇಲ್ಲದವರಂತೆ ವರ್ತಿಸಿದ ರಾಯರೆಡ್ಡಿ ಕೃಷಿಭೂಮಿಯಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಆಯ್ಕೆ ಮಾಡಿ ಕಳುಹಿಸಿದ. ರಾಯರೆಡ್ಡಿ ಒಬ್ಬ ಉತ್ತಮ ಕೆಲಸಗಾರನೇನೊ ನಿಜ, ಆದರೆ ಆತ ಎಂದೂ ಕೂಡಾ ಸಾಮಾನ್ಯಜನರೊಂದಿಗೆ ಬೆರೆತವನಲ್ಲ. ಹೀಗಾಗಿ ಜನಸಾಮಾನ್ಯರ ಬದುಕು, ಬವಣೆಯ ಅರಿವು ಇವನಿಗಿಲ್ಲ, ಆದ್ದರಿಂದಲೆ ಬಡ ರೈತರ ಬದುಕು ತಲ್ಲಣಿಸಿದೆ.


ಈಶಣ್ಣ


ರಮಣರೆಡ್ಡಿ

ಬಸವರಾಜ ರಾಯರೆಡ್ಡಿ ಆಗ ಡಿ.ಸಿ. ಆಗಿದ್ದ ನವೀನ ರಾವ್ ಸಿಂಗ್‌ನಿಂದ ರೈತರು ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ್ದಾರೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದ. ಯಾವಾಗ ಇದರ ವಿರುದ್ಧ ಜನ ತಿರುಗಿ ಬಿದ್ದರೊ ಆಗ "ಇದರಲ್ಲಿ ನನ್ನದೇನೂ ತಪ್ಪಿಲ್ಲ, ಎಲ್ಲಾ ಡಿ.ಸಿ.ಯವರೆ ಮಾಡಿದ್ದು" ಎಂದು ಹೇಳಿ ತಾನು ಬಚಾವಾದ. ಇದರಿಂದಾಗಿ ಡಿ.ಸಿ.ನವೀನ್‌ರಾವ್ ಬಹಳ ದಿನಗಳವರೆಗೆ ಕೊಪ್ಪಳ ಜಿಲ್ಲಾಧಿಕಾರಿಯಾಗಿ ಮುಂದುವರೆಯಲು ಆಗಲಿಲ್ಲ.

ನಂತರ 2006-07ರಲ್ಲಿ ರೈತರಿಗೆ ಫೋರ್‌ವನ್ ನೋಟಿಸ್ ಜಾರಿ ಮಾಡಲಾಯಿತು. ಈ ಕ್ರಮವನ್ನು ವಿರೋಧಿಸಿದ ರೈತರು ಪ್ರತಿಭಟನೆಗೆ ಸಜ್ಜಾದರು. 2007ರಲ್ಲಿ ನವೀನ್‌ರಾವ್ ಸಿಂಗ್ ಜಾಗಕ್ಕೆ ಬಂದ ಹೊಸ ಡಿ.ಸಿ ರಾಮಣ್ಣ ನಾಯಕ ಹಾಗೂ ಎಮ್‌ಎಲ್‌ಎ ಈಶಣ್ಣ ಗುಳಗಣ್ಣವರ ಸೇರಿಕೊಂಡು ರೈತರ ಸಭೆ ಮಾಡಿ ಒಂದು ಪ್ರಣಾಳಿಕೆ ಸಿದ್ಧಪಡಿಸಿದರು. ಅದರಲ್ಲಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಾರದು, ಇದು ಫಲವತ್ತಾದ ಭೂಮಿ ಎಂದೆಲ್ಲಾ ಉಲ್ಲೇಖಿಸಲಾಗಿತ್ತು.





ಇದಕ್ಕೂ ಸರ್ಕಾರದಿಂದ ಉತ್ತರ ಬರಲಿಲ್ಲ, ಈ ಮುಗ್ಧ ರೈತರು ಆಗ ಕಂದಾಯ ಸಚಿವನಾಗಿದ್ದ ಕರುಣಾಕರ ರೆಡ್ಡಿಯ ಮೊರೆ ಹೋದರು. ಆದರಾತ ಕಾಟಾಚಾರಕ್ಕೆ ಇಲಾಖೆಯ ಕಾರ್ಯದರ್ಶಿಗಳಿಗೆ ಒಂದು ಪತ್ರ ಬರೆದು ಸುಮ್ಮನಾದ. ಮಣ್ಣು ಮಾರಿಯೇ ಹೊಟ್ಟೆ ತುಂಬಿಸಿಕೊಳ್ಳುವ ಕರುಣಾಕರ ರೆಡ್ಡಿಗೆ ರೈತರ ಕೂಗು ಹೇಗೆ ಕೇಳಿಸೀತು?

ಹೀಗೆ ಸುಮಾರು 2-3 ಸಚಿವರ ಮೊರೆ ಹೋದ ರೈತರು ತಮ್ಮ ಪರ ಸರ್ಕಾರದಿಂದ ಪ್ರತಿಕ್ರಿಯೆ ಬರಬಹುದೆಂದು ಕಾದು ಕುಳಿತರು. ರೈತರ ಧ್ವನಿ ಆಲಿಸದ ಸರ್ಕಾರದ ಕ್ರಮಕ್ಕೆ ಬೇಸತ್ತ ರೈತರಾದ ರಾಮನಗೌಡ ಪಾಟೀಲ ಹಾಗೂ ಸಿದ್ದರಾಮನಗೌಡ ಪಾಟೀಲ ಆತ್ಮಹತ್ಯೆಗೆ ಯತ್ನಿಸಿದರು. ಇದರಿಂದ ಜಿಲ್ಲಾಡಳಿ[ತ] ಜಾಗೃತಗೊಂಡಿತು. ಆಗ ಎ.ಸಿಯಾಗಿದ್ದ ಗಂಗೂಬಾಯಿ ಮಾನ್ಕರ್ 'ಈ ಸ್ಥಳ ಕೃಷಿಗೆ ಯೋಗ್ಯ ಭೂಮಿ. ಇ[ಲ್ಲಿ] ಆಸ್ಪತ್ರೆ ಕಟ್ಟಡ ಕಾಮಗಾರಿ ನಿಲ್ಲಿಸಬೇಕು' ಎಂದ[ು] ಸರ್ಕಾರಕ್ಕೆ ಮನವಿ ಅರ್ಪಿಸಿದರು. ಇದಾದನಂತ[ರ] ಸುಮಾರು ಎರಡು ವರ್ಷಗಳ ಕಾಲ ಸರ್ಕಾರ ಸುಮ್ಮ[ನೆ] ಕುಳಿತುಕೊಂಡಿತ್ತು, ಆದರೆ ಇತ್ತೀಚೆಗೆ – ಅಂದ[ರೆ] ಸುಮಾರು ಮೂರು ತಿಂಗಳ ಹಿಂದೆ – ಕೊಪ್ಪ[ಳ] ಜಿಲ್ಲಾ ವೈದ್ಯಾಧಿಕಾರಿ ಬಸವರಾಜ ಎಂಬಾತ 'ಈ ಭೂಮಿ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಾಗಿದೆ' ಎಂದ[ು] ಸರ್ಕಾರಕ್ಕೆ ಪತ್ರ ಬರೆದ. ನಂತರ ಹನುಮಂತಪ್ಪ ಎಂಬ ವ್ಯಕ್ತಿಯಿಂದ ಕೆಲ ಪುಢಾರಿ ರಾಜಕಾರಣಿಗಳು ಆಸ್ಪತ್ರೆಯ ಪರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಿಸಿದರು. ತೀರ್ಪು ಹನುಮಂತನ ಪರ ಬಂದಿತು. ಇಷ್ಟಾದ[ುದೇ] ತಡ ಕಂದಾಯ ಇಲಾಖೆಯ ಅಧಿಕಾರಿಗಳು ಭೂಸ್ವಾಧೀ[ನ] ಸಮೀಕ್ಷೆ ಪ್ರಾರಂಭಿಸಿಯೇ ಬಿಟ್ಟರು.

ರೈತರಿಗೆ ಯಾವುದೇ ಮುನ್ಸೂಚನೆ ಇಲ್ಲದೆ ಜಿಲ[್ಲಾ] ಸಹಾಯಕ ಆಯುಕ್ತ ಶರಣಬಸಪ್ಪ ಪೊಲೀಸ್ ಪಡೆಯನ[್ನು] ಕರೆದುಕೊಂಡು ಸಮೀಕ್ಷೆ ಪ್ರಾರಂಭಿಸಿದ. ಕನಿಷ್ಠ ಸೌಜನ್ಯ[ಕ್ಕಾ]ದರೂ ಈ ಬಗ್ಗೆ ರೈತರೊಂದಿಗೆ ಚರ್ಚಿಸದ ಜಿಲ್ಲಾಡಳಿ[ತ] ಅವರ ಭೂಮಿಗೆ ಎಕರೆಗೆ 30,000 ರೂಗಳನ್ನು ನಿಗದಿ ಪಡಿಸಿದ್ದು ರೈತರ ಆಕ್ರೋಶಕ್ಕೆ ಮತ್ತೊಂದು ಕಾರಣವಾಗಿದ[ೆ]. ಹಾಗೆಯೇ ಮುನ್ಸೂಚನೆ ಇಲ್ಲದೆ ನಡೆಸುತ್ತಿರುವ ಸರ್ವೆ[ಗೆ] ಅಡ್ಡಿ ಪಡಿಸಿ ರೈತರು ಬಲವಾದ ಪ್ರತಿರೋಧ ಒಡ್ಡಿದಾ[ಗ] ಅವರ ಮೇಲೆ ಪೊಲೀಸರು ಹೆಣ್ಣು ಗಂಡು ಎಂಬ ಭೇದಮಾಡದೆ ತಮ್ಮ ಪೌರುಷ ತೋರಿಸಿದ್ದೂ ಜನ[ರ] ಕೋಪಕ್ಕೆ ಕಾರಣವಾಗಿದೆ.

ಈ ರೀತಿ ರೈತರ ಮೇಲೆ ದಬ್ಬಾಳಿಕೆ ನಡೆಸಿ ಅಧಿಕಾ[ರ] ಚಲಾಯಿಸುತ್ತಿರುವ ಮುಖ್ಯಮಂತ್ರಿ ಯಡ್ಡಿಗೆ ಮಾ[ನ] ಮರ್ಯಾದೆ ಇದೆಯಾ?

• ಹುರಳಿಕುಪ್ಪಿ ವಿನಯ್

ತೇರದಾಳ: ಸವದಿ ಸಂಚಿಗೆ ಯಲ್ಲಟ್ಟಿ ಹೋರಾಟ ಬಲಿ


ಅನ್ಯಾಯದ ವಿರುದ್ಧ ಕ್ರಾಂತಿಕಾರಿ ಹಾದಿ ಹಿಡಿದವರಿಗೆ 'ಪ್ರಜಾಸತ್ತಾತ್ಮಕ ಹೋರಾಟ ನಡೆಸಿ' ಅಂತ ಪುಗಸಟ್ಟೆ ಉಪದೇಶ ನೀಡುವವರಿಗೇನೂ ಈ ದೇಶದಲ್ಲಿ ಬರವಿಲ್ಲ. ಆದರೆ ಅಹಿಂಸಾತ್ಮಕ ಹೋರಾಟಗಳೆಲ್ಲ ಅಮಾನವೀಯವಾಗಿ ಆಸುನೀಗುತ್ತಿರುವುದು ಕಣ್ಣಮುಂದಿನ ಸತ್ಯ. ಇದಕ್ಕೆ ಇತ್ತೀಚಿನ ತಾಜಾ ಉದಾಹರಣೆ ಜಮಖಂಡಿ ತಾಲ್ಲೂಕು ತೇರದಾಳದಲ್ಲಿ ಬಡವರ ಪರ ಉಪವಾಸ ಸತ್ಯಾಗ್ರಹ ನಡೆಸಿದ ಡಾ. ಯಲ್ಲಟ್ಟಿಯವರ ಹೋರಾಟ ಮತ್ತು ಅದರ ಅಕಾಲಿಕ ಸಾವು.


ಸಿದ್ದುಸವದಿ

ವೃತ್ತಿಯಲ್ಲಿ ವೈದ್ಯರಾಗಿರುವ ಯಲ್ಲಟ್ಟಿ ಲಾಗಾಯ್ತಿನಿಂದಲೂ ಬಡಜನರ ಕಷ್ಟ ಕೋಟಲೆಗಳಿಗೆ ಮಿಡಿಯುತ್ತಾ ಬಂದಿದ್ದಾರೆ. ಶಾಂತಿಯುತ ಮಾರ್ಗದಲ್ಲಿ ಹೋರಾಟ ನಡೆಸಿ ಯಶಸ್ವಿಯಾದದ್ದೂ ಇದೆ. ಈ ಮನಸ್ಥಿತಿಯಿಂದಲೇ ಯಲ್ಲಟ್ಟಿ ಜನಸಾಮಾನ್ಯರಿಗೆ ಚಿರಪರಿಚಿತರು. ಇವರು ಇತ್ತೀಚೆಗೆ ರಾಜೀವ್ ಗಾಂಧಿ ಹೌಸಿಂಗ್ ಪ್ಲಾನ್‌ನಲ್ಲಿ ನಿರ್ಮಾಣವಾಗಿದ್ದ ಮನೆಗಳ ಹಕ್ಕು ಬಡವರಿಗೆ ಕಲ್ಪಿಸುವ ಸಂಬಂಧ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಆದರೆ ಶಾಸಕ ಸಿದ್ದು ಸವದಿ ತಣ್ಣಗಿನ ದಮನಕಾರಿ ನೀತಿ ಅನುಸರಿಸಿ ಎಲ್ಲವನ್ನೂ ಹಾಳುಗೆಡವಿದ್ದಾನೆ.

2004 ರಲ್ಲಿ ಜಮಖಂಡಿ ಭಾಗದ ಶಾಸಕರಾಗಿದ್ದರು. ಆರ್.ಎಂ. ಕಲೂತಿ. ಈ ಸಂದರ್ಭದಲ್ಲಿ ರಾಜೀವ್ ಗಾಂಧಿ ಹೌಸಿಂಗ್ ಪ್ಲಾನ್ ವತಿಯಿಂದ 3 ಕೋಟಿ ವೆಚ್ಚದಲ್ಲಿ 465 ಮನೆಗಳನ್ನು ಕಲೂತಿ ನಿರ್ಮಿಸಿದ್ದರು. ಇವರ ಕಕ್ಕುಲಾತಿಯಿಂದಲೇ ನಿರ್ಮಾಣಗೊಂಡ ಈ ವಸತಿ ಸಮುಚ್ಚಯಕ್ಕೆ ಕಲೂತಿ ನಗರ ಅಂತಲೇ ಹೆಸರಿಡಲಾಗಿತ್ತು. ಇನ್ನೇನು ಅವುಗಳ ಹಂಚಿಕೆ ಆಗಬೇಕೆನ್ನುವಷ್ಟರಲ್ಲಿ ಚುನಾವಣೆ ಎದುರಾಗಿ ಕಲೂತಿ ಸೋಲಬೇಕಾಯಿತು. ಗೆದ್ದವನು ಬಿಜೆಪಿ ಪಿಂಡ ಸಿದ್ದು ಸವದಿ.

ಈತನ ಒಣಿದ್ವೇಷ ಸರ್ಕಾರಿ ಮನೆಗಳ ಫಲಾನುಭವಿಗಳ ಪಾಲಿಗೆ ಮುಳುವಾಯಿತು. ಆರ್.ಎಂ ಕಲೂತಿ ಕಾಂಗ್ರೆಸ್‌ನವರು. ಅದರಲ್ಲೂ ಕಲೂತಿ ಹೆಸರಲ್ಲಿರುವ ಮನೆಗಳನ್ನು ತಾನೇಕೆ ಹಂಚಬೇಕೆಂಬ ಅಹಂಗೆ ಬಿದ್ದ ಸವದಿ ಈ ಕ್ಷಣದವರೆಗೂ ಹಕ್ಕುಪತ್ರ ನೀಡಿಲ್ಲ. ನೆರೆಗೆ ಸಿಕ್ಕು ಬದುಕು ಕಳೆಕೊಂಡ 100 ಕ್ಕೂ ಹೆಚ್ಚು ಕುಟುಂಬಗಳು ಇಲ್ಲೇ ನೆಲೆಸಿವೆ. ಅವರೆಲ್ಲರೂ ಕೂಡ ನಿಂತ ನೆಲೆಗೆ ಗ್ಯಾರಂಟಿಯಿಲ್ಲದ ಅಭದ್ರತೆಯ ನಡುವೆ ಬದುಕು ನಡೆಸುತ್ತಿದ್ದಾರೆ.


ಯಲ್ಲಟ್ಟಿ

ಈ ಅನ್ಯಾಯದ ವಿರುದ್ಧ ಯಲ್ಲಟ್ಟಿಯವರು ಜುಲೈ 4ನೇ ತಾರೀಕಿನಿಂದ ತೇರದಾಳದ ಬಸ್‌ನಿಲ್ದಾಣದೆದುರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅಷ್ಟೂ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕೆಂಬ ಬೇಡಿಕೆಯಿಟ್ಟರು. ಒಣಪ್ರತಿಷ್ಠೆಯ ತೆಕ್ಕೆಯಲ್ಲಿದ್ದ ಸವದಿ 10ನೇ ತಾರೀಖಿನವರೆಗೂ ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ, ಆದರೆ ಆ ದಿನ ರಾತ್ರಿ 10.30 ಕ್ಕೆ ಪೊಲೀಸ್ ಅಧಿಕಾರಿಗಳನ್ನು ಛೂಬಿಟ್ಟು ಯಲ್ಲಟ್ಟಿಯವರನ್ನು ಬಿಜಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ.

ಇದಕ್ಕೆ ಮಣಿಯದ ಯಲ್ಲಟ್ಟಿ ಆಸ್ಪತ್ರೆಯಲ್ಲಿ ಉಪವಾಸ ಸತ್ಯಾಗ್ರಹ ಮುಂದುವರೆಸಿದರು. ಇದು ಸರಿಸುಮಾರು 20 ದಿನಗಳವರೆಗೆ ಮುಂದುವರೆಯಿತು. ಇದಾದಬಳಿಕ ಆಸ್ಪತ್ರೆಗೆ ಭೇಟಿ ನೀಡಿದ ಸವದಿ ಏನೇನೋ ಭರವಸೆ ನೀಡಿ ಹೊರಬಂದವನೇ 'ಯಲ್ಲಟ್ಟಿಯವರು ಹಿತೈಷಿಗಳ ಒತ್ತಾಯದ ಮೇರೆಗೆ ಉಪವಾಸ ನಿಲ್ಲಿಸಿದ್ದಾರೆ' ಎಂದು ಘೋಷಿಸಿ ಬಿಟ್ಟ. ಇದರಿಂದ ತಬ್ಬಿಬ್ಬಾದ ಯಲ್ಲಟ್ಟಿ ಒಂದು ಹಂತದಲ್ಲಿ ಉಪವಾಸ ಹಿಂತೆಗೆದುಕೊಂಡಿದ್ದಾರಾದರೂ ಬೇಡಿಕೆ ಈಡೇರುವ ತನಕ ಸುಮ್ಮನಿರುವವರಲ್ಲ. ಸಿದ್ದು ಸವದಿಯೆಂಬ ನಾಲಾಯಕ್ ಶಾಸಕ ಸಿಲ್ಲಿ ಪ್ರತಿಷ್ಠೆಯನ್ನಿಟ್ಟುಕೊಂಡು ಬಡವರನ್ನು ಸತಾಯಿಸುತ್ತಿರುವುದು ಮಾತ್ರ ಅಕ್ಷಮ್ಯ.

ಆದಷ್ಟು ಬೇಗ ಫಲಾನುಭವಿಗಳಿಗೆ ಮನೆ ಹಂಚಿದರೆ ಅಷ್ಟರಮಟ್ಟಿಗೆ ಸಿದ್ದು ಸವದಿಯ ಮಾನ ಉಳಿದೀತು.

ಅಥಣಿ: ಲಕ್ಷ್ಮಣ ಸವದಿ ಸಾಮ್ರಾಜ್ಯದಲ್ಲಿ ಅಕ್ರಮಗಳ ಕಾರುಬಾರು

ಸಹಕಾರಿ ಸಚಿವ ಲಕ್ಷ್ಮಣ ಸವದಿಯ ಮತಕ್ಷೇತ್ರ ಅಥಣಿ ತಾಲ್ಲೂಕು ಅಕ್ಷರಶಃ ಅಕ್ರಮ ದಂಧೆಗಳ ತಾಣವಾಗಿಹೋಗಿದೆ. ಮೀಟರ್ ಬಡ್ಡಿ ವ್ಯವಹಾರ, ಓಸಿ ದಂಧೆ, ಅಕ್ರಮ ಮರುಳು ಸಾಗಾಣಿಕೆ, ಕೊಲೆ, ಸುಲಿಗೆ, ದರೋಡೆ ಹೀಗೆ ಎಲ್ಲ ಅಕ್ರಮ ಚಟುವಟಿಕೆಗಳೂ ಇಲ್ಲಿ ನಿರಾತಂಕವಾಗಿ ಸಾಗಿವೆ. ಇವುಗಳನ್ನೆಲ್ಲ ನಿಗ್ರಹಿಸಬೇಕಿದ್ದ ಆಡಳಿತ ಯಂತ್ರ ಸವದಿ ಆದೇಶಗಳನ್ನು ಮಾತ್ರ ಪಾಲಿಸುತ್ತ ನಿಸ್ತೇಜವಾಗಿದೆ.


ಲಕ್ಷ್ಮಣಸವದಿ

ಇಡೀ ಬೆಳಗಾಂವ ಜಿಲ್ಲೆಯಲ್ಲೇ ಈ ತಾಲ್ಲೂಕಿನಲ್ಲಿ ಕ್ರೈಂ ಸಂಖ್ಯೆ ಹೆಚ್ಚು. ದಿನನಿತ್ಯ ಹಾಡುಹಗಲಲ್ಲೇ ಹಲವಾರು ಅಪರಾಧಗಳು ಜರುಗುತ್ತವೆ. ಇನ್ನು ಕತ್ತಲಾದರೆ ಸಾಕು ಇಲ್ಲಿ ಒಂಟಿಯಾಗಿ ಓಡಾಡುವುದು, ಅದರಲ್ಲೂ ಹಣ ಇಟ್ಟುಕೊಂಡು ಓಡಾಡುವುದು ಅಪಾಯಕಾರಿ. ಕಳೆದ ತಿಂಗಳು 11 ರಂದು ರಾತ್ರಿ ತಾಲೂಕಿನ ಕವಲಗುಡ್ಡ ಗ್ರಾಮಕ್ಕೆ ಹೋಗುತ್ತಿದ್ದ ಶಾಮು ಅವಳೆ ಎಂಬ ವ್ಯಕ್ತಿಯನ್ನು ಕೊಂದು 25,000 ರೂ ತೆಗೆದುಕೊಂಡು ಪರಾರಿಯಾದವರನ್ನು ಇಲ್ಲಿನ ಪೊಲೀಸರು ಇನ್ನೂ ಹುಡುಕುತ್ತಲೇ ಇದ್ದಾರೆ.

ಇದೊಂದೇ ಅಲ್ಲ, ಇಂತಹ ಘಟನೆಗಳು ಇಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಇನ್ನು ಇಡೀ ತಾಲ್ಲೂಕಿನಾದ್ಯಂತ ವ್ಯಾಪಿಸಿಕೊಂಡಿರುವ ಮರಳುಗಾರಿಕೆ ದಂಧೆಯಂತೂ ಇಲ್ಲಿನ ಅಕ್ರಮ ದಂಧೆಕೋರರಿಗೆ ಚಿನ್ನದ ಗಣಿ ಇದ್ದಂತೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಹಲವಾರು ಬಾರಿ ಇದನ್ನು ಮಟ್ಟಹಾಕಲು ಯತ್ನಿಸಿದರೂ ಇದನ್ನು ತಡೆಗಟ್ಟುವುದು ಸಾಧ್ಯವಾಗಿಲ್ಲ. ಇಲ್ಲಿನ ಶಿರಗುಪ್ಪಿ, ಉಗಾರ, ಮಡಿವಾಳ, ಕಂಸನಾಳ, ಕೃಷ್ಣಾ ಕಿತ್ತೂರ, ದರೂರ, ಕವಟಕೊಪ್ಪ ಮಹಿಷವಾಡಗಿ ಮುಂತಾದ ಗ್ರಾಮಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದ್ದ ಮರಳು ತೆಗೆಯುವಿಕೆ ಮತ್ತು ಸಾಗಿಸುವಿಕೆಯನ್ನು ತಡೆಯಲು ಜಿಲ್ಲಾಧಿಕಾರಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಸಾಕಷ್ಟು ಪ್ರಯತ್ನ ಮಾಡಿದರೂ ಸಂಪೂರ್ಣ ತಡೆಯಲಾಗಿಲ್ಲ. ಅದಕ್ಕೆ ಇಲ್ಲಿನ ಸ್ಥಳೀಯ ಅಧಿಕಾರಿಗಳೇ ಕಾರಣ. ತಹಶೀಲ್ದಾರ್ ಶರಣಬಸಪ್ಪ ಕೊಟ್ಟ್ಯಾಪಗೋಳಂತೂ ಸ್ವತಃ ಈ ದಂಧೆಗೆ ಬೆಂಗಾವಲಾಗಿ ನಿಂತಿದ್ದಾನೆ.

ಮಹಾರಾಷ್ಟ್ರದಲ್ಲಿ ಮರಳುಗಾರಿಕೆಗೆ ನಿಷೇಧವಿರುವುದರಿಂದ ಅಲ್ಲಿ ಮರಳಿಗೆ ಚಿನ್ನದಂತಹ ಬೆಲೆ ಇದೆ. ತೀವ್ರವಾಗಿ ಬೆಳೆಯುತ್ತಿರುವ ಮಿರಜ್, ಸಾಂಗ್ಲಿ, ಮುಂಬೈಗಳಲ್ಲಿ ಕಟ್ಟಡ ನಿರ್ಮಿಸಲು ಮರಳಿನ ಕೊರತೆ ಇದೆ. ಹೀಗಾಗಿ ಇಲ್ಲಿಂದ ಸಾಗಣೆಯಾಗುವ ಮರಳಿಗಾಗಿ ಅಲ್ಲಿನ ಗುತ್ತಿಗೆದಾರರು ಸ್ಪರ್ಧೆಗೆ ಬಿದ್ದು ಬೇಕಾಬಿಟ್ಟಿ ಹಣ ಕೊಟ್ಟು ಖರೀದಿಸುತ್ತಾರೆ. ಅಷ್ಟೇ ಅಲ್ಲ, ಇದರ ಸುತ್ತಲೂ ಅಲ್ಲಿ ದೊಡ್ಡ ಮಾಫಿಯಾ ನಿರ್ಮಾಣವಾಗಿದೆ. ನಿತ್ಯ ಹಲವಾರು ಕೋಟಿಗಳ ವ್ಯವಹಾರ ನಡೆಯುತ್ತಿದೆ. ಅದು ಇಲ್ಲಿನ ಅಕ್ರಮ ಮರಳು ಸಾಗಾಣಿಕೆದಾರರಿಗೆ ವರವಾಗಿ ಪರಿಣಮಿಸಿದೆ. ಜೊತೆಗೆ ಈ ಅಥಣಿ ತಾಲ್ಲೂಕಿನಿಂದ ಮಹಾರಾಷ್ಟ್ರಕ್ಕೆ ಮರಳು ಸಾಗಿಸುವುದು ಬಹಳ ಸುಲಭ. ಏಕೆಂದರೆ ಇದು ಕರ್ನಾಟಕ ಮಹಾರಾಷ್ಟ್ರದ ಗಡಿ ತಾಲ್ಲೂಕು. ತಾಲ್ಲೂಕಿನ ಕಾಗವಾಡ ಗ್ರಾಮ ಕರ್ನಾಟಕದ ಕೊನೆಯಹಳ್ಳಿ, ಅಲ್ಲಿ ಚೆಕ್‌ಪೋಸ್ಟ್ ಇದೆ. ಚೆಕ್‌ಪೋಸ್ಟ್ ಅಧಿಕಾರಿಗಳಿಗೆ ಲಾರಿ ಒಂದಕ್ಕೆ ಇಂತಿಷ್ಟು ಅಂತ ಫಿಕ್ಸಾಗಿದೆ. ತದನಂತರ ಮರಳು ಅನಾಯಾಸವಾಗಿ ಮಹಾರಾಷ್ಟ್ರ ಸೇರಿ ಬಿಡುತ್ತದೆ.

ಹೀಗೆ ನಿತ್ಯ ನಡೆಯುವ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮರಳು ವ್ಯವಹಾರದಿಂದ ಇಲ್ಲಿನ ತಹಶೀಲ್ದಾರ್ ಶರಣಬಸಪ್ಪ ಸಾಹೇಬರಿಗೆ ಸಾಕಷ್ಟು ಕಮಾಯಿ ಇದೆ. ಪ್ರತಿ ತಿಂಗಳು ಅನಾಮತ್ತಾಗಿ ಬರುವ ಲಕ್ಷಾಂತರ ರೂಪಾಯಿ ಆದಾಯಕ್ಕಾಗಿ ಈ ವ್ಯವಹಾರವನ್ನು ನಿಯಂತ್ರಿಸುವ ಯಾವ ಪ್ರಯತ್ನವನ್ನೂ ಈ ಆಸಾಮಿ ಮಾಡುತ್ತಿಲ್ಲ. ಇನ್ನುಳಿದಂತೆ ಸವದಿ ಕ್ಷೇತ್ರದ ನದಿ ತಟದ ಹಳ್ಳಿಗಳಲ್ಲಿ ಓ.ಸಿ., ಮಟ್ಕಾ ದಂಧೆಗಳು ರಾಜಾರೋಷವಾಗಿ ಸಾಗಿವೆ. ರೂಪಾಯಿಗೆ 80 ರೂಪಾಯಿ ಕೊಡುವ ಆಮಿಷದೊಂದಿಗೆ ನಡೆಯುವ ಈ ಕಾನೂನುಬಾಹಿರ ದಂಧೆಗೆ ಹೆಚ್ಚಾಗಿ ಕೂಲಿ ಕಾರ್ಮಿಕರೇ ಬಲಿಯಾಗುತ್ತಿದ್ದಾರೆ. ಇದರ ಬಲೆಗೆ ಸಿಲುಕಿ ಹಲವಾರು ಕುಟುಂಬಗಳು ಬೀದಿಗೆ ಬಿದ್ದರೂ ಇಲ್ಲಿನ ಪೊಲೀಸರು ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತಿಲ್ಲ.

ಇವಿಷ್ಟೇ ಅಲ್ಲದೇ ರಾಸಾಯನಿಕಗಳನ್ನೇ ಬಳಸಿ ಸಾವಿರಾರು ಲೀಟರ್ ಹಾಲು ತಯಾರಿಸಿ ಮಾರುವ ನೀಚ ದಂಧೆ ಕೂಡ ಇಲ್ಲಿ ಚಾಲ್ತಿಯಲ್ಲಿದೆ. ಮೂಲತಃ ಬಡ್ಡಿ ದಂಧೆಯಿಂದಲೇ ಮೇಲಕ್ಕೇರಿ ಬಂದ ಸಚಿವ ಸವದಿಗೆ ತನ್ನ ಕ್ಷೇತ್ರದಲ್ಲಿ ಇಷ್ಟೆಲ್ಲ ಅಕ್ರಮ ನಡೆಯುತ್ತಿದ್ದರೂ ಅವುಗಳನ್ನು ಅಧಿಕಾರಿಗಳ ಮೂಲಕ ನಿಯಂತ್ರಿಸಬೇಕು ಎಂದು ಅನಿಸಿಲ್ಲ.

ಈ ವ್ಯವಹಾರಗಳಿಂದ ಅಧಿಕಾರಿಗಳ ಮೂಲಕ ಹರಿದುಬರುವ ಲಕ್ಷಾಂತರ ರೂಪಾಯಿ ಹಣಕ್ಕಾಗಿ ಮತಕ್ಷೇತ್ರದ ಜನರ ನೆಮ್ಮದಿಯ ಬದುಕನ್ನೇ ಬಲಿ ಕೊಡುತ್ತಿದ್ದಾನೆ. ಅಭಿವೃದ್ಧಿ ಎಂಬುದು ಮತಕ್ಷೇತ್ರದಲ್ಲೆಲ್ಲೂ ಕಾಣುವುದಿಲ್ಲವಾದರೂ ಈತನ ಸಂಪತ್ತು ಮಾತ್ರ ದಿನೇದಿನೇ ಬೆಳೆಯುತ್ತಲೇ ಇದೆ. ಕನಿಷ್ಠ ಅಭಿವೃದ್ಧಿಯನ್ನಾದರೂ ನಿರೀಕ್ಷಿಸಿದ್ದ ಮತದಾರರು ನಿರಾಶೆಗೊಳಗಾಗಿದ್ದಾರೆ.

• ಮಹಾಲಿಂಗಪ್ಪ ಆಲಬಾಳ

ಬೆಳಂಬೆಳಿಗ್ಗೆ ಒಂದು ಕನಸು ಬಂದು ಬಾಗಿಲು
ದಿ.
ಬಡಿತದ ಧ್ವನಿ ಕೇಳಿ ಎದ್ದು ಬಾಗಿಲು ತೆರೆದೆ..
ಡಿದೆ..
ಡಿಭಾಗದ ಆಚೆಯಿಂದ ಕೆಲವು ಅತಿಥಿಗಳು
ದ್ದಾರೆ..
ಣ್ಣುಗಳೆಲ್ಲವೂ ನಿದ್ದೆಗೆಟ್ಟಿದ್ದವು.. ಮುಖಗಳೆಲ್ಲವೂ ಹೇಳಿ
ಂತಿದ್ದವು..


ಾಲು ತೊಳೆಸಿದೆ.. ಕೈತೊಳೆಸಿದೆ.. ಅಂಗಳದಲ್ಲಿ ಆಸನ
ದೆ..
ತ್ತೇ.. ತಂದೂರಿಯಲ್ಲಿ ಮೆಕ್ಕೆಜೋಳದ ದಪ್ಪ ದಪ್ಪನೆಯ
ಮಾಡಿಸಿದೆ..
ನ್ನ ಅತಿಥಿಗಳು ಗಂಟಿನಲ್ಲಿ ಹೋದವರ್ಷದ ಬೆಳೆಯ
ು ಬೆಲ್ಲ ತಂದಿದ್ದರು..

ಚ್ಚರವಾಯ್ತು.. ಕಣ್ಣು ತೆರೆದೆ.. ನೋಡಿದೆ..
ಮನೆಯಲ್ಲಿ ಯಾರೂ ಇಲ್ಲ..
ಮುಟ್ಟಿನೋಡಿದೆ.. ತಂದೂರಿಯ ಒಲೆ ಇನ್ನೂ ಆರಿಲ್ಲ..
ಮತ್ತೆ.. ತುಟಿಯ ಮೇಲಿದ್ದ ಸಿಹಿಬೆಲ್ಲದ ಸವಿ ಇನ್ನೂ
ತ್ತಿದೆ..

ನಸಿತ್ತೇನೋ? ಹೌದು.. ಕನಸೇ ಇರಬಹುದು..!
ನ್ನೆಯ ರಾತ್ರಿ ಕೇಳಿದ್ದೆ ಗಡಿಭಾಗದಲ್ಲಿ ಮತ್ತೇ ಗುಂಡಿನ
ಮೂಗಿದೆಯಂತೆ..
ನ್ನೆಯ ರಾತ್ರಿ ಕೇಳಿದ್ದೆ ಗಡಿಭಾಗದಲ್ಲಿ ಕೆಲವು ಕನಸುಗಳ
ಮೂಗಿದೆಯಂತೆ..
ಸುಬಹ ಸುಬಹ ಇಕ ಖಾಬ ಕೆ ದಸ್ತಕ ಪರ ದರ
.. ಎಂಬುದರ ಅನುವಾದ)

ಚಲನಚಿತ್ರಗಳಿಗೆ ಬರೆದ ಗೀತೆಗಳನ್ನು ಕಾವ್ಯಸಾಹಿತ್ಯ ವುದು ಸರಿಯೋ ತಪ್ಪೋ ಗೊತ್ತಿಲ್ಲ ಆದರೆ ಹಿರಿಯ ಾಬ್ಬರು ಈ ತೆಳುವಾದ ಪರದೆಯನ್ನು ಬಹಳ ವಾಗಿ ತೆಗೆದುಹಾಕಿ ಉತ್ತಮವಾದ ಕಾವ್ಯವನ್ನು ಅದರ ು ಸೊಗಡಿನೊಂದಿಗೆ ಅಕ್ಷರಗಳಲ್ಲಿ ಜೋಡಿಸಿ ಳ ಹಾಡುಗಳಾಗಿ ಮಾರ್ಪಡಿಸಿದ್ದಾರೆ. ಅಂಥ ಗಳನ್ನು ಬರೆಯುವಾಗ ಅವರು ಎಲ್ಲಿಯೂ ಯಾವುದೇ ನಿಯಮಗಳ ಗೋಜಿಗೆ ಹೋಗಿಲ್ಲ, ಅಥವಾ ತದ ರಾಗತಾಳಗಳ ಒತ್ತಡಕ್ಕೆ ಮಣಿದು ಭಾವನೆಗಳ ಟ್ಟಿಲ್ಲ. ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಕೀರ್ತಿ ಕೊಟ್ಟ ಆ ಕವಿಯ ಶಬ್ದಗಳ ಸಾಧನೆ ಶಬ್ದಾತೀತ. ೀಯರ ಸಾಹಿತ್ಯಕ್ಕೆ ಒಲಿದ 'ಏಕೈಕ ಆಸ್ಕರ್' ಪುರ ೇ ಅವರ ಸಾಧನೆಗೆ ಕನ್ನಡಿ. ಇದನ್ನು ಹೊರತುಪಡಿಸಿ ಫಿಲ್ಮ್‌ಫೇರ್ ಪ್ರಶಸ್ತಿ' ಮತ್ತು '7 ಬೆಸ್ಟ ಲಿರಿಸ್ಟ ಗಳು ಅವರ ಶಬ್ದಗಳಿಗೆ ಸಂದಕೀರ್ತಿ ಪತಾಕೆಗಳು. ಮಗಳನ್ನು ಲೀಲಾಜಾಲವಾಗಿ ಅರಳಿಸಿದ ಆ ಹಿರಿಯ ೀ 'ಗುಲ್ಜಾರ್'. ಅವರಿಗೀಗ 75ನೇ ಹುಟ್ಟುಹಬ್ಬದ ಮ.

ಗುಲ್ಜಾರ್' ಎಂದೇ ಚಿರಪರಿಚಿತರಾಗಿರುವ ಇವರ ಾದ ಹೆಸರು ಸಂಪೂರ್ಣ ಸಿಂಗ್. ಹುಟ್ಟಿದ್ದು ಇಂದಿನ ಸ್ತಾನದಲ್ಲಿರುವ ದೀನಾ ಎಂಬಲ್ಲಿ. ಅವಿಭಕ್ತ ಸಿಖ್ ಾರದಲ್ಲಿ ಬೆಳೆದ ಇವರ ಮೇಲೆ ಸಂಪ್ರದಾಯಗಳೊಂದಿಗೆ ಾಳ್ವೆಗಳು ಪ್ರಭಾವ ಬೀರಿದವು. ಬರವಣಿಗೆಗಾಗಿ ಗುವ ಕಚ್ಚಾವಸ್ತು ಆದಾಗಲೇ ಅವರ ಮನಸ್ಸಿನಲ್ಲಿ



ಜಯ ಹೋ! 75!!

ಒಟ್ಟುಗೊಳ್ಳುತ್ತಿತ್ತು, ಬ್ರಿಟಿಷರ ದಬ್ಬಾಳಿಕೆಗಳನ್ನು ಅನುಭವಿಸಿದ ಬಾಲ್ಯ ಅನೇಕ ಅನುಭವಗಳನ್ನು ಪಡೆಯಿತು. ದೇಶ ವಿಭಜನೆಯ ಸಮಯದಲ್ಲಿ ಇವರ ಪರಿವಾರ ಭಾರತಕ್ಕೆ ಬಂತು. ಕುಟುಂಬವೆಲ್ಲ ಅಮೃತಸರ್‌ದಲ್ಲಿ ನೆಲೆಸಿದರೆ ಸಂಪೂರ್ಣ ಸಿಂಗ್ ಮಾತ್ರ ಮುಂಬಯಿಗೆ ಬಂದರು. ಅಲ್ಲಿಂದ ಶುರುವಾಯಿತು ನಿಜವಾದ ಕಾವ್ಯದ ಯುಗ...

ಒಂದು.. ಒಂಟಿ ಕೊಡೆಯಲ್ಲಿ ನಾವಿಬ್ಬರು
ಅರ್ಧ ಒದ್ದೆಯಗುತ್ತಿದ್ದಾಗ..
ಅರ್ಧ ಒಣ.. ಅರ್ಧ ಹಸಿ..
ಒಣಗಿದ್ದೆಲ್ಲ ನಾನು ತೆಗೆದುಕೊಂಡು ಬಂದಿದ್ದೆ..
ಹಸಿಯಾದ ಮನಸ್ಸು ಬಹುತೇಕ
ಆ ಹಾಸಿಗೆಯ ಬಳಿಯೇ ಬಿದ್ದಿರಬಹುದು..
ಅದನ್ನು ಕೊಟ್ಟು ಕಳುಹಿಸು..
ನನ್ನ ಆ ವಸ್ತುಗಳನ್ನು ಮರಳಿ ಕೊಡು..

ಒಂದು ಅನುಮತಿ ಕೊಡು.. ಸಾಕು..
ನಾನೆಂದು ಇದನ್ನು ಹೂಳುತ್ತೇನೆ
ಅಲ್ಲಿಯೇ ನಾನೂ ಮಲಗಿಬಿಡುತ್ತೇನೆ..
(ಏಕ ಅಕೇಲಿ ಛತ್ರಿ ಮೆ ಜಬ.. ಎಂಬುದರ ಅನುವಾದ)

ಮುಂಬಯಿಯಲ್ಲಿ ಆಗ ಪ್ರಖ್ಯಾತ ನಿರ್ಮಾಪಕರಾದ ವಿಮಲ ರಾಯ್ 'ಬಂದಿನಿ' ಎಂಬ ಚಿತ್ರ ಮಾಡುತ್ತಿದ್ದರು. ಸಂಪೂರ್ಣ ಸಿಂಗ್ ವಿಮಲ್ ಅವರಿಗೆ ಸಹಾಯಕರಾಗಿ ಕೆಲಸದಲ್ಲಿ ತೊಡಗಿದರು. ಸಾಮಾಜಿಕ ಕಳಕಳಿಯ ನಿರ್ದೇಶಕರ ಸಹವಾಸ ದೊರಕಿದ್ದು ಇವರಲ್ಲಿಯೂ ಸಮಾಜಮುಖಿ ವಿಚಾರಗಳನ್ನು ವೃದ್ಧಿಸಿತು. ಅವರು ಅದೇ ಚಿತ್ರಕ್ಕೆ ಪ್ರಥಮ ಹಾಡು ಬರೆದರು 'ಮೋರಾ ಗೋರಾ ರಂಗ ಲೈ ಲೋ.. ಮೋಹೆ ಶ್ಯಾಮ ರಂಗ ದೈ ದೋ.. ಛಿಪಜಾವುಂಗಿ ರಾತ ಹಿ ಮೇ.. ಮೋಹೆ ಪೀ ಕಾ ಸಂಗ ದೈ ದೋ..' ಆ ಹಾಡು ಯಶಸ್ಸಿನ ಮೊದಲ ಹೆಜ್ಜೆಯಾಯಿತು. ಅವರು ಹಿಂದೆ ತಿರುಗಿ ನೋಡಲೇ ಇಲ್ಲ, ಮುಂದೆ ನಡೆದಿದ್ದೆಲ್ಲ ವಿಸ್ಮಯವೇ! ಅಂದಿನಿಂದ ಇಂದಿನವರೆಗೆ ಬರೆಯುತ್ತಲೇ ಸಾಗಿದ್ದಾರೆ. ಮೊದಲ ಹಾಡಿನಿಂದ ಹಿಡಿದು ಮೊನ್ನೆಯ 'ಜಯ ಹೋ..' ತನಕ. ಈ ಅವಧಿಯಲ್ಲಿ ಅನೇಕ ರಾಗಗಳು ಬದಲಾದವು, ತಂತ್ರಗಾರಿಕೆ ಬದಲಾಯಿತು, ಧ್ವನಿಗಳೂ ಬದಲಾದವು.. ಆದರೆ ಗುಲ್ಜಾರ್‌ರ ಗೀತೆಗಳಲ್ಲಿರುವ ಭಾವನೆಗಳು ಮತ್ತು ಸಹಜತೆಗಳು ಬದಲಾಗಲೇ ಇಲ್ಲ.

ಶಬ್ದಗಳ ಅತಿಯಾದ ಆಡಂಬರವಿಲ್ಲದೆ ನಿರ್ದಿಷ್ಟ ಅರ್ಥ ಸಂವಹಿಸುವ ರಚನೆಗಳಿಂದ ಭಾವನೆಗಳ ಅಂತರಾಳವನ್ನು ತೆರೆದಿಡುವುದು ಗುಲ್ಜಾರ್ ಅವರ ವಿಶೇಷತೆ. ಬರೀ ಶಬ್ದಗಳೆಂದರೆ ತಪ್ಪಾದೀತು, ಅವರು ಬರೆದ ಕಥೆ, ಚಿತ್ರಕಥೆ, ಸಂವಾದ, ಅವರು ಚಿತ್ರಿಸಿದ ದೃಶ್ಯ ಅವರು ಮಾಡಿದ ಚಲನಚಿತ್ರಗಳು ಇವೆಲ್ಲ ಭಾವನೆಗಳ ಸಾಗರಗಳೇ ಸರಿ. ಹಾಗಾಗಿಯೇ ಅವರು ಅದು ಯಾವಾಗ ಮನದಲ್ಲಿ ಇಳಿದುಬಿಟ್ಟರೋ ಗೊತ್ತಾಗಲೇ ಇಲ್ಲ. ಉರ್ದುಭಾಷೆಯಲ್ಲಿ ಬರೆಯುವಾಗ ಅನೇಕ ಕವಿಗಳಿಗೆ ಕ್ಲಿಷ್ಟವಾದ ಅಲಂಕಾರಿಕ ಶಬ್ದಗಳನ್ನು ಬರೆಯುವುದು ಅನಿವಾರ್ಯವೆನ್ನಿಸಿಬಿಡುತ್ತದೆ. ಆದರೆ ಗುಲ್ಜಾರ್ ಮಾತ್ರ ಇದಕ್ಕೆ ಅಪವಾದ. 'ನನ್ನ ಬರವಣಿಗೆ, ನನ್ನ ಕಲಾಕೃತಿ ಸಾಮಾನ್ಯನಲ್ಲಿಯ ಸಾಮಾನ್ಯನಿಗೂ ತಿಳಿಯಬೇಕು, ನನ್ನ ಶಬ್ದಗಳು ಅವನ ಭಾವನೆಗಳಾಗಬೇಕು' ಇಂಥ ವಿಚಾರಗಳನ್ನಿಟ್ಟುಕೊಂಡು ಸಾಹಿತ್ಯ ರಚಿಸಿದ ಕವಿ ಗುಲ್ಜಾರ್. ಇಷ್ಟೆಲ್ಲ ಯಶಸ್ವಿಯಾದರೂ ಎಂದೂ ಅಹಂಕಾರವನ್ನು ತಮ್ಮತ್ತ ಸುಳಿಯಗೊಡಲೇ ಇಲ್ಲ.

ಸಂಗೀತಕಾರ ಆರ್. ಡಿ. ಬರ್ಮನ್ ಎಂದರೆ ಗುಲ್ಜಾರ್‌ಗೆ ಪ್ರಾಣ. ಒಂದು ಕಾಲದಲ್ಲಿ ಬರ್ಮನ್ ಇಲ್ಲದೆ ಯಾವುದೇ ಹಾಡಿಗೆ ರಾಗಗಳನ್ನು ಹಚ್ಚುವುದು ಸಾಧ್ಯವಿಲ್ಲ ಎನ್ನುವಷ್ಟು ಮನಸ್ಥಿತಿ ತಯಾರಾಗಿತ್ತು. 'ಕಿನಾರಾ' ಚಿತ್ರದಲ್ಲಿಯ 'ಏಕ ಹಿ ಖಾಬ ಕಯಿ ಬಾರ ದೇಖಾ ಹೈ ಮೈನೆ..' ಮತ್ತು 'ಇಜಾಜತ' ಚಿತ್ರದಲ್ಲಿಯ 'ಮೇರಾ ಕುಛ ಸಾಮಾನ ತುಮ್ಹಾರೇ ಪಾಸ ಪಡಾ ಹೈ..' ಹಾಡುಗಳು ಈ ಮಾನಸಿಕತೆಯ ಉತ್ತಮ ಉದಾಹರಣೆಗಳು. 'ತುಮ ಪುಕಾರ ಲೋ ತುಮ್ಹಾರಾ ಇಂತಜಾರ ಹೈ' 'ಓ ಶಾಮ ಕುಛ ಅಜೀಬ ಥಿ..' 'ಕೋಯಿ ಹೋತಾ ಜಿಸಕೋ ಅಪನಾ..' 'ಜಬ ಭಿ ಯೆ ದಿಲ್ ಉದಾಸ ಹೋತಾ ಹೈ..' 'ಮೈನೆ ತೆರೆಲಿಯೇ ಹಿ ಸಾತ ರಂಗ ಕೆ ಸಪನೆ ಚುನೆ..' 'ಓ ಮಾಝಿ ರೇ..' 'ರುಕೆ ರುಕೆಸೇ ಕದಮ..' 'ದಿಲ್ ಢುಂಡತಾ ಹೈ..' 'ತೇರೆ ಬಿನಾ ಜಿಯಾ ಜಾಯೇನಾ..' 'ಥೋಡಾ ಹೈ ಥೋಡೆ ಕಿ ಜರುರತ ಹೈ..' 'ಆನೇವಾಲಾ ಪಲ ಜಾನೇವಾಲಾ ಹೈ..' 'ಸುರಮೈಯಿ ಅಖಿಯೋಂ ಮೆ..' 'ಯಾರಾ ಸಿಲಿ ಸಿಲಿ..' 'ಚಪ್ಪಾ ಚಪ್ಪಾ ಚರಕಾ ಚಲೆ..' 'ಸಪನೋಂ ಮೆ ಮಿಲತಿ ಹೈ..' 'ಸತರಂಗಿರೇ..' 'ಬೀಡಿ ಜಲೈ ಲೇ..' ಮತ್ತು ನಿನ್ನೆಮೊನ್ನೆಯೇ ಸಾಹಿತ್ಯದ ಉತ್ತುಂಗ ಪುರಸ್ಕಾರ ಪಡೆದ 'ಜಯ ಹೋ..' ಇಂತಹ ಅದೆಷ್ಟು ಭಾವನೆಗಳು ಈ ಕವಿಯ ಹೃದಯದಲ್ಲಿವೆ ಯಾರಿಗೆ ಗೊತ್ತು? ಇಂತಹ ಎಲ್ಲ ಹಾಡುಗಳನ್ನು ಬರೆಯುವಾಗ ಅವರ ಬೆನ್ನಹಿಂದಿದ್ದು ಅನುಭವಗಳ ಅನಂತ ಸಾಗರ. ರಾಖಿ ಎಂಬ ಬಟ್ಟಲುಗಣ್ಣಿನ ಸುಂದರಿಯನ್ನು ಹೆಂಡತಿಯಾಗಿ ಪಡೆದ ಗುಲ್ಜಾರ್ ಮತ್ತಷ್ಟು ಸುಂದರ ಗೀತೆಗಳನ್ನು ಬರೆದರು.


ಗುಲ್ಜಾರ್ ಮುಟ್ಟಿದ್ದೆಲ್ಲವು ಚಿನ್ನ. ಬರೆದಿದ್ದೆಲ್ಲವೂ ನವನವೀನ. ತನ್ನ ಲೇಖನಿಯಿಂದ ಸಮಾಜಕ್ಕೆ ಸದಾ ಏನಾದರೊಂದು ಹೊಸದನ್ನು ಕೊಡುವ ಭರಾಟೆಯಲ್ಲಿ ಗುಲ್ಜಾರ್ ಆ ಚಿತ್ರಗಳ ಮೇಲೆಯಾಗಲಿ ಆ ಗೀತೆಗಳ ಮೇಲೆಯಾಗಲಿ ಅನ್ಯಾಯ ಮಾಡಿಲ್ಲ. ವಿಧವಿಧದ ಗೀತೆಗಳನ್ನು ಬರೆದರು. 'ದಿಲ್ ಹುಂ ಹುಂ ಕರೆ..' 'ಸುರಮೈ ಶಾಮ ಕಿಸ ತರಹ ಆಯಿ..' ಇಂತಹ ಶಾಸ್ತ್ರೀಯ ಸಂಗೀತದ ಹಾಡುಗಳಾಗಲಿ ಇಲ್ಲವೇ 'ಲಕಡಿ ಕಿ ಕಾಠಿ.. ಕಾಠಿ ಕಾ ಘೋಡಾ..' 'ಮಮ್ಮಿ ಓ ಮಮ್ಮಿ..' 'ಸುನ ಸುನ ದೀದಿ ತೇರೆ ಲಿಯೇ..' 'ಚಿಕನಿ ಚುಪಡಿ ಚಾಚಿ..' 'ಗೋಲಿ ಮಾರ ಭೇಜೆ ಮೆ..' ಇಂತಹ ವಿಚಿತ್ರ ಭಾವದ ಹಾಡುಗಳನ್ನಾಗಲಿ ಸೈಎನ್ನಿಸಿಕೊಳ್ಳುವಂತೆ ಬರೆದರು. ಅಷ್ಟೇ ಅಲ್ಲದೇ ಗುಲ್ಜಾರ್‌ರ ಲೇಖನಿಯಿಂದ 'ಜಂಗಲ್ ಬುಕ್' ಎಂಬ ಕಾರ್ಟೂನ ಧಾರಾವಾಹಿಯ ಟೈಟಲ್ ಹಾಡು 'ಚಡ್ಡಿ ಪಹನ ಕೆ ಫೂಲ ಖಿಲಾ ಹೈ..' ಮಕ್ಕಳ ಮನಸ್ಸು ಗೆದ್ದ ಹಾಡು ಸಹಜವಾಗಿಯೇ ಹೊಮ್ಮಿದೆ. ಇನ್ನು ಗಜಲ್‌ಗಳ ಬಗ್ಗೆ ಹೇಳಬೇಕೆಂದರೆ ಈ ಕ್ಷೇತ್ರದಲ್ಲಿ ಗುಲ್ಜಾರ್‌ಗೆ ಕೈಹಿಡಿಯುವವರೇ ಇಲ್ಲ. ಗುಲ್ಜಾರ್‌ರ ಶಬ್ದಗಳೊಂದಿಗೆ ಜಗಜೀತ ಸಿಂಗ್‌ರ ಧ್ವನಿ ಸೇರಿದರೆ ರಸದೌತಣವೇ ಸರಿ.

ಬೆಳ್ಳಿಪರದೆಯ ಒಳಿತು ಕೆಡಕುಗಳಿಗೆ ತಲೆಕೆಡಿಸಿಕೊಳ್ಳದೆ ತನ್ನ ಪಾಡಿಗೆ ತಾನು ಬರೆಯುತ್ತ ಸಾಗುವ ಕವಿ ಗುಲ್ಜಾರ್. ಹೆಚ್ಚಿನದನ್ನು ಬಯಸದ ಭಾವಜೀವಿ ಅವರು. ಯಾವುದೇ ವಾತಾವರಣಕ್ಕೂ ತನ್ನನ್ನು ತಾನು ಹೊಂದಿಸಿಕೊಳ್ಳುತ್ತ ತನ್ನ ಕಾವ್ಯಪಯಣ ಮುಂದುವರಿಸಿದ್ದಾರೆ. ಬೆಳ್ಳಿಪರದೆಯ ಜಗಮಗಿಸುವ ಜಗತ್ತಿನಲ್ಲಿಯೂ ಶುಭ್ರ ಜುಬ್ಬಾ ಪಾಯಜಾಮಾ ಅವರ ವೇಷ ಶಾಶ್ವತವಾಗಿಯೇ ಉಳಿದಿದೆ.

ಬರಿ ತನ್ನ ಸಾಹಿತ್ಯವನ್ನಷ್ಟೇ ಜನರಿಗೆ ಮುಟ್ಟಿಸದೇ ಉಳಿದ ಕವಿಗಳನ್ನು ಬೆಳಕಿಗೆ ತರುವ ಮಹತ್ತರವಾದ ಕೆಲಸವನ್ನೂ ಗುಲ್ಜಾರ್ ಮಾಡಿದ್ದಾರೆ. ಅವರ ಪ್ರಯತ್ನದಿಂದಲೇ ಮೀನಾಕುಮಾರಿಯವರು ಬರೆದ ಗಜಲ್‌ಗಳು ರಸಿಕರನ್ನು ಮುಟ್ಟಿದವು. ಮಿರ್ಜಾ ಗಾಲಿಬ್‌ರ ಬಗ್ಗೆ ವಿಶೇಷವಾದ ಆದರ ಗುಲ್ಜಾರ್ ಅವರಿಗಿದೆ. ಮಿರ್ಜಾ ಗಾಲಿಬ್‌ರ ಮೇಲೆ ಚಲನಚಿತ್ರ ಮಾಡಿ ಜನರಿಗೆ ಗಾಲಿಬ್‌ರ ಜೀವನ ದರ್ಶನ ಮಾಡಿಸಿದ ಖ್ಯಾತಿ ಗುಲ್ಜಾರ್ ಅವರಿಗೆ ಸಲ್ಲುತ್ತದೆ.

'ನಾಮ ಗುಮ ಜಾಯೇಗಾ
ಚೆಹರಾ ಯೆ ಬದಲ ಜಾಯೇಗಾ
ಮೇರಿ ಆವಾಜ ಹಿ ಪೆಹಚಾನ ಹೈ
..ಗರ ಯಾದ ರಹೇ..'

ಎಂದು ಬರೆದ ಕವಿಯನ್ನು ಯಾರೂ ಮರೆಯುವುದಿಲ್ಲ. ಇಂಥ ಕವಿಯು ಇನ್ನೂ ಬರೆಯುತ್ತಲೇ ಇರಲಿ. ಅವರ ಕಾವ್ಯ ಓದುವ ಕೇಳುವ ಭಾಗ್ಯ ನಮಗಿರಲಿ ಎನ್ನುವುದೇ ಆಕಾಂಕ್ಷೆ...



• ಗಿರೀಶ ಜಕಾಪುರೆ, ಮೈಂದರ್ಗಿ

ಬಾವಿಗೆ ಬಿದ್ದ ಪಂಡಿತನೂ ಸೂಫಿ ದರ್ವೇಶಿಯೂ


ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'ಬೆಳಿಯಿಂದ ಸೆಡೆತು ಸತ್ತಂತೆ ಬಿದ್ದಿದ್ದ ಹಾವೊಂದನ್ನು ಹಾವಾಡಿಗ ಬ್ಬ ಬಾಗ್ದಾದ್ ನಗರಕ್ಕೆ ತಂದು ಬಿಸಿಲಲ್ಲಿ ಬೀದಿಗೆ ಹಾಕಿದ. ಅದು ತ್ತದೆ ಎಂದೇ ಭಾವಿಸಿದ್ದ ಆತ. ಬಿಸಿಲಿಗೆ ಜೀವ ಚೈತನ್ಯ ಮತ್ತೆ ಉಕ್ಕಿ ವು ಎಲ್ಲರನ್ನೂ ಕಚ್ಚಿ ನಾಶಮಾಡಿತಂತೆ. ಸ್ವತಃ ಮಂಜಸ್ನ ಕಂಡವಳಂತೆ, ಾಗ್ದಾದ್ ಬೀದಿಗಳಲ್ಲಿ ಅಡ್ಡಾಡಿದವಳಂತೆ ದೊಡ್ಡಬಳ್ಳಾಪುರ ಲೂಕ್ ಗಡಿದಾಟದ ಬೂಬಮ್ಮ ಕನ್ನಡವನ್ನು ಮಣಿಸಿ, ಣಿಮಿಂಚಾಗಿಸಿ ಕಥೆ ಹೇಳಿದಳು. ಮಳೆ ನಿಂತಿತು, ಹನಿ ತೊಟ್ಟಿಕ್ಕುತ್ತಿತ್ತು.'- ಇವು ವಿಮರ್ಶಕ ಡಿ.ಆರ್. ಗರಾಜ್ ಅವರು ಪರ್ಷಿಯನ್ ಸೂಫಿ ಕವಿ ಮಿಯನ್ನು ಕನ್ನಡಕ್ಕೆ ಕರೆತರುವಾಗ ಬಾಗ್ದಾದ್‌ನ ಟ್ಟಿಕತೆಯೊಂದು ತಮ್ಮ ಮನೆಬಾಗಿಲಿಗೆ ಬಂದು ತದ್ದನ್ನು ವಿವರಿಸುತ್ತಾ ಅತೀವ ರೋಮಾಂಚನಕ್ಕೆ ಒಳಗಾಗಿ ಳಿರುವ ಮಾತುಗಳು. ನಮ್ಮ ವಚನಗಳಂತೆ, ಜನಪದರ ದಂತೆ ಕಾಲ ದೇಶ ಗಡಿಗಳ ಎಲ್ಲೆಗಳನ್ನು ದಾಟಿ ಸೂಫಿ ನಗಳು ಇಲ್ಲಿ ಹುಟ್ಟಿ ಬೆಳೆದಂತೆ ಸಮ್ಮಾಳದಲ್ಲಿ ಅರಿವಿನ ರುಬಿಟ್ಟಿವೆ.

ಸಾಹಿತ್ಯ, ಮತ್ತು ಚಳವಳಿ ಎರಡರ ನಡುವೆಯೂ ತುದೊಯ್ಯುತಿರುವ ಪ್ರೊ.ಬಿ.ಗಂಗಾಧರಮೂರ್ತಿಯವರು ಕನ್ನಡಕ್ಕೆ ನುವಾದಿಸಿರುವ ಒಂದು ನೂರು 'ಸೂಫಿ' ಕತೆಗಳ 'ಸೂಫಿ




ಕಥಾಲೋಕ' ಫಕೀರರ, ಪ್ರವಾದಿಗಳ ಭಕ್ತಿಯ ದೃಷ್ಟಾಂತಗಳ ಜೊತೆಜೊತೆಗೆ ನಾವು ಕಂಡಿರದ ಝೆನ್, ದರವೇಶಿಗಳ ಜಗತ್ತಿನ ದರ್ಶನ ಮಾಡಿಸುತ್ತದೆ. ಇಡೀ ಕೃತಿ ಎಷ್ಟು ಸೊಗಸಾಗಿ ಕನ್ನಡಕ್ಕೆ ಬಂದಿದೆಯೆಂದರೆ ಇಲ್ಲಿನ ಸೂಫಿಗಳು ಪರಕೀಯರು ಅನ್ನಿಸುವುದೇ ಇಲ್ಲ. ಭಾವಾನುವಾದದಂತೆ ತೋರುತ್ತಲೇ ಇಲ್ಲಿನ ಸೂಫಿ ಕತೆಗಳು ನಮ್ಮ ನಡುವಲ್ಲೇ ನಮಗೆ ಗೋಚರವಾಗದಂತೆ ನಮ್ಮ ಕಣ್ಣೆದುರೆ ನಡೆಯುತ್ತಿರಬಹುದೇ? ಅನ್ನುವ ಪ್ರಶ್ನೆಯನ್ನು ಹುಟ್ಟು ಹಾಕಬಲ್ಲದು. ಜಲಾಲುದ್ದೀನ್ ರೂಮಿಯ ಪುಟ್ಟ ಸೂಫಿ ಕತೆಯೊಂದು ಕೇಳಿಸಿಕೊಂಡಾಗ ಅದು ಅಫ್ಘಾನಿಸ್ತಾನ ದಲ್ಲೋ ಪರ್ಷಿಯಾದಲ್ಲೋ ಹುಟ್ಟಿದ ಕತೆ ಅನ್ನಿಸುವುದಿಲ್ಲ. ಝೆನ್ ರೂಪದಲ್ಲಿ, ಪುಡಿಜೋಕಿನ ರೂಪದಲ್ಲಿ ಈಗಾಗಲೇ ಇದು ನಮ್ಮ ಬದುಕಿನ ಭಾಗವಾಗಿದೆ. ಆ ಕತೆ ಹೀಗಿದೆ: 'ನಾನೊಬ್ಬ ಬಹು ದೊಡ್ಡ ವ್ಯಾಕರಣ ಪಂಡಿತ. ದುರದೃಷ್ಟವಶಾತ್ ಈ ಬಾವಿಗೆ ಬಿದ್ದುಬಿಟ್ಟಿದ್ದೇನೆ. ದಾರಿ ಕಾಣಿಸಲಿಲ್ಲ. ಇಲ್ಲಿಂದ ಮೇಲೆ ಬರುವುದು ಸಾಧ್ಯವಿಲ್ಲದಂತಾಗಿದೆ' ಎಂದಿತು ಒಂದು ಧ್ವನಿ ಬಾವಿಯ ಆಳದಿಂದ. 'ಗೆಳೆಯಾ, ಹಗ್ಗ ಏಣಿ ತರ್ತೀನಿ' ಎಂದ ದರ್ವೇಶಿ. 'ನಿನ್ನ ಭಾಷೆಯು ಅಶುದ್ಧ ವ್ಯಾಕರಣ ದೋಷಪೂರ್ಣ. ಮೊದಲು ಅವನ್ನು ಪರಿಷ್ಕರಿಸಿಕೋ' ಎಂದರು ಪಂಡಿತರು ಬಾವಿಯ ತಳದಿಂದ. 'ನಾನು ಹೋಗಿ ವ್ಯಾಕರಣ ಕಲಿತ್ಕೊಂಡು ಬರ್ತೀನಿ. ಅಲ್ಲೀವರ್‍ಗೂ ನೀನು ಇಲ್ಲೆ ಬಿದ್ದಿರು' ಎಂದು ಹೇಳಿದ ದರ್ವೇಶಿಯು ತನ್ನ ದಾರಿ ಹಿಡಿದು ಮುಂದೆ ಸಾಗಿದ. -ಹೀಗೆ ಬದುಕಿನ ತುರ್ತಿನ ಪ್ರಶ್ನೆಗಿಂತ ಮುಖ್ಯವಾಗಿ ವ್ಯಾಕರಣ ಶುದ್ಧತೆಯೇ ಬಹುಮುಖ್ಯವೆಂದು ಆ ಪಂಡಿತರಿಗಾದರೂ ಏಕನ್ನಿಸಿತೊ ಗೊತ್ತಿಲ್ಲ. ಬಾವಿಗೆ ಬಿದ್ದ ಪಂಡಿತನಂತೆ ಹೊಟ್ಟೆಪಾಡಿಗಿಂತಲೂ 'ಸಂಸ್ಕೃತ'ವೇ ಈ ದೇಶದ ಪಂಡಿತೋತ್ತಮರ ಮೊದಲ ಆಯ್ಕೆಯಾಗಿರುವುದು ಕೂಡ ಅವರ ಪತನದ ಹಾದಿಗೆ ಹಿಡಿದ ಕನ್ನಡಿಯಂತಿದೆ. ಇಂಥ ಹತ್ತಾರು ಅಪರೂಪದ ಕಥನಗಳನ್ನು ಕಾಣಲು ಈ ಕೃತಿಯನ್ನು ಒಮ್ಮೆ ಓದಲೇಬೇಕು.

ಸೂಫಿ ಕಥಾಲೋಕ

ಕನ್ನಡಕ್ಕೆ: ಪ್ರೊ.ಬಿ.ಗಂಗಾಧರಮೂರ್ತಿ
ಪ್ರಕಾಶಕರು: ಚಿಂತನ ಪುಸ್ತಕ, ನಂ.1863,
38ನೇ ಕ್ರಾಸ್, 11ನೇ ಮುಖ್ಯರಸ್ತೆ
4ನೇ 'ಟ' ಬ್ಲಾಕ್, ಜಯನಗರ, ಬೆಂಗಳೂರು-41
ಪುಟಗಳು: 312, ಬೆಲೆ: ರೂ.140, ಪ್ರಕಟಣೆ:2008

ಲೋಕಾಯುಕ್ತರ ವರದಿಯನ್ನು ಪುಸ್ತಕವಾಗಿ ಪ್ರಕಟಿಸಿದಾಗ...



ಲಂಕೇಶ್ ಬಳಗದ ಪ್ರಯತ್ನಕ್ಕೆ ಜನಸಾಮಾನ್ಯರು ಶಭಾಷ್ ಎಂದಿದ್ದಾರೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ತನಿಖಾ ವರದಿಯನ್ನು ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಜುಲೈ 27ರ ಬುಧವಾರ ಮಧ್ಯಾಹ್ನ ಸರ್ಕಾರಕ್ಕೆ ಸಲ್ಲಿಸಿದರು.



ಅದರ ಮರುದಿನವೇ ವರದಿಯ ಪ್ರತಿಯೊಂದನ್ನು ಏನೇನೋ ಸರ್ಕಸ್ ಮಾಡಿ ಪಡೆದುಕೊಂಡ ನಮ್ಮ ತಂಡ ಅದೇ ತನಿಖಾ ವರದಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕೇವಲ ಮೂರೇ ದಿನದಲ್ಲಿ ಈ ವರದಿಯನ್ನು ರಾಜ್ಯದ ಜನಸಾಮಾನ್ಯರ ಕೈಗೆ ತಲುಪಿಸಲು ಸಾಧ್ಯವಾಗಿದ್ದು ನಮ್ಮ ತಂಡದ ಕ್ಯಾಪ್ಟನ್ ಗೌರಿ ಲಂಕೇಶ್, ಶಿವಮೂರ್ತಿ, ಗಿರೀಶ್ ಹಾಗೂ ಅರುಣ್‌ರ ಶ್ರಮದಿಂದ.

ಮೊನ್ನೆ ಆಗಸ್ಟ್ 2ರಂದು ಬೆಳಗ್ಗೆ ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಜನವೋ ಜನ. ಲೋಕಾಯುಕ್ತರ ತನಿಖಾ ವರದಿಯ ಪುಸ್ತಕವನ್ನು ರಸ್ತೆ ಬದಿಯಲ್ಲಿ ಬಿಡುಗಡೆ ಮಾಡಲು ನಮ್ಮ ತಂಡ ನಿರ್ಧರಿಸಿತ್ತು. ಪುಸ್ತಕದ ಬಂಡಲ್‌ಗಳೊಂದಿಗೆ ನಾವಲ್ಲಿಗೆ ಹೋದ ತಕ್ಷಣ ಜನ ಮುತ್ತಿಕೊಂಡರು. ಹಿರಿಯ ಒಡನಾಡಿಗಳಾದ ಎಚ್.ಎಸ್.ದೊರೆಸ್ವಾಮಿ ಹಾಗೂ ನಗರಿ ಬಾಬಯ್ಯ ಪುಸ್ತಕದ ಬಿಡುಗಡೆ ಮಾಡಿ ಮಾತನಾಡಿದರು. ಕೇವಲ ಅರ್ಧ ಗಂಟೆಯಲ್ಲೇ ನೂರಾರು ಪ್ರತಿ ಖರ್ಚಾದವು.



ನಾವೀ ಪ್ರಯತ್ನಕ್ಕೆ ಕೈಹಾಕಲು ಕಾರಣವಿಷ್ಟೆ...

ಸಾಮಾನ್ಯವಾಗಿ ಯಾವುದೇ ತನಿಖಾ ಆಯೋಗದ ವರದಿಗಳು ಜನಸಾಮಾನ್ಯರ ಕೈಗೆ ಸಿಗುವುದೇ ಇಲ್ಲ. ಜಾತಿ ದೌರ್ಜನ್ಯ, ಗೋಲಿಬಾರ್, ಭ್ರಷ್ಟಾಚಾರದ ಹಗರಣಗಳ ಬಗ್ಗೆ ಬರಿ ಕರ್ನಾಟಕದಲ್ಲೇ ಡಜನ್‌ಗಟ್ಟಲೇ ತನಿಖಾ ಆಯೋಗಗಳು ರಚನೆಯಾಗಿವೆ. ರಿಪೋರ್ಟ್‌ಗಳು ತಯಾರಾಗಿ ಸಲ್ಲಿಕೆಯಾಗಿವೆ. ಅಲ್ಲಿಂದಾಚೆಗೆ ಅಂತ ರಿಪೋರ್ಟ್ ಹಾಗೂ ಅದಕ್ಕೆ ಸಂಬಂಧಿಸಿದ ಇಷ್ಯೂಗಳೂ ಸತ್ತು ಹೋಗಿ ಬಿಡುತ್ತವೆ.

ಲೋಕಾಯುಕ್ತರ ತನಿಖಾ ವರದಿಗೂ ಅಂತ ಗತಿ ಬರುವ ಸಾಧ್ಯತೆ ಇದ್ದೇ ಇದೆ. ಆದರೆ ಈ ಬಾರಿ ಹಾಗಾಗಲು ಬಿಡಕೂಡದೆಂದು ನಮ್ಮ ತಂಡ ತೀರ್ಮಾನಿಸಿತ್ತು. ಕರ್ನಾಟಕ ರಾಜ್ಯದಲ್ಲಿ ಏನೇನು ಅನ್ಯಾಯ ಅನಾಹುತಗಳಾಗುತ್ತವೆ ಎಂಬುದು, ರಾಜಕಾರಣಿಗಳ ವೇಷದಲ್ಲಿರುವ ಡಕಾಯಿತರು ಏನೆಲ್ಲಾ ಲೂಟಿ ನಡೆಸುತ್ತಾರೆಂಬುದು ಎಲ್ಲರಿಗೂ ಗೊತ್ತಾಗಬೇಕೆಂದರೆ ಈ ವರದಿಯನ್ನು ಜನಸಾಮಾನ್ಯರ ಕೈಗೂ ತಲುಪಿಸಬೇಕೆಂಬುದು ನಮ್ಮ ಗುರಿಯಾಗಿತ್ತು.

ಇದು ನಮ್ಮೆಲ್ಲರ ರಾಜಕೀಯ ಜವಾಬ್ದಾರಿ ಹಾಗೂ ಪ್ರಜಾಸತ್ತಾತ್ಮಕ ಹಕ್ಕೂ ಆಗಿದೆಯಲ್ಲವೇ?

ಅವತ್ತು,

ಸಿನಿಮಾಗೆ ಹೊರಟಿದ್ದ ಕಾಲೇಜು ಹುಡುಗರ ಗುಂಪೊಂದು ಅಲ್ಲಿಗೆ ಬಂತು. ಕೆಲಹೊತ್ತು ಭಾಷಣ ಕೇಳಿದ ಬಳಿಕ ತಮ್ಮತಮ್ಮಲ್ಲೇ ಚರ್ಚಿಸಿಕೊಂಡು ಬಂದು ಒಂದು ಪುಸ್ತಕ ಕೊಂಡರು. ನಿವೃತ್ತ ವೃದ್ಧರೊಬ್ಬರು ಒಂದು ಪ್ರತಿ ಖರೀದಿಸಿ ಹತ್ತು ನಿಮಿಷಗಳ ಭಾಷಣವನ್ನು ಮಾಡಿದರು. ಪುಟ್ಟ ಮಗನೊಂದಿಗೆ ಶಾಲಾ ಪುಸ್ತಕ ಕೊಳ್ಳಲು ಅವೆನ್ಯೂ ರೋಡಿಗೆ ಬಂದಿದ್ದ ಗೃಹಿಣಿಯೊಬ್ಬರು ಭಾಷಣ ಕೇಳಿಸಿಕೊಳ್ಳುತ್ತಾ ಅರ್ಧ ಗಂಟೆ ರಸ್ತೆಯಲ್ಲೇ ನಿಂತು, ಕೊನೆಗೆ ತಾವೂ ಒಂದು ಪುಸ್ತಕ ತೆಗೆದುಕೊಂಡರು.


ನಾವು ಯಾವ ಕಾರಣಕ್ಕೂ ಭರವಸೆ, ಆಶಾಭಾವನೆ ಕಳೆದುಕೊಳ್ಳುವ ಅಗತ್ಯವಿಲ್ಲವೆಂಬುದನ್ನು ಇವೆಲ್ಲ ತೋರಿಸಿಕೊಡುತ್ತಿವೆ.

ಬಿಜೆಪಿಯ ಖದೀಮರ ಗುಂಪು ಲೋಕಾಯುಕ್ತರ ವರದಿಯನ್ನು ಕೊಲ್ಲಲು ಈಗಾಗಲೇ ರೆಡಿಯಾಗುತ್ತಿವೆ.

ಲಂಕೇಶ್ ಬಳಗ ಅದೇ ವರದಿಯನ್ನು ಜನಸಾಮಾನ್ಯರ ಕೈಗೆ ತಲುಪಿಸುತ್ತಿದೆ.


ಹೀಗೂ ನಡೆಯಲಿ ಬಿಡಿ ಒಂದು ಕದನ.

ಕಿರಂ ಕುರಿತ ಪುಸ್ತಕ 'ನಿಜದ ನಾಡೋಜ' ಬಿಡುಗಡೆ



ನಮ್ಮೆಲ್ಲರ ನೆಚ್ಚಿನ ಮೇಷ್ಟ್ರು, ವಿದ್ವಾಂಸ ಕಿ.ರಂ. ನಾಗರಾಜ ತೀರಿಕೊಂಡು ಇಲ್ಲಿಗೆ ಒಂದು ವರ್ಷವಾಗುತ್ತಿದೆ. ಇದೇ ಸಂದರ್ಭದಲ್ಲಿ ಗೆಳೆಯ ಪ್ರದೀಪ್ ಎಲ್. ಮಾಲ್ಗುಡಿ ಕಿರಂ ಕುರಿತಂತೆ 'ನಿಜದ ನಾಡೋಜ' ಎಂಬ ಕೃತಿ ಸಂಪಾದಿಸಿ ಬಿಡುಗಡೆ ಮಾಡುತ್ತಿದ್ದಾರೆ. ಇದರಲ್ಲಿ ಕಿರಂ ಭಾಷಣಗಳು, ಅಲ್ಲಲ್ಲಿ ಬರೆದಿದ್ದ ಬಿಡಿ ಲೇಖನಗಳು ಹಾಗೂ ಕಿರಂರನ್ನು ಕಂಡವರು ಬರೆದಿರುವ ಲೇಖನಗಳೆಲ್ಲಾ ಸೇರಿವೆ. ನಾವು ಕಳೆದುಕೊಂಡ ದೊಡ್ಡ ವ್ಯಕ್ತಿಗಳ ನೆನಪನ್ನು ಹಸಿರಾಗಿಡಲು, ಗೌರವ ತೋರಿಸಲು ಈ ತರದ ಪುಸ್ತಕಗಳ ಅಗತ್ಯ ಖಂಡಿತಾ ಇದೆ. 'ನಿಜದ ನಾಡೋಜ' ಆಗಸ್ಟ್ 6ರ ಶನಿವಾರ ಬೆಳಗ್ಗೆ 10-30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಬಿಡುಗಡೆಯಾಗುತ್ತಿದೆ.

ಇದೇ ಸಂದರ್ಭದಲ್ಲಿ ಒಂದು ಬೇಸರದ ವಿಚಾರವನ್ನೂ ಹೇಳಬೇಕು. ಪ್ರೊ.ಕೆ.ರಾಮದಾಸ್ ತೀರಿಕೊಂಡು ಇಲ್ಲಿಗೆ ನಾಲ್ಕು ವರ್ಷವಾಯಿತು. ತಮ್ಮ ಜೀವನದುದ್ದಕ್ಕೂ ಜನಪರ ಕಾಳಜಿಗಳನ್ನಿಟ್ಟುಕೊಂಡೇ ಬದುಕಿ ಹೋದ ರಾಮದಾಸ್ ಕುರಿತಂತೆ ಇದುವರೆಗೂ ಒಂದು ಪುಸ್ತಕವೂ ಬರಲಿಲ್ಲ. ಬಹಳ ಹಿಂದೆ ನಾವು ಆ ಪ್ರಯತ್ನ ಶುರುಮಾಡಿದಾಗ ಕೆಲವು ಅಡೆತಡೆಗಳಾದವು. ನಾವು ಸುಮ್ಮನಾದೆವು. ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ ಈಗ ಕಿರಂ... ಇವರೆಲ್ಲರನ್ನೂ ನಾವು ಹೇಗೆ ಪ್ರೀತಿ, ಗೌರವದಿಂದ ಸ್ಮರಿಸುತ್ತೇವೋ ಅದೆಲ್ಲ ರಾಮದಾಸರಿಗೂ ಸಲ್ಲಬೇಕಲ್ಲವೇ?






ರಾಜಕೀಯದ ಕೆಲವು ಕ್ಷಣಗಳು

ಅಮಾವಾಸೆಯ ಹೆಣವನ್ನು
ಅಪ್ಪಿಕೊಂಡು ಗೊಳೋ ಎಂದು
ಅಳುತ್ತಿದ್ದಾನೆ ಮಂತ್ರಿ-
'ಬದುಕಿಸು ನನ್ನ, ಬದುಕಿಸು ನನ್ನ'
ಅಮಾವಾಸೆಯ ಹೆಣ ಸುಡಲು
ಬೀರಿದ ಮುಂಜಾನೆ ಕಿರಣಗಳು
ಅಧಿಕೃತ ಆದೇಶಕ್ಕಾಗಿ ಕಾದು ಕುಳಿತು,
ಬೆಚ್ಚಗಾಗಿವೆ ವಿಧಾನಸೌಧದ ಮೆಟ್ಟಿಲುಗಳು!
ನೆತ್ತಿಮೇಲೆ ಬಿಸಿಲೇರಿದರೂ
ಮುಂದಿನ ಹೆಜ್ಜೆ ಇಡಲು
ನಕ್ಷತ್ರಗಳನ್ನು ಹುಡುಕುತ್ತಿರುವ
ಜ್ಯೋತಿಷಿಯ ಬೊಕ್ಕ ತಲೆ ಮೇಲೆ
ಸೂರ್ಯ ಬೆಂಕಿ ಉಗುಳುತ್ತಿದ್ದಾನೆ!
ಕತ್ತಲ ಅನುಯಾಯಿಗಳಿಗೆ
ಜಾಣಕುರುಡು!
ನೆರಳು ನೆಂಟರು ಕೆಲವರು
ಬಿಳಿಯುಟ್ಟು
ಕಳ್ಳದಾರಿಯಲ್ಲಿ ಒಳನುಸುಳಿದ್ದಾರೆ
ಅಮಾವಾಸೆಯ ಹೆಣ ನೋಡಲು!
ಅಮಾವಾಸೆಯ ಹೆಣ
ಕೊಳೆತು ನಾರುವ ಮುಂಚೆ
ಏನಾದರೂ ಮಾಡುವಂತೆ
ಅಡ್ಡ ಗೋಡೆಯ ಮೇಲೆ
ದೀಪ ಉರಿಸುವವರ ಮನವಿ.
'ಹಣಕಂಡರೆ ಹೆಣವೂ ಬಾಯಿಬಿಡುವುದು'
ಗಾದೆಯನ್ನು ತಿರುಚಿದವರು,
ಬಾಯ್ತೆರೆಯದಿರಲು
ಕಂತೆ ಕಂತೆ ಕಪ್ಪು ಹಣವನ್ನು
ಸುರಿಯುತ್ತಿದ್ದಾರೆ
ಅಮಾವಾಸೆಯ ಹೆಣದ ಮೇಲೆ!
ಏನಾಗಬಹುದು ಮುಂದೆ?
ರೆಪ್ಪೆಗಳನ್ನು ಮರೆತು
ನೋಡುತ್ತಿದೆ ಜನಜಂಗುಳಿ
ಮಿಂಚುವ ಕೆಮರಾಗಳಿಗೆ ಹೆದರಿ
ಅಥವಾ,
ನೆರಳು ನೆಂಟರನ್ನು ಧಿಕ್ಕರಿಸಿ
ಅಮಾವಾಸೆಯ ಹೆಣ
ತಾನೇ ಹೊತ್ತಿ ಉರಿಯಬಹುದೇ?

• ವಿಲ್ಸನ್, ಕಟೀಲ

ಣಿ ದೂಳಿಂದ ಬಂದಿದ್ದೋರು ಅದರಲ್ಲೇ ಹೋದರಲ್ಲಾ ಇದಕೇನೇಳ್ತಿ

ಳ್ಳಿ ಗಾಳಿ ಬೀಸುತ್ತಿತ್ತು. ಅದು ಯಾವ ಕಡೆ ಲೂ ಮಳೆ ತರುವ ಗಾಳಿಯಾಗಿರಲಿಲ್ಲ. ಕಾಳಮಾವ ಸುಗೊಂಡಿದ್ದ. ರಾಜಕಾರಣದ ವಿಷಯ ಅವನಿಗೆ ಲ್ಲ. ಏಕೆಂದರೆ ಕೌರವನ ನಂತರದ ಪುರಾಣದಂತೆ ದನ ಆಯ್ಕೆ ಬಗ್ಗೆ ಅವನಿಗ್ಯಾವ ಕುತೂಹಲವೂ . ಅಲ್ಲಿಗೆ ದಿಢೀರನೆ ನುಗ್ಗಿದ ವಾಟಿಸ್ಸೆ.



ಣೇನೇ ಸಲಹಿದಾ ಗಣೀ, ನಿನ್ನಾ ಮೆಚ್ಚಿನಾ ಗಣೀ, ಮ ತೋಡಿತಲ್ಲೊ, ಸಮಾಧಿ ಮಾಡಿತಲ್ಲೋ" ಎಂದು ನಿಯಲ್ಲಿ ಹಾಡಿ

ಮಂಗದ್ಯಕ್ಕ "ಸಾಂಗು?" ಎಂದ.

ತನಾಗ್ಯದೆ ಕಂಡ್ಯ. ಆ ಇದರದಲವೇನ್ಲ ಇದು" ೦ ಜುಮ್ಮಿ.

ಮಾನಸ ಸರೋವರ ಸಿನುಮದಲ್ಲಿ ಪುಟ್ಟಣ್ಣ ತನಿಗಾಗೇ ಂಡಿದ್ದ ಹಾಡುಕಣಕ್ಕ ಇದು. ಸೂಟಿಂಗೂ ಗಣಿ ಲ್ಲೇ ಆಗಿತ್ತು. ಈಗ ಎಡೂರಪ್ಪನಿಗೆ ಭಾಳ ಚನ್ನಾಗಿ ಟ್ಯಾಯ್ತಾ ಅದೆ. ಇನ್ನು ಮುಂದಕೆ ಯಂಗದೆ ಅಂತೀ? ಅರಳಿ, ಕೆಸರಾಗಿ ಕೆರಳಿ, ಕುರ್ಚಿಯ ಎಳೆಯಿತಲ್ಲೊ ಪ್ರಾಣಾವ ಹಿಂಡಿತಲ್ಲೋ, 'ಯಡ್ಡಿ ನಗುವನ್ನೆ ಲ್ಲೊ' ಬ್ಯೂಟಿಫುಲ್ ಸಾಂಗ್. ಇಲ್ಲಿ ಕೇಳಿಸಿಕೊ "

ದೇನೇಳ್ಳ ಕೇಳ್ತಾಯಿದ್ದಿನಿ."

ಯಾವ ಗಣಿ ಹಣದಿಂದ ಇವುರು ಸರಕಾರ ಮ್ರೊ, ಅದೇ ಗಣಿ ಹಣ ಯಡೂರಪ್ಪನ ಟೀಮ ಕಳುಸ್ತಲ್ಲ ಇದಕೇನೇಳ್ತೀ?"

ಳ್ಳನೆಡ್ತಿ ಯಾವತ್ತಿದ್ರೂ ಮುಂಡೆ ಅಲವೇನ್ಲ."

ದೇನೊ ನಿಜ. ಆದ್ರೆ ಎಡೂರಪ್ಪನಿಗೆ ಹೆಡತಿಯಿಲ್ಲ." ೦ ಜುಮ್ಮಿ.

ಲ್ಲಿದ್ರೇನಾಯ್ತೇ. ಶೋಬಾ ಯಂಗಳತಿದ್ಲು ಗೊತ್ತೆ?" ಉಗ್ರಿ.

ಅದಕಿಂತ್ಲೂ ಉಗ್ರಿ, ಎಡೂರಪ್ಪ ರಾಜ್ಯಪಾಲ್ರಿಗೆ ನಾಮೆ ಕೊಡಕ್ಕೆ ಅಂತ ವಂಟಾಗ ಸಿಚುಯೇಷನ್ ತ್ತು ಗೊತ್ತಾ?"

ನಮಿಗೇನು ಗೊತ್ತು. ನೀನೆ ಹೇಳಬೇಕಪ್ಪ."

ಟ್ಟಿ ಮುಂದಿರೊ ಡೆಡ್‌ಬಾಡಿಯ ಚಟ್ಟದ ಸಮೇತ ತ್ತಿದಾಗ ಇದ್ದಕ್ಕಿದ್ದಂಗೆ ಸಂಬಂಧಿಕರಿಂದ ಅಳ ಳತದಲ್ಲಾ, ಅಂಗಿತ್ತಂತೆ ಎಡೂರಪ್ಪ ಮನೆ ಒಳಾಯ."

ಾರದಿಲವೇನೊ? ಇಷ್ಟು ದಿನ ಯಡೂರಪ್ಪನ ಕರು ತಿಂದು ತೇಗುತ್ತಾಯಿದ್ರು. ಈಗ ಮುಖ್ಯಮಂತ್ರಿ ಖಾಲಿ ಮಾಡಬೇಕು. ಆಳು ಕಾಳು ಇರದಿಲ್ಲ. ಲ್ಲ ನ್ಯನಿಸಿಗಂಡು ಅತ್ತಿರತರೆ."

"ಅದಕಿಂತ್ಲೂ ಉಗ್ರಿ, ಎಡೂರಪ್ಪ ಮಕ್ಕಳನೂ ಥೇಟ್ ತನ್ನ ತರನೇ ತಯಾರು ಮಾಡ್ಯವ್ರುನೆ ಕಣೊ. ಒಬ್ಬ ಮಗಳು ಮಾತ್ರ ಎಡೂರಪ್ಪ ರಾಜ್ಯಪಾಲನಿಗೆ ರಾಜೀನಾಮೆ ಕೊಡಕ್ಕೆ ಅಂತ ಹೋದದ್ದ ನೋಡಿ ಗಾಂಧಿ ಮಾತ್ಮನ್ನ ನೋಡಿದಂಗಾಯ್ತು ಅಂದವ್ರುಳೆ."

"ಅದಪ್ಪ ಹೋಲಿಕೆ ಅಂದ್ರೆ. ಅಲ್ಲಾ ಎಡೂರಪ್ಪ ಅವ್ರುಳಿಗೆ ಗಾಂಧಿ ಮಾತ್ಮನಂಗೆ ಕಂಡಿರಬೇಕಾದ್ರೆ ಅವಳು ದೃಷ್ಟಿಯಂಗಿರಬೇಕು, ತಲೆಯಂಗಿರಬೇಕು ಲ್ಯಕ್ಕ ಹಾಕು."

"ಅವ್ರುಳ್ಯಾರ್ಲ ಅಂಗಂದೋಳು?" ಎಂದ ಸೀರ.

"ಎಡೂರಪ್ಪನ ಮಗಳು ಚಿಗಪ್ಪ, ಶಿವಮೊಗ್ಗದಲ್ಲಿ ಪೇಪರ್‌ನೋರಿಗೆ ಅಂತ ನಾಕು ಸೈಟ್ ಅಲಾಟ ಮಾಡಿಸಿ, ಕಡಿಗೆ ತನ್ನೆಸರಿಗೇ ಬರಿಸಿಗಂಡಿದ್ದಳಂತೆ. ಆ ಹೆಣ್ಣು ಮಗಳಿಗೆ ಎಡೂರಪ್ಪ ಗಾಂಧಿಮಾತ್ಮನಂಗೆ ಕಾಣಸಬೇಕಾದ್ರೆ ಈಶ್ವರಪ್ಪನೆ ವಲ್ಲಬಾಯಿ ಪಟೇಲ, ಶೆಟ್ಟರ್ ನೆಹರು ತರ ಕಂಡಿರಬೇಕು."

"ಯಾರು ಅಳ್ಯಾಡಸಕ್ಯಾಗದೆಯಿರೊ ಎಡೂರಪ್ಪನ್ನ ಇದ್ದಕಿದ್ದಂಗೆ ಯಂಗೆ ತಗದರ್ಲ?" ಎಂದು ಕಾಳಮಾವ ಬಾಯಿಬಿಟ್ಟ.

"ಅದೊಂದು ಮೂರೊರ್ಸದ ಕತೆ ದ್ವಡಪ್ಪ. ಬ್ರೀಪಾಗೇಳ್ತಿನಿ. ನೋಡು ಈ ಎಡೂರಪ್ಪ ಗೆದ್ದು ಸರ್ಕಾರ ಮಾಡಬೇಕಾದ್ರೆ ಗಣಿ ಕಳ್ಳರಾದ ರೆಡ್ಡಿಗಳು ಹಣ ಸಪ್ಲೈ ಮಾಡಿದ್ರು. ಎಡೂರಪ್ಪ ಈಸಗಂಡ. ಕಾಂಗ್ರೆಸ್ನು ಜೆಡಿಎಸ್ನಿಂದ ಗೆದ್ದಿರೊ ನಾಮರ್ದರಿಗ್ಯಲ್ಲ ದುಡ್ಡು ಕೊಟ್ಟು, ರಾಜೀನಾಮೆ ಕೊಡಿಸಿ, ತಿರಗ ಗೆಲ್ಲಿಸಿ ಬಿಜೆಪಿ ಬಲ ಮಾಡಿಕಂಡು. ಹೆಚ್ಚುಕಮ್ಮಿ ಬಳ್ಳಾರಿ ಜಿಲ್ಲೆಯ ರೆಡ್ಡಿಗಳಿಗೆ ಬರದ ಕೊಟ್ಟುಬುಟ್ಟ. ಆ ಮುಂಡೆ ಮಕ್ಕಳು ಅದ್ನೆ ತಮ್ಮ ಸಾಂರಾಜ್ಯ ಮಾಡಿಕಂಡು ಭಗದ್ರೂ ಭಗದ್ರೂ ಅಂದ್ರೇ ಭೂದೇವಿ ಬೆನ್ನು ಮೂಳೆ ಕಾಣಗಂಟ ಭಗದಾಕಿದ್ರು ದ್ವಡಪ್ಪ."

"ಮದ್ಲೆ ಡಕಾತಿ ನನಮಕ್ಕಳವೇನ್ಲ, ಭಗಿತರೆ."

"ಇದರ ಬಗ್ಗೆ ವಿಧಾನಸಭೆಲಿ ಗಲಾಟಿ ಹತ್ತಿಗತ್ತು ದ್ವಡಪ್ಪ ಎಡೂರಪ್ಪನೂ ಯಾವುದೊ ಸಿಟ್ಟಿನ ಬರದಲ್ಲಿ ಲೋಕಾಯುಕ್ತರು ತನಿಖೆ ಮಾಡ್ಲಿ ಅಂತ ಒಪ್ಪಿಸಿಬುಟ್ಟ. ಅತ್ತಗೆ ಅವುನ ಗಾಚಾರಕೆ ಸಂತೋಷ್ ಹೆಗ್ಡೆ ಲೋಕಾಯುಕ್ತರಾಗಿದ್ರು."

"ಅವುನ್ಯಾರೊ ಯಕಟಾಚಲ ಅಂತ ಇದ್ದ ಅಲವೆ."

"ಅವುನು ತೀರೋದ ಮ್ಯಾಲೆ ಸಂತೋಶ್ಯಗಡೆ ಬಂದ್ರು."

"ತೀರೋಗಿಲ್ಲ ಕಣೊ ಅವುನೆ."


"ಇರ್ಲಿ ಬುಡೊ ಉಗ್ರಿ. ನನಿಗೆ ನಿನಿಗೆ ಅವುನಿಂದ ಆಗಿರೊ ತೊಂದ್ರೆ ಏನೊ? ಲೋಕಾಯುಕ್ತ ಆಗಿದ್ದೋನು ಬಿಜೆಪಿಲವ್ರುನೆ ಅಂದ್ರೆ ಅವುನು ದಿವಂಗತ ಅಂತ್ಲೆ ನನ್ನ ಲೆಕ್ಕ."

"ಇರ್ಲಿ ಹೇಳಪ್ಪ. ಆದ್ರೂ ಇರೊ ವ್ಯಕ್ತಿಯ ಸತ್ತ ಅನ್ನಬಾರ್ದು."

"o.k ಸಂತೋಷ್ಯಗಡೆ ಅಂದ್ರೆ ಯಾರು ಅಂತ ತಿಳಕಂಡಿದ್ದಿ ದ್ವಡಪ್ಪ. ಆಗ ಇಂದ್ರಾಗಾಂಧಿ ಯಮರ್ಜೆನ್ಸಿ ಆದಮ್ಯಾಲೆ ಯಲಕ್ಷನ್ ಮಾಡಿದ್ಲಲ್ಲ, ಆದರಲ್ಲಿ ಇಡೀ ಕರ್ನಾಟಕದಿಂದ ಜನತಾಪಾರ್ಟಿ ಕ್ಯಾಂಡೇಟ್ ಗೆದ್ದೊದ್ರು ಇಬ್ಬರು. ಅದ್ರಲ್ಲೊಬ್ರು ಕೆ.ಎಸ್. ಹೆಗಡೆ ಅಂತ. ಇದೇ ಸಂತೋಷ್ ಹೆಗ್ಡೆ ತಂದೆ. ಇನ್ನೊಬ್ಬ ಹಾಸನದ ನಂಜೇಶ್‌ಗೌಡ. ನಂಜೇಶ್ ಗೌಡ ಯಾಕೆ ಗೆದ್ದ ಅಂದ್ರೆ ಅವುನೆದ್ರಿಗೆ ನಿಂತಿದ್ದ ನಲ್ಲೂರೆ ಗೌಡ ದಾಸಗೌಡ. ಅದಕೆ ಸೋತ. ಆದ್ರೆ ಕೆ.ಎಸ್. ಹೆಗಡೆ ಸ್ವಂತ ಶಗತಿಮ್ಯಾಲೆ ಗೆದ್ರು. ಅದೇ ತರ ಈ ಸಂತೋಷ್ ಹೆಗ್ಡೆ ಸ್ವಂತ ಬುದ್ಧಿ ಸ್ವಂತ ಶಕ್ತಿ ಸಾಮಾನ್ಯರ ಬಗ್ಗೆ ಕಾಳಜಿ ಇದ್ದೊರು. ಸುಪ್ರೀಂಕೋರ್ಟ್ ಜಡಜಾಗಿದ್ದೊರು. ಅಂಥೋರ ಕೈಗೆ ಈ ಡಕಾಯಿತ್ರ ಸಿಗಾಯ್ಕಂಡ್ರು."

"ಡಕಾಯಿತ್ರಂದ್ರೆ ಅವುರ್ಯಾರ್ಲ?"

"ಇದೇನಕ್ಕ ಹಿಂಕೇಳ್ತೀ. ಥ್ರೀ ರೆಡ್ಡೀಸ್, ರಾಮುಲು ಅಂಡ್ ಯಡ್ಡೀ ಕಣಕ್ಕ. ಈ ಕಳ್ರು ಗಣಿ ಲೂಟ ಮಾಡಿರದ ಪತ್ತೆಹಚ್ಚಿ, ಅವುರ ಜೊತೆಗೆ ಸೇರಿರೊ ಅಧಿಕಾರಿಗಳು, ಪುಡಿ ರಾಜಕಾರಣಿಗಳನ್ಯಲ್ಲ ಸೋಸಿ, ಇವುರು ಇಷ್ಟಿಷ್ಟು ತಿಂದವುರೆ, ವಸೂಲು ಮಾಡಿ ಶಿಕ್ಷೆ ಕೊಡಿ ಅಂತ ವರದಿ ಕೊಟ್ರು ದ್ವಡಪ್ಪಾ, ಆ ವರದಿವಳಗಡೆ ಈ ರಾಜ್ಯದ ಮುಖ್ಯಮಂತ್ರಿ ಯಡೂರಪ್ಪನೂ ಸೇರಿ ಕಂಡವುನೆ. ಎಡೂರಪ್ಪನ ಹೆಸರು ಬರದಂಗೆ ಮಾಡಕ್ಕೆ ಏನೇನೊ ಮಾಡಿದ್ರು. ಸಂತೋಷ್ ಹೆಗ್ಡೆ ಬಗ್ಗಲಿಲ್ಲ. ವರದಿ ತಯಾರಿಸಿ ರಾಜ್ಯಪಾಲ್ರಿಗೆ ಕೊಟ್ಟೇಬುಟ್ರು. ಎಡೂರಪ್ಪ ಗೊಳೋ ಅಂತ ಮನಿಗೋದ ಅತ್ತಗೆ."



"ಅಂಗರವುನ ಕತೆ ಮುಗಿತು ಅನ್ನು."

"ಮಾಡಿರೊ ಕ್ಯಲಸ ನೋಡಿದ್ರೆ ಅಂಗೆ ಕಾಣ್ತದೆ ದ್ವಡಪ್ಪ, ಯಾಕೆ ಅಂದ್ರೆ ಅವುನ ಮ್ಯಾಲೇನು ಒಂದು ದೂರಿಲ್ಲ; ಅಕ್ರಮ ಆಸ್ತಿ, ಸೈಟು, ದುಡ್ಡು ಇನ್ನು ಹತ್ತಾರೊರ್ಸ ಕೋರ್ಟಿಗೆ ತಿರುಗಬೇಕು. ಅಂಗೆ ಮಾಡಿ ಕಂಡವುನೆ. ಇದನ್ಯಲ್ಲ ನೋಡಿದ್ರೆ, ಅವುನ ಮಾಡಿ ಕಂಡಿರದ್ರಲ್ಲೇ ಮುಗದೊಯ್ತ ನೇನೋ ಅನ್ನಸ್ತದೆ ದ್ವಡಪ್ಪ."

"ಆದ್ಯಾಕ್ಲ ಅಂಗ್ಯಲ್ಲ ಮಾಡಿಕಂಡ ಅವುನು?"

"ಅವುನ ಹುಟ್ಟಾಣಕೆನೆ ಅಂಗೆ ದ್ವಡಪ್ಪ ಪರೆಗ್‌ಜಾಂಪಲ್ ಸರಕಾರಿ ಜನಕೆ ನೀವು ಕಾಸು ಮಾಡಿ, ನನಿಗೂ ತಂದು ಕೊಡಿ ಅಂತ ಹೇಳಿದ್ದನಂತೆ. ಅಂಗಾಗಿ ಇಡೀ ಕರ್ನಾಟಕ ಈ ಮೂರು ವರ್ಸದಲ್ಲಿ ಎಷ್ಟು ಲಂಚ ಹ್ವಡದದೆ ಅಂದ್ರೆ ಅಧಿಕಾರಿಗಳ್ಯಲ್ಲ ಕೋಟ್ಯಾದಿಪತಿಗಳಾಗಿದ್ದರಂತೆ. ಇನ್ನು ಅವುನು ಜಾತಿವಾದಿಯಾಗಿದ್ರಿಂದ ಮಠ ಮಾನ್ಯಗಳಿಗೆ ದುಡ್ಡು ಕೊಟ್ಟ. ಇನ್ನು ಒಂದು ಕ್ಯಟ್ಟ ಸುದ್ದಿ ವಿಸಪ್ಪಾ ಅಂದ್ರೆ ಕೊಳ್ಳಿ ಹೊಡದಿರೊ ದುಡ್ಡನ್ಯಲ್ಲ ಮಠದಲ್ಲೇ ಇಟ್ಟಿದ್ದನಂತೆ."

"ಅವುರ್ಯಂಗಿಟಗತ್ತರೇ?"

"ಅವುರು ಕುಂತಿರೊ ಪೀಠದ ಕೆಳಗಡೆ ಇಟ್ಟಗತ್ತರೆ ದ್ವಡಪ್ಪ, ತಮಾಸಿಗೇಳಿದೆ ಸಾರಿ. ನಿನ್ನ ಪ್ರಶ್ನೆ ನೈತಿಕವಾಗಿದ್ರೆ ಇಲ್ಲೊಸಿ ದುಡ್ಡು ವಡೆವೆ ಅದೆ, ಮಡಿಕಂಡಿರಿ ಅಂತ ಕೊಟ್ರೆ ಈ ದೇಶದ ಯಾವುದೇ ಮಠ ದೇವ್ರುಸ್ಥಾನ ಬ್ಯಾಡ ತಗಂಡೋಗು ಅನ್ನದಿಲ್ಲ."

"ಅಂಗರೀಗ ಎಡೂರಪ್ಪನ ದುಡ್ಡಿಟಗಂಡಿರೋರು ಯಾರು?"

"ಅದನ್ಯಲ್ಲ ತನಿಖೆ ಮಾಡಿ ಹೇಳಬೇಕು. ಸಿದ್ದಗಂಗೆಗೋಗಿ ಸ್ವಾಮಿಗೆ ಹಾರಹಾಕಿ ಶಾಲೊದಿಸಿ ಬಂದ ಅಂತ ದೂರೇಳದಲ್ಲ."

"ಆ ಸಿದ್ದಗಂಗೆ ಸ್ವಾಮಿಗ್ಯಾಕೆ ಬೇಕು ಇವ್ನಲ್ಲ?"

"ದೇವರಾಣೆ ಇವುರ್ಯಾರು ಬ್ಯಾಡ ದೊಡಪ್ಪ, ಇವುರೆ ಅಲ್ಲಿಗೋಯ್ತರೆ. ಎಡೂರಪ್ಪ ಹೋಗಿ 'ಯಲ್ಲಾ ನಮ್ಮ ಲಿಂಗಾಯಿತ ಎಮ್ಮೆಲ್ಲೆಗಳಿಗೆ ಹೇಳಿದ್ದೀನಿ' ಸದಾನಂದ ಗೌಡನಿಗೆ ಸಪೋರ್ಟು ಮಾಡಕ್ಕೆ" ಅಂತ ಹೇಳಿದ್ರೆ ಆ ಸ್ವಾಮಿ, 'ಜಗದೀಶ್ ಶೆಟ್ರಿಗೆ ನೀನೆ ಸಪೋರ್ಟು ಮಾಡು' ಅಂದ್ರಂತೆ. ಇದರಲ್ಲಿ ಯಾರು ಜಾತಿವಾದಿ, ಯಾರು ಸೆಕ್ಯುಲರ್ರು ಅಂತ ಕಾಣನಾ."

"ಸರಿ ಈ ಸದಾನಂದ ಗೌಡ ಯಂಗೇ?"

"ಸದಾನಂದ ಅಪ್ಪಟ ದಕ್ಷಿಣ ಕನ್ನಡಿಗ. ಅದರಲ್ಲಿ ಯರಡು ಮಾತೇಯಿಲ್ಲ, ಅದೇ ನಮ್ಮ ಎಡೂರಪ್ಪ ಮಂಡ್ಯ ಜಿಲ್ಲೆ, ಬೂಕನಕೆರೆ, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ಸೇರಿಸಿ ತಯಾರಾಗಿದ್ದ ಒಂದು ಮಿಶ್ರತಳಿ. ಅವುನ ಕೈಲಿ ಏನಾರ ಮಾಡುಸಬಹುದಿತ್ತು. ಆದ್ರೆ ಇವುನ ಕೈಲಿ ಮಾಡಸಕ್ಯಾಗದಿಲ್ಲ. ಈಗಾಗ್ಲೆ ಸಣ್ಣಪುಟ್ಟ ಭ್ರಷ್ಟ ಕೆಲಸ ಮಾಡಿದ್ದನಂತೆ. ಕೋಮುವಾದಿ. ಅಸಮರ್ಥ. ಎಡೂರಪ್ಪ ತುಂಬಾ ಮೆಚ್ಚಿಕೊಂಡು ಅವುನನ್ನೇ ಕ್ಯಾಂಡೇಟ್ ಮಾಡಿ ಕೋಟ್ಯಾನು ಕೋಟಿ ಖರ್ಚು ಮಾಡಿ ಗೆಲ್ಲಿಸಿಕೊತ್ತನೆ ಅಂದ್ರೆ ಸದಾನಂದ ಎಡೂರಪ್ಪನ ಅಸ್ಪಷ್ಟ ಜೆರಾಕ್ಸ್ ಕಾಪಿ ನೋ ಡವ್ರುಟು."

"ಅಂಗರೆ ಬಡಿಯಂದು ಬುಟ್ಟು ಊದದ ತಗಂಡಾಗಾಯ್ತಲ್ಲಾ."

"ಅಂಗೆ ಆಯ್ತು, ದ್ವಡಪ್ಪ. ಆದ್ರುವೆ ಇನ್ನಮುಂದೆ ಯಾವುದೂ ನ್ಯಟನೆ ನ್ಯಡಿಯದಿಲ್ಲ ದ್ವಡಪ್ಪ, ಸದಾನಂದ ಯಲ್ಲಾರಿಗೂ ನಗೋದ್ರಿಂದ ಯಾರು ಕ್ಯಲಸನೂ ಆಗದಿಲ್ಲ, ಆರೆಸ್ಸಿನೋರ ಕ್ಯಲಸ ಮಾತ್ರ ಆಯ್ತವೆ."

"ಸರಿ, ಮುಂದೆ ಎಡೂರಪ್ಪನ ಕತೆಯೇನೂ?"

"ಇನ್ನಾರು ತಿಂಗಳು ಬುಟಗಂಡು ತಿರಗ ಮುಖ್ಯಮಂತ್ರಿ ಆದನಂತೆ."


"ನಿಜವೇನ್ಲ ಈ ಉಗ್ರಿ ಹೇಳದು?"

"ಅವ್ರುಂದೇ ಆದ ರಾಜ್ಯಕ್ಕೆ ಆಗದಾದ್ರೆ ಯಾವ ತೊಂದ್ರೆನೂ ಇಲ್ಲ ಕಣಕ್ಕ. ಇನ್ನೆರಡು ವರ್ಷ ನಾನೇ ಮುಖ್ಯಮಂತ್ರಿ ಅಂತಿದ್ದೋನು ಈಗ ಇನ್ನಾರು ತಿಂಗಳಿಗೆ ತಿರಗ ನಾನೇ ಬತ್ತಿನಿ ಅಂದ್ರೆ ವಂಡ್ರುಪುಲ್ ಜೋಕ್."

ಾಮಣ್ಣನ ತೋಟದಲ್ಲಿ

ನಾಲ್ಕು ವರ್ಷಗಳ ಹಿಂದೆ ಯಾವುದೋ ಸೆಮಿನಾರ್‌ಗೆಂದು ಶಿವಮೊಗ್ಗೆಗೆ ಹೋದಾಗ ಕಡಿದಾಳ್ ಶಾಮಣ್ಣ ರು. ಅವರ ಪತ್ನಿ ಶ್ರೀದೇವಿ ಮತ್ತು ಇಬ್ಬರು ಹೆಣ್ಣುಮಕ್ಕಳು 'ನಮ್ಮ ಊರಿಗೆ ಬನ್ನಿ' ಎಂದು ಕೇಳಿದ್ದರು. ಆಗ ಸೂ ಹೋಗಲಾಗದೆ ಇನ್ನೊಮ್ಮೆ ಬಂದಾಗ ಖಂಡಿತ ಬರುತ್ತೇನೆ ಎಂದು ಮಾತ್ರ ಹೇಳಿದ್ದೆ. ಶಾಮಣ್ಣ ತೀರ್ಥಹಳ್ಳಿ ಕಡಿದಾಳ್‌ನವರು; ಕಾಡಿನ ಮಧ್ಯದವರು. ಶಾಮಣ್ಣ ಹೇಗೆ ತಮಾಷೆಯಲ್ಲಿ, ರೈತಸಂಘದ ಚಳವಳಿಯಲ್ಲಿ ಡಿ. ಸುಂದರೇಶ್, ನಂಜುಂಡಸ್ವಾಮಿ ಮುಂತಾದವರ ಭಾಷಣಗಳ ನಡುವೆ ಬೆಳೆದರೆಂಬುದೇ ದೊಡ್ಡ ಕತೆ. ಣ್ಣ ತಮಾಷೆಯ ವ್ಯಕ್ತಿ, ಒಂದು ಘಟನೆಯ ಹಾಸ್ಯಾಸ್ವದ ಗುಣ ಅವರಿಗೆ ಮೊದಲು ಕಾಣುತ್ತದೆ. ನಂಜುಂಡಸ್ವಾಮಿ ಡು ವರ್ಷದಲ್ಲಿ ನಾವು ವಿಧಾನಸೌಧ ಆಕ್ರಮಿಸಿಕೊಳ್ಳೇವೆ' ಎಂದು ನಿಗೂಢವಾಗಿ ಕೂಗಿದಾಗ ನಾವೆಲ್ಲ ಶಾಮಣ್ಣನವರ 'ಹೌದ?' ಎನ್ನುವಂತೆ ತಿರುಗಿದರೆ ಅವರು 'ಮತ್ತೆ? ಮತ್ತೇನು ಮಾಡೋದು?' ಎಂದು ಹೇಳಿದರೆ ಅದು ನಗೆ ುತ್ತಿತ್ತು, ನಂಜುಂಡಸ್ವಾಮಿಯವರ ಭಯಂಕರ ಗಾಂಭೀರ್ಯದಲ್ಲಿ ತಮಾಷೆಯನ್ನು ಕಂಡವರು ಶಾಮಣ್ಣ. ಅದು ಂಕರರಾದವರಿಗೆ ಸಹಜವಾಗಿಯೇ ಇಷ್ಟವಾಗುವುದಿಲ್ಲ. ಹಾಗೆಂದು ಶಾಮಣ್ಣ ಬರೀ ಹುಡುಗಾಟದಲ್ಲಿ ಕಾಲ ದರಲ್ಲ; ಎಲ್ಲರಿಗಿಂತ ಪ್ರಾಮಾಣಿಕವಾಗಿ ರೈತರ ನೆಮ್ಮದಿಗಾಗಿ ಪ್ರಯತ್ನಿಸಿದವರು. ಸಾಮಾನ್ಯವಾಗಿ ಯಾರೂ ್ನ ತನ್ನ ಅಭಿನಯದ ಬಗ್ಗೆ ಬರಿ ಎಂದು ಕೇಳುವುದಿಲ್ಲ; ಅಂಥ ಕಟ್ಟಳೆಯಿಲ್ಲ ಯಾಕೆಂದು ನಾವು ಶಾಮಣ್ಣನವರನ್ನು 'ಗೆ ವಾರ ವಾರವೂ ಬರೆಯುವಂತೆ ಸೂಚಿಸಿದೆವು. ಶಾಮಣ್ಣ ಎಷ್ಟೇ ತಮಾಷೆಯವರಾದರೂ, ವಿಚಿತ್ರ ರೀತಿಯಲ್ಲಿ ಡಿಯಾದರೂ ಯಾವಾಗಲೂ ಹಣದ ಅಡಚಣೆಯಲ್ಲಿರುವವರು. ಬರೆದು ಸಂಭಾವನೆ ಗಳಿಸುವುದು ಅವರಿಗೆ ನ್ನಿಸಿತು. ಆದರೆ ಈ ತಮಾಷೆಯ ಶಾಮಣ್ಣನವರ ಬರವಣಿಗೆಯಲ್ಲಿ ತಮಾಷೆಯೇ ಇರುತ್ತಿರಲಿಲ್ಲ! ನಾನು ಬಹಳ ಚಿಸಿ, 'ಶಾಮಣ್ಣ ನಿಮಗೆ ಅನ್ನಿಸಿದ್ದನ್ನು ಅನ್ನಿಸಿದ ಹಾಗೆ, ಎಲ್ಲ ಕಿಲಾಡಿತನ ಇರುವಂತೆ ಬರ್ರೀರಿ' ಅಂದೆ. ಅವರು ಪ್ರಯತ್ನಿಸಿದರೂ ಬರವಣಿಗೆ ಸೀರಿಯಸ್ಸಾಗೇ ಉಳಿಯಿತು. ಇದು ಈ ಶಾಮಣ್ಣನ ಬಗ್ಗೆ ವಿಪರ್ಯಾಸ. ಗಡ್ಡ ಾಗುತ್ತಿದ್ದರೂ, ಸುತ್ತಣ ಎಲ್ಲರೂ ಮೊಮ್ಮಕ್ಕಳನ್ನು ಕಂಡುಕೊಳ್ಳುತ್ತಿದ್ದರೂ ಶಾಮಣ್ಣ ಮಗುವಿನಂತೆಯೇ ಉಳಿದರು. ನಹಿಯ ಹತ್ತಿರದ ಭಗವತಿಕೆರೆಯಲ್ಲಿ ಈ ಶಾಮಣ್ಣ ಮತ್ತು ಸುಂದರೇಶ್ ಕೊಂಡ ಜಮೀನನ್ನು ಉತ್ತು ತೋಟ ಲು ಅವರಿಗೆ ಪೇಳಿಯೇ ಉಳಿಯುತ್ತಿರಲಿಲ್ಲ, ಶಾಮಣ್ಣ ತಮಾಷೆಯವರಾದರೆ ಸುಂದರೇಶ್ ವ್ಯಾಮೋಹಿ. ತುಂಬ ಮ ಮನುಷ್ಯ, ನಂಜುಂಡಸ್ವಾಮಿಯವರ ಕ್ರಾಂತಿ ಕಾಡ್ಗಿಚ್ಚಿನಂತೆ ಉರಿಯುತ್ತಿದ್ದರೆ ಸುಂದರೇಶ್ ಅವರ ಸುಖೀರಾಜ್ಯ ಬೇಬೆಸು ರಾಜ್ಯದಂತೆ ಕಾಣುತ್ತಿತ್ತು, ಶಾಮಣ್ಣ ಯಾವ ರಾಜ್ಯವನ್ನೂ ನಿರೀಕ್ಷಿಸಲಿಲ್ಲ, ಸುಂದರೇಶ್ ತಮ್ಮ ಹೋರಾಟದಲ್ಲೇ ನಾಶವಾದರು; ನಂಜುಂಡಸ್ವಾಮಿ ಶಾಸಕರಾಗಿ ಮಂಗಳಾರತಿ ಎತ್ತಿಸಿಕೊಂಡು ಮನೆಗೆ ಬಂದರು. ಶಾಮಣ್ಣ ತೋಟದ ತಂಟೆಗೆ ಅಷ್ಟಾಗಿ ಹೋಗದೆ ಜೀವ ಉಳಿಸಿಕೊಂಡರು. ಶಾಮಣ್ಣನವರ ಹೆಂಡತಿ ಶ್ರೀದೇವಿ ತೋಟ ಮಾಡಿದರು. ಇಬ್ಬರು ಹೆಣ್ಣುಮಕ್ಕಳನ್ನು ಬೆಳೆಸಿದರು. ಸುಂದರೇಶ್ ಪುಟ್ಟ ಮಗ, ಮಗಳು, ಪತ್ನಿಯನ್ನು ಬಿಟ್ಟು ಹೊರಟುಹೋದರು. ವರ್ಷಗಳು ಏನೇನು ಬದಲಾವಣೆ ತರುತ್ತವೆ!

ಮೊನ್ನೆ ನಾನು ನಾಲ್ಕು ವರ್ಷದ ಹಿಂದಿನ ನನ್ನ ಭರವಸೆಯನ್ನು ನೆನಪಿಟ್ಟುಕೊಂಡು ಶಾಮಣ್ಣ ಸುಂದರೇಶರ ಭಗವತಿಕೆರೆಗೆ ಹೋದೆ. ರೈತಾಪಿ ಕೆಲಸವೆಲ್ಲ ದೂರದಿಂದ ನೋಡಲು, ಕಲ್ಪಿಸಿಕೊಳ್ಳಲು ಚೆಂದ. ಹತ್ತಿರದಿಂದ ನೋಡಿದಂತೆಲ್ಲ ಎದೆ ಒಡೆಯುತ್ತದೆ. ಆರು ವರ್ಷ ಬೆಳೆದ ಅಡಿಕೆ ಮರ ಇದ್ದಕ್ಕಿದ್ದಂತೆ ಬಾಡತೊಡಗಿ ಸತ್ತುಹೋದರೆ ಬೆಳೆದವನಿಗೆ ಏನೆನ್ನಿಸುತ್ತದೆ? ಕೈಗಾರಿಕೆಯಲ್ಲಿ ಹೀಗಾಗುವುದಿಲ್ಲ. ಹೊಲದಲ್ಲಿ ನೀವು ಬೆಳೆ ಬದಲಾಯಿಸಿದರೆ ಮತ್ತೆ ಹತ್ತು ವರ್ಷ ಕಾಯಬೇಕು. ಅಷ್ಟರಲ್ಲಿ ಜೀವ ಕುಸಿದುಹೋಗಿರುತ್ತದೆ. ಮೊನ್ನೆ ಶಾಮಣ್ಣ ಶ್ರೀದೇವಿ, ಅವರ ಮಕ್ಕಳು ಏನೇನೂ ಆಗಿಲ್ಲವೆಂಬಂತೆ ಖುಷಿಯಾಗಿದ್ದರು. ಶಾಮಣ್ಣ ನಮ್ಮನ್ನೆಲ್ಲ ಸುತ್ತಾ ಕರೆದುಕೊಂಡು ಹೋಗಿ, 'ಇದು ಫುಕುವೋಕಾ ರೀತಿಯಲ್ಲಿ ಬೆಳೆದದ್ದು, ಇದು ಸಹಜ ಕೃಷಿ, ಸೂಫಿ ಬ್ಯಾರಿಯವರು ಹೇಳಿದ ರೀತಿಯಲ್ಲೇ ಬೆಳೆದಿದ್ದೇನೆ. ಆ ಜಾಗ ನಮ್ಮದು. ಏನು ಮಾಡುವುದು ಹೇಳಿ- ರೈತನೊಬ್ಬನೊಂದಿಗೆ ವಿವಾದ ಬಂದು ಸುಮ್ಮನಿದ್ದೇನೆ. ನಾಲ್ಕು ಜನಕ್ಕೆ ಹೇಳುವ ನಾವೇ ಕಿತ್ತಾಡಿದರೆ ಹೇಗೆ?' ಅಂದರು. ಮಲೆನಾಡಿನಂತೆ ಕಾಣುವ ಪರಿಸರ; ಶಾಮಣ್ಣ ಶ್ರೀದೇವಿಯವರ ಪುಟ್ಟ ತೋಟ ದೊಡ್ಡದಾಗಿ ಬೆಳೆದು ನಿಂತಿದೆ. ಅಲ್ಲೇ ಹತ್ತಿರದಲ್ಲಿ ಸುಂದರೇಶ್ ಅವರ ಮನೆ. ಅವರ ಪತ್ನಿ ಶೋಭಾ ಚಿಕ್ಕಮಕ್ಕಳೊಂದಿಗೆ ಒಂದು ರೀತಿಯ ಅಸಹಾಯಕತೆ, ಕಿರಿಕಿರಿಯಲ್ಲಿ, ಇನ್ನೊಂದು ರೀತಿಯ ನೆಮ್ಮದಿಯಲ್ಲಿ ಇದ್ದಾರೆ. ಸುಂದರೇಶ್ ಮನೆಗೆ ನಾನು, ರಾಮದಾಸ್, ಶೂದ್ರ ಶ್ರೀನಿವಾಸ್, ಚಂದ್ರೇಗೌಡ, ತೇಜಸ್ವಿ, ಶಾಮಣ್ಣ ದಿವಾಕರ ಹೆಗಡೆ ಹೋದೆವು. ತೋಟದ ಮನೆ; ಪಕ್ಕದಲ್ಲೇ ಸುಂದರೇಶ್ ಅವರ ಸಮಾಧಿ; 'ಮಹಾತ್ಮಾ ಸುಂದರೇಶ್' ಎಂದು ಸಮಾಧಿಯ ಮೇಲೆ ಬರೆದು ಅವರ ಬದುಕಿನ ತಾರೀಖು ಕೊಟ್ಟಿದೆ. 'ಮಹಾತ್ಮಾ ಅಂತ ಬರೀಬಾರದಿತ್ತು ಅಲ್ಲವೆ?' ಅಂದರೊಬ್ಬರು.



ನಾನು 'ಬರೀಲಿ ಬಿಡಿ- ಪ್ರೀತಿಯಿಂದ ಬರೆದದ್ದು, ಅದರಲ್ಲೇನು ತಪ್ಪಿದೆ?' ಅಂದೆ. ಸುಂದರೇಶ್ ನಿಜಕ್ಕೂ ಒಳ್ಳೆಯ ಮನುಷ್ಯ. ಮಾತಾಡಲು ತುಂಬ ಇಷ್ಟ-ಆದರೆ ನಂಜುಂಡಸ್ವಾಮಿಗಳ ಕಠೋರತೆ, ಶಾಮಣ್ಣ ತಮಾಷೆ ಎರಡೂ ಇಲ್ಲದ ಸುಂದರೇಶ್ ಸಮಾಧಿಯಾಗಿದ್ದಾರೆಂದು ನಂಬಲೇ ಆಗಲೊಲ್ಲದು. ನನಗಿಂತ ಸುಮಾರು ಹತ್ತು ವರ್ಷ ಚಿಕ್ಕವರಾಗಿದ್ದವರು ಸುಂದರೇಶ್!

-ಸೆಪ್ಟೆಂಬರ್ 20, 1995

ಜನಸೇವಕರಿಗೆ ನ್ಯಾಯಾಲಯಗಳ ಕಾಟ

ಎಚ್.ಎಲ್. ಕೇಶವಮೂರ್ತಿ



ನ್ಯಾಯಾಲಯಗಳ ಸಹವಾಸ ಸಾಕುಬೇಕಾಗಿ ಹೋಗಿದೆ. ಅವು ರಾಜಕಾರಣಿಗಳ ಜೀವ ಹಿಂಡುತ್ತಾ ಕುಳಿತಿವೆ. ಬಡಪೆಟ್ಟಿಗೆ ಬಿಡುವ ಹಾಗೆ ಕಾಣುತ್ತಿಲ್ಲ. ಜೈಲಿನಲ್ಲಿರುವ 'ಜನಸೇವಕರು' ಜಾಮೀನಿನ ಮೇಲೆ ಬಿಡುಗಡೆ ಮಾಡಿ ಎಂದು ಕೋರಿದರೂ ಅದರಲ್ಲೂ ಯಾವ ಯಾವುದೋ ಹುಳುಕು ಹುಡುಕುತ್ತಾ ಕೂರುತ್ತಿವೆ. ಇದನ್ನೆಲ್ಲ ನೋಡುತ್ತಿದ್ದರೆ ನ್ಯಾಯಾಲಯಗಳಿಗೆ ಇಂತಹ ಅಧಿಕಾರ ನೀಡುವುದರ ಬದಲು 'ಜನಸೇವಕರ' ಬಳಿಯೇ ಇಟ್ಟುಕೊಂಡಿದ್ದರೆ ಭೇಷಿ ತ್ತೇನೋ ಅನ್ನಿಸುತ್ತಿದೆ. ಸುರೇಶ್ ಕಲ್ಮಾಡಿ ಅಂತಹ 'ಜನಸೇವಕರ' ಪರಿಸ್ಥಿತಿ ಗಮನಿಸಿದರೆ ಈ ಸತ್ಯ ಸಂಗತಿ ವೇದವಾಕ್ಯವಾಗುತ್ತದೆ.

ಸನ್ಮಾನ್ಯ ಸುರೇಶ್ ಕಲ್ಮಾಡಿಯವರು ಕಾಮನ್‌ವೆಲ್ತ್ ಕ್ರೀಡಾಕೂಟದ ಬಹುಕೋಟಿ ಹಗರಣದಲ್ಲಿ ಭಾಗಿ ಆಗಿದ್ದು ಈಗ ಜೈಲಿನಲ್ಲಿರುವುದು ಸರಿಯಷ್ಟೇ. ಅವರನ್ನು ನೋಡುತ್ತಿದ್ದರೆ ಕರಳು ಕಿವುಚಿದಂತೆ ಆಗುತ್ತದೆ. ಪಾಪ 'ಮರೆವು' ಅನ್ನುವುದು ಅವರ ತಲೆ ಒಳಗೆ ಪಟ್ಟಾಗಿ ಕುಳಿತಿದೆಯಂತೆ. ಅದು ಈ ಹೊತ್ತಿನಲ್ಲಿ ಧುತ್ತನೆ ಬಂದಿದ್ದಲ್ಲವಂತೆ. ಐದು ವರ್ಷದ ಹಿಂದಿನಿಂದಲೂ ಮರೆವು ತನ್ನ ಸಾಮ್ರಾಜ್ಯವನ್ನು ಅವರ ತಲೆ ಒಳಗೆ ಸ್ಥಾಪಿಸಿದೆಯಂತೆ. ಇದರ ಪರಿಣಾಮವಾಗಿ ಸನ್ಮಾನ್ಯರು ಯಾವುಯಾವುದೋ ಚೆಕ್ಕುಗಳಿಗೆ ಸಹಿಹಾಕಿರಬಹುದು; ಯಾರಿಗೋ ಕೊಡ ಬೇಕಾಗಿರುವ ಹಣವನ್ನು ಮತ್ಯಾರಿಗೋ ಕೊಟ್ಟಿರಬಹುದು. 'ಮರೆ'ವಿನ ಕಾಯಿಲೆ ಕಾಡುತ್ತಿದ್ದರೂ ಕೋಟ್ಯಂತರ ರೂ.ಗಳ ವ್ಯವಹಾರವನ್ನು ನಿಭಾಯಿಸಿದರಲ್ಲ ಅದು ಸಾಹಸವೇ ಸರಿ! ಇದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹೈಕೋರ್ಟು ಹಗರಣದಿಂದ ಮುಕ್ತಿಗೊಳಿಸುವುದು ಇರಲಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲೂ ತಕರಾರು ತೆಗೆದಿದೆ. ಇದ ಕ್ಕೆಲ್ಲ 'ಮರೆವು' ಕಾರಣ ಎಂದರೂ ನಂಬಲು ಸಿದ್ಧವಿಲ್ಲ. ನೀನು ಭ್ರಷ್ಟಾ ಚಾರ ಎಸಗಿದ್ದೀಯೇ ಎಂದೇ ಹೇಳು ತ್ತಿದೆ. ನರರೋಗತಜ್ಞರು ಸನ್ಮಾನ್ಯ ಸುರೇಶ್ ಕಲ್ಮಾಡಿ ಅವರು ಬುದ್ಧಿಮಾಂದ್ಯತೆ ಕಾಯಿಲೆ ಯಿಂದ ಬಳಲುತ್ತಿದ್ದಾರೆ ಎಂದು ಹೇಳಿದರೂ ಅವರನ್ನೇ ಅನುಮಾನದ ದೃಷ್ಟಿಯಿಂದ ನೋಡುತ್ತಿದೆಯಂತೆ. ಸದಾ ಕಳ್ಳರ ಒಡನಾಟದಲ್ಲಿರುವ ಪೊಲೀಸರಿಗೆ ಪ್ರತಿಯೊಬ್ಬ ನಾಗರಿಕನೂ ಕಳ್ಳನ ತರಹವೇ ಕಾಣಿಸುತ್ತಾರಂತೆ. ಈ ನ್ಯಾಯಾಧೀಶರಿಗೂ ಅಂತಹದ್ದೇ ಕಾಯಿಲೆ ಇರಬೇಕು. ಜೈಲಿನಲ್ಲಿರುವ 'ಜನಸೇವಕರು' ವಂಚಕರಂತೆಯೇ ಗೋಚ ರಿಸುತ್ತಿರಬಹುದು!

ಈ ನಡುವೆ ಸಂಸತ್ ಅಧಿವೇಶನ ಬೇರೆ ಬಂದಿತು. ಕಲ್ಮಾಡಿ ಸಾಹೇಬರು ಸಂಸತ್ ಸದಸ್ಯರು ಬೇರೆ. ಕರ್ತವ್ಯ ಪರಿಪಾಲನೆ ದೃಷ್ಟಿಯಿಂದ ಅಧಿವೇಶನಕ್ಕೆ ಹಾಜರಾಗಬೇಕು. ಆದರೆ ಇದರಲ್ಲಿ ಒಂದು ತೊಡಕು ಇತ್ತು. ಅಧಿವೇಶನಕ್ಕೆ ಹಾಜರಾಗಲು ಒಪ್ಪಿಗೆ ನೀಡಿ ಎಂದು ನ್ಯಾಯಾಲಯವನ್ನು ಕೋರಲು ಮರೆವು ನನ್ನ ತಲೆಯೊಳಗೆ ಪಟ್ಟಾಗಿ ಕುಳಿತಿದೆ ಎಂದು ಹೇಳಿದ್ದೂ ಅಲ್ಲದೇ ಅದರ ದೃಢೀಕರಣಕ್ಕಾಗಿ ವೈದ್ಯರ ಸರ್ಟಿಫಿಕೇಟ್ ಕೊಟ್ಟಿದ್ದರು! ಈಗ ಅದೇ ತಲೆ ನೋವಾಗಿತ್ತು. 'ಕುಂತಲ್ಲೇ ಅಂದು ಮರೆಯೋನು ನಾನು ಅಂದಿದ್ದೀಯ. ಅಂತಹದ್ದರಲ್ಲಿ ಸಂಸತ್ತಿಗೆ ಹೋಗಿ ಏನು ಕಡಿದು ಕಟ್ಟೆ ಹಾಕುತ್ತೀಯ' ಎಂದು ಹೇಳುವ ಸಂದರ್ಭ ನಿಚ್ಚಳವಾಗಿತ್ತು.

ಆದುದರಿಂದ ಕಲ್ಮಾಡಿ ಸಾಹೇಬರು 'ನನಗೆ ಮರೆವು ಕಾಯಿಲೆ ಇಲ್ಲ' ಎಂದು ಸ್ವಯಂ ಸರ್ಟಿಫಿಕೇಟ್ ಕೊಟ್ಟುಕೊಂಡರು! ಆದರೆ ಸಾಹೇಬರ ದುರಂತಕ್ಕೆ ಏನೆಂಬ ಬೇಕೋ ಕಾಣೆ. ನ್ಯಾಯಾಲಯ ಇದನ್ನು ಒಪ್ಪಲು ಸಿದ್ಧವಿರಲಿಲ್ಲ! 'ನೀವು ಹೇಳುತ್ತಿರುವುದು ಸತ್ಯವೋ? ಇಲ್ಲ ವೈದ್ಯರ ಮಾತು ಸತ್ಯವೋ' ಎಂದೆಲ್ಲ ನ್ಯಾಯಾಲಯ ಕೇಳುತ್ತಾ ಕುಂತಿದೆಯಂತೆ. 'ನಾನು ಹೇಳುತ್ತಿರುವುದು ಸತ್ಯ' ಎಂದು ಪ್ರಮಾಣ ಮಾಡಿ ಹೇಳಿದರೂ ನ್ಯಾಯಾ ಲಯ ಒಪ್ಪಲು ಸಿದ್ಧವಿಲ್ಲವಂತೆ!

ಸನ್ಮಾನ್ಯ ಸುರೇಶ್ ಕಲ್ಮಾಡಿಯವರು ಸಂಸತ್ತಿಗೆ ಹಾಜರಾಗಲು ಒಪ್ಪಿಗೆ ಕೇಳಿದ್ದೇ ನ್ಯಾಯಾಲಯಕ್ಕೆ ಅಪರಾಧವಾಗಿ ಗೋಚರಿಸಬಹುದು. ನೀವು ಕಳೆದ ಐದು ವರ್ಷಗಳಲ್ಲಿ ಎಷ್ಟು ಸಲ ಸಂಸತ್ತಿಗೆ ಹಾಜರಾಗಿದ್ದೀರಿ? ಯಾವ ಪ್ರಶ್ನೆಗಳನ್ನು ಕೇಳಿದ್ದೀರಿ? ನೀವು ಹೋಗದೇ ಇದ್ದರೆ ಏನಾಗುತ್ತೆ? ದೇಶವೇನು ಮುಳುಗಿ ಹೋಗು ತ್ತದೆಯಾ? ಎಂದೆಲ್ಲ ಎಂತೆಂತಹುದೋ ತರ್ಲೆ ತರ್ಲೆ ಪ್ರಶ್ನೆಗಳನ್ನು ಕೇಳುತ್ತಿರುವುದು ಆಶ್ಚರ್ಯಕಾರಿಯೂ, ಆಘಾತಕಾರಿಯೂ ಆಗಿದೆ. ಎಲ್ಲ ತಿಳಿದಂತಹ ಗೌರವಾನ್ವಿತ ನ್ಯಾಯಾಧೀಶರೇ ಹೀಗೆಲ್ಲ ಕೇಳಿದರೆ ಏನು ಹೇಳುವುದು? ಸಂಸತ್ ಸದಸ್ಯರಿಗೆ ಸಂಸತ್ತಿನ ನಡವಳಿಕೆಗಳಲ್ಲಿ ಸಕ್ರಿಯವಾಗಿ ಭಾಗವ ಹಿಸುವ ತಾಳ್ಮೆಯಾ ಗಲಿ, ಬುದ್ಧಿವಂತಿ ಯಾಗಲಿ ಇರುವುದಿಲ್ಲ ಎಂಬುದು ಸರ್ವರಿಗೂ ವೇದ್ಯವಾದ ಸಂಗತಿಯೇ ಆಗಿದೆ. ಅದೂಅಲ್ಲದೆ ಸಂಸತ್ ಸದಸ್ಯರಲ್ಲಿ ಕನಿಷ್ಠ ಶೇಕಡ 30ರಷ್ಟು ಭಾಗ ಕ್ರಿಮಿನಲ್ ಹಿನ್ನೆಲೆ ಇರುವವರು ಎಂಬ ಸತ್ಯ ಗೌರವಾನ್ವಿತ ನ್ಯಾಯಾಧೀಶರ ಅರಿವಿಗೆ ಬಾರದ ಸಂಗತಿಯೇನೂ ಅಲ್ಲ. ಸನ್ಮಾನ್ಯರು ಅವರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕು. ಅದನ್ನೇ ಮರೆತು ನೈತಿಕ ಹೊಣೆಗಾರಿಕೆ ಕುರಿತು ಮಾತನಾಡುವುದು ತರವಲ್ಲ. ಹೀಗೆ ಇರಲೇಬೇಕು ಎನ್ನುವುದಾದರೆ ಸಂಸತ್ತನ್ನೇ ವಿಸರ್ಜಿಸಬೇಕಾಗುತ್ತದೆ! ಗೌರವಾನ್ವಿತ ನ್ಯಾಯಾ ಲಯದ ನಡವಳಿಕೆಗಳು ಪ್ರಜಾಪ್ರಭುತ್ವದ ನಾಶಕ್ಕೆ ಹೊಂಚುಹಾಕುತ್ತಿರುವಂತೆ ಭಾಸವಾಗುತ್ತಿದೆ!

ಗೌರವಾನ್ವಿತ ನ್ಯಾಯಾಲಯ ಇನ್ನೂ ಮುಂದುವರೆದು 'ಸರ್ಕಾರಿ ನೌಕರರೂ ಜೈಲಿನಲ್ಲಿದ್ದಾರೆ. ಅವರೂ ಕರ್ತವ್ಯ ನಿರ್ವಹಣೆ ಮಾಡಬೇಕು. ಇದನ್ನೇ ಮುಂದಿಟ್ಟು ಬಿಡುಗಡೆ ಮಾಡಿ ಎಂದರೆ ಮಾಡಲು ಸಾಧ್ಯವೇ' ಎಂದು ಕೇಳಿದೆ. ಇದು ತುಂಬಾ ಅನ್ಯಾಯದ ಪ್ರಶ್ನೆ. ಸಂಸತ್ ಸದಸ್ಯರೆಲ್ಲಿ? ಜುಜುಬಿ ಸರ್ಕಾರಿ ನೌಕರ ಎಲ್ಲಿ? ಈ ಹೋಲಿಕೆಯೇ ಅವಮಾನಕರವಾದುದು. ಎರಡು ಪಂಗಡಗಳೂ ಅಕ್ರಮವೆಸಗಿ ಜೈಲಿನಲ್ಲಿ ಜೊತೆಯಲ್ಲಿರ ಬಹುದು. ಆದರೂ ಒಂದು ಹಿಟ್ಟು, ಇನ್ನೊಂದು ಬೂದಿ ಎರಡನ್ನೂ ಒಂದೇ ಎಂದು ಪರಿಗಣಿಸಲು ಸಾಧ್ಯವಿಲ್ಲ!

ಇದನ್ನೆಲ್ಲ ಗಮನಿಸುತ್ತಿದ್ದರೆ 'ಜನಸೇವಕ'ರಿಗೆ ಜೈಲಿನಿಂದ ಮುಕ್ತಿ ಅಸಾಧ್ಯವೆನಿಸುತ್ತಿದೆ. ನ್ಯಾಯಾಲಯಗಳ ಆಟಾಟೋಪಗಳಿಂದ ಮುಕ್ತರಾಗಲು ಜನಪ್ರತಿನಿಧಿಗಳು ನ್ಯಾಯಾಲಯಾತೀತರು ಎಂದು ಸಂವಿಧಾನ ತಿದ್ದುಪಡಿ ಮಾಡುವ ದಿವಸಗಳು ದೂರವಿಲ್ಲವೆನಿಸುತ್ತದೆ!

ಆಹಾ.... ಏನು ಶಿಸ್ತು!

ಭಾಜಪ ಶಿಸ್ತಿನ ಪಕ್ಷ

Nation First

Party Next

Self Last

ಅದರ ಘೋಷವಾಕ್ಯ

ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳು!

ಹೈಕಮಾಂಡ್ ತೀರ್ಮಾನವೇ ಅಂತಿಮ!

ಸ್ವಜನಪಕ್ಷಪಾತ ಸುದ್ದಿ ಆಯಿತು. ಭೂಹಗರಣ ಬಯಲಾಯಿತು. ಹೈಕಮಾಂಡ್ ತೆಪ್ಪಗಿತ್ತು. ಘೋಷವಾಕ್ಯ ತಿರುವುಮುರುವು ಆಯಿತೋ ಏನೋ!

ಗಣಿ ಹಗರಣ ಹೊರಬಿತ್ತು

ಚುರುಕಾಯಿತು ಹೈಕಮಾಂಡ್

'ಕೂಡಲೇ ರಾಜೀನಾಮೆ ನೀಡಿ' ಎಂದಿತು ಮುಖ್ಯ ಮಂತ್ರಿಗೆ

ಅವರೂ ಶಿಸ್ತಿನ ಸಿಪಾಯಿಯೇ 'ರಾಜೀನಾಮೆ ನೀಡುತ್ತೇನೆ. ಆದರೆ ಆಷಾಢ ಕಳೆಯಲಿ' ಎಂದರು.

ಯಾಕೆ ಆಷಾಢ ಬೇಡ?


ಅದು ಅಶುಭ ತಿಂಗಳು!

ಹೌದು. ಆ ತಿಂಗಳು ಸನ್ಮಾನ್ಯ ಶಿಸ್ತಿನ ಸಿಪಾಯಿ ಭ್ರಷ್ಟಾಚಾರ ಎಸಗಿಲ್ಲವೇ? ಗಣಿ ಅದಿರು ಕಳ್ಳ ಸಾಗಾಣಿಕೆ ಮಾಡಿಲ್ಲವೇ?

ಪ್ರತಿಯೊಂದು ಕಾನೂನಿಗೂ ಒಂದೊಂದು ವಿನಾಯಿತಿ ಇರುತ್ತದೆ. ಲಂಚ ಪಡೆಯಲು ಅಶುಭ ಅಡ್ಡಬರುವುದಿಲ್ಲ!

ಅಶುಭ ಆಷಾಢ ಹೈಕಮಾಂಡ್‌ಗೆ ಇರಲಿಲ್ಲ. ವರಿಷ್ಠರು ಬೆಂಗಳೂರಿಗೆ ಬಂದರು. ಶಾಸಕರ ಸಭೆಗೆ ಸಮಯ, ಸ್ಥಳ ನಿರ್ಧರಿಸಿದರು.

ಅಣಕ



ಯಾರು ಮುಂದಿನ ಮುಖ್ಯಮಂತ್ರಿ?

'ವರಿಷ್ಠರ ತೀರ್ಮಾನವೇ ಅಂತಿಮ' ಪಕ್ಷದ ಎ ಬಾಯಲ್ಲೂ ಇದೇ ಮಂತ್ರ.

ಆದರೆ... ಮುಖ್ಯಮಂತ್ರಿ ಕುರ್ಚಿಯನ್ನು ಬಿಡಲು ಶಿ ಸಿಪಾಯಿ ಸಿದ್ಧರಿಲ್ಲ!

ನಿಗದಿತ ಸಮಯ ಮುಂದೆ ಹೋಯಿತು.

ತಾವಿರುವ ಸ್ಥಳಕ್ಕೆ ಬರಲು ಆಹ್ವಾನ ನೀಡಿ ವರಿಷ್ಠರು. ಈ ಆಹ್ವಾನವೇ ಅಪಮಾನವಾಗಿ ಕಂಡಿರಬೇ ಶಿಸ್ತಿನ ಸಿಪಾಯಿ ಇದಕ್ಕೆ ಕವಡೆ ಕಾಸಿನ ಕಿಮ್ಮತ್ತೂ ನೀಡ ವರಿಷ್ಠರೇ ಶಿಸ್ತಿನ ಸಿಪಾಯಿಯ ಬಳಿಗೆ ಹೋದರು.

ಅಲ್ಲಿ ನಡೆಯಿತು ದೊಂಬರಾಟ!

ಶಿಸ್ತಿನ ಸಿಪಾಯಿಗಳಾದ ಗೌರವಾನ್ವಿತ ಶಾ ಮಹೋದಯರಿಂದ ಶಕ್ತಿ ಪ್ರದರ್ಶನ! ಹ ಹಾಲಿಯಾಗಿಯೇ ಮುಂದುವರೆಯಲಿ ಎಂಬ ಘೋಷ ಹಗರಣಗಳಿಗಿಂತ ಸಂಖ್ಯಾಬಲವೇ ಮುಖ್ಯ ಎಂಬ ನಿಲು

ವರಿಷ್ಠರ ಮನವೊಲಿಕೆ ವಿಫಲ. ಶಿಸ್ತಿನ ಸಿಪಾ ರಾಜೀನಾಮೆ ನೀಡಲಿಲ್ಲ!

'ರಾಜೀನಾಮೆ ನೀಡಿ, ಇಲ್ಲ ವಜಕ್ಕೆ ಸಿದ್ಧರಾಗಿ' ಎ ಗುಡುಗು ಮೇಲಿಂದ ಬಂದಿತು. ಶಿಸ್ತಿನ ಸಿಪಾ ರಾಜೀನಾಮೆಗೆ ಸಿದ್ಧರಾದರು.

ಮತ್ತೆ ಹಿಂದಿನ ಕತೆ ಮರುಕಳಿಸಿತು. ರಾಜಭವ ತೆರಳುವಲ್ಲಿಯೂ ಶಿಸ್ತಿನ ಸಿಪಾಯಿಯ ಶಕ್ತಿ ಪ್ರದರ್ಶ

ವರಿಷ್ಠರ ಬಳಿಗೆ ತೆರಳಿದರು ಶಿಸ್ತಿನ ಸಿಪಾಯಿ. 'ವರಿ ತೀರ್ಮಾನ', 'ಆಂತರಿಕ ಪ್ರಜಾಪ್ರಭುತ್ವ' ಎಲ್ಲ ಮರೆತ ಇವರೇ ಮುಂದಿನ ಮುಖ್ಯಮಂತ್ರಿ ಆಗಬೇಕು ಅನ ಪಟ್ಟುಹಾಕಿದರು.

ಶಿಸ್ತಿನ ಪಕ್ಷದಲ್ಲಿ ಬಣಗಳಿಲ್ಲ, ಕೆಲವರು ಒಬ್ಬರ ಮತ್ತೆ ಕೆಲವರು ಇನ್ನೊಬ್ಬರ ಕಡೆ. ಇದು ಅಭಿಪ್ರಾ ಭೇದ ಅಷ್ಟೇ! 121 ಸದಸ್ಯರೂ ಒಟ್ಟಿಗೆ ಇದ್ದಾರೆ. ಆ ಅವರ ವಾಸ್ತವ್ಯ ಮಾತ್ರ ವಿವಿಧ ರೆಸಾರ್ಟ್‌ಗಳಲ್ಲಿ!

ರೆಸಾರ್ಟ್ ರಾಜಕೀಯ ಜೆಡಿಎಸ್ ಸಂಸ್ಕೃತಿ. ಭಾಜಪ ಅಲ್ಲ, ಆದರೂ ಅವರು ರೆಸಾರ್ಟ್‌ಗಳಲ್ಲಿ ವಾ ಹೂಡಿದ್ದಾರೆ! ಹೀಗೆ ಅವರು ಇರುವುದು ಯಾಕೆ?

'ಮೂರು ದಿವಸಗಳಿಂದ ಶಿಸ್ತಿನ ಸಿಪಾಯಿ ಮನೆಯಲ್ಲೇ ಇದ್ದು ಬೇಸರ ಬಂದಿತ್ತು. ಅದ ಕಳೆದುಕೊಳ್ಳಲು ರೆಸಾರ್ಟ್‌ಗೆ ಹೋಗಿದ್ದಾರೆ!'


ರೆಸಾರ್ಟ್‌ಗಳಲ್ಲೇನು ವಿಶೇಷ? ಅವರಿಗಾಗಿ ಮೀಸಲ ಶಾಸಕರ ಭವನವೇ ಇದ್ದಿತಲ್ಲ?

ಇಲ್ಲಿಲ್ಲದ 'ವಿಶೇಷ' ಅಲ್ಲಿರಬಹುದು!

ಏನು ಶಿಸ್ತು, ಎಂತ ಪಕ್ಷ, ಏನು ಕತೆ!

ಲೋಕಾಯುಕ್ತ ಸಂತೋಷ್ ಹೆಗ್ಡೆಯವರಿಗೊಂದು ಶಹಭಾಷ್

ಲೋಕಾಯುಕ್ತ ಸಂತೋಷ ಹೆಗ್ಡೆ ಅವರು ನೀಡಿದ ವರದಿಯ ನಂತರ ಗಣಿಗಳ್ಳರು ರಾಜ್ಯವನ್ನು ಅದು ಹೇಗೆ ಲೂಟಿ ಹೊಡೆದಿದ್ದಾರೆನ್ನುವ ಸತ್ಯಗಳು ಪದರು ಪದರಾಗಿ ಬಿಚ್ಚಿಕೊಂಡು ಸಾರ್ವಜನಿಕರು ದಿಗ್ಭ್ರಾಂತರಾಗಿದ್ದಾರೆ. ಬಳ್ಳಾರಿಯನ್ನು ಹುರಿದು ಮುಕ್ಕಿರುವ ರೆಡ್ಡಿಗಳು, ಅದಿರುಲೂಟಿ ಹೊಡೆಯಲು ಅಧಿಕಾರಿಗಳ ಸಮೂಹವನ್ನೇ ಭ್ರಷ್ಟಾತಿ ಭ್ರಷ್ಟಗೊಳಿಸಿ, ಒಪ್ಪದಿದ್ದವರನ್ನು ಬೆದರಿಸಿ ಕೋಟ್ಯಾಂತರ ಹಣವನ್ನು ವಿದೇಶದ ಬ್ಯಾಂಕ್‌ಗಳಲ್ಲಿ ಜಮಾಯಿಸಿರುವುದು ಈಗ ಗುಟ್ಟಾಗಿ ಉಳಿದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬಳ್ಳಾರಿಯ ಸಾಮಾನ್ಯ ಜನರ ಮೇಲೆ ಸವಾರಿ ನಡೆಸುತ್ತಾ, ಎದುರು ಬಿದ್ದವರನ್ನು ತುಳಿದು ಹಬ್ಬ ಮಾಡಿರುವ ಗಣಿ ರೆಡ್ಡಿಗಳ ವಿರುದ್ಧ ಸಂತೋಷ್ ಹೆಗ್ಡೆ ಅವರು ಸರಿಯಾದ ಬಾಣವನ್ನೇ ಪ್ರಯೋಗಿಸಿದ್ದಾರೆ.



ತಮ್ಮ ಜೀವದ ಹಂಗನ್ನು ತೊರೆದು ಲೋಕಾಯುಕ್ತರು ವರದಿ ತಯಾರಿಸಲು ಶ್ರಮಿಸಿದ ಡಾ.ಯು.ವಿ.ಸಿಂಗ್ ಹಾಗೂ ಅಧಿಕಾರಿ ಬಳಗ ನಿಜಕ್ಕೂ ಅಭಿನಂದನಾರ್ಹರು. ಜನರಿಗಷ್ಟೇ ಅಲ್ಲ, ಅಧಿಕಾರಿ ವರ್ಗಕ್ಕೂ ಚಿತ್ರಹಿಂಸೆ ನೀಡಿರುವ ರೆಡ್ಡಿ ಬಳಗ ಹಿಟ್ಲರನ ತದ್ರೂಪಿಯಂತಿದೆ. ಪ್ರಜಾಪ್ರಭುತ್ವದ ಮೌಲ್ಯಗಳು ಉಳಿಯಬೇಕಾದರೆ ಇಂತಹ ಕಸಗಳನ್ನು ಜನತೆ ಒಕ್ಕೊರಲಿನಿಂದ ಕಿತ್ತುಹಾಕಬೇಕಿದೆ. ಯಡಿಯೂರಪ್ಪನ ಕುರ್ಚಿ ದಾಹ ಹಾಗೂ ರೆಡ್ಡಿಗಳ ದಬ್ಬಾಳಿಕೆಯನ್ನು 'ಸದ್ಯ ಹೋದ' ವರದಿಯಲ್ಲಿ ಬಟಾಬಯಲು ಮಾಡಿರುವ ಪಾರ್ವತೀಶ ಅವರಿಗೆ ಧನ್ಯವಾದಗಳು.

- ಹಸಮಕಲ್ ಬಸವರಾಜ ಹಳ್ಳಿ, ಸಿಂಧನೂರು

ಒಂದು ವಾರದಿಂದ ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿ ಪಾಯಸ ಕುಡಿದಷ್ಟು ಸಂತೋಷವಾಗುತ್ತಿದೆ. ಯಡಿಯೂರಪ್ಪ ತಾನೊಬ್ಬ ಭ್ರಷ್ಟ ಮಾತ್ರವಲ್ಲ ಪರಮ ಭಂಡ ಎಂಬುದನ್ನು ರಾಜ್ಯದ ಜನರಿಗೆ ಮಾತ್ರವಲ್ಲ ತನ್ನ ಪಕ್ಷದ ಹೈಕಮಾಂಡಿಗೇ ತೋರಿಸಿಕೊಟ್ಟಿದ್ದಾರೆ.

ತಮ್ಮದು ಶಿಸ್ತಿನ ಪಕ್ಷ ಎನ್ನುತ್ತಿದ್ದ ಬಿಜೆಪಿಗೆ ಈ ಯಡ್ಡಿಯಿಂದಾಗಿರುವ ಅವಮಾನ ಮತ್ತು ಮುಖಭಂಗ ಅಷ್ಟಿಷ್ಟಲ್ಲ. ತಮ್ಮದು ದೇಶಭಕ್ತರ ಪಕ್ಷ ಎನ್ನುತ್ತಿದ್ದರು ಚೆಡ್ಡಿಗಳು. ಆದರೆ ವಾಸ್ತವವಾಗಿ ಬಿಜೆಪಿ ಎಂದರೆ ದೇಶವನ್ನೇ ದೋಚುವ ಜನರು ಎಂಬುದನ್ನೂ ಯಡ್ಡಿ ಸಾಬೀತುಪಡಿಸಿದ್ದಾನೆ.


ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದ ಅದರ ದುಷ್ಟತನ, ಭ್ರಷ್ಟತನ ಮತ್ತು ದೇಶದ್ರೋಹವನ್ನು ವಿವರವಾಗಿ ಜನರ ಮುಂದಿಡುತ್ತಲೇ ಬಂದ 'ಲಂಕೇಶ್' ತಂಡ ನಿಜವಾಗಲೂ ರಾಜ್ಯದ ಜನರನ್ನು ಈ ಚೆಡ್ಡಿ-ಯಡ್ಡಿ-ರೆಡ್ಡಿಗಳ ಬಗ್ಗೆ ಎಚ್ಚರಿಸುತ್ತಲೇ ಬಂದಿತ್ತು. ಮುಂದೆ ಬರಲಿರುವ ಚುನಾವಣೆಯಲ್ಲಾದರೂ ಕನ್ನಡಿಗರು ಎಚ್ಚೆತ್ತುಕೊಂಡು, ಜಾತಿ-ಧರ್ಮ-ಹಣ ತರಹದ ವಿಷಯಗಳಿಗೆ ಬಲಿಯಾಗದೇ ಬಿಜೆಪಿಯನ್ನು ಕರ್ನಾಟಕದಲ್ಲಿ ನಿರ್ನಾಮ ಮಾಡಬೇಕಿದೆ.

- ಸಂತೋಷ್, ಅಜ್ಜಂಪುರ

ಧರ್ಮದ ತುತ್ತೂರಿಯನ್ನು ಊದಿಕೊಂಡು ಸಾಮಾನ್ಯ ಜನರಿಗೆ ಮಂಕುಬೂದಿಯನ್ನು ಎರಚುತ್ತಾ ತನ್ನ ಅಧಿಕಾರದ ಗದ್ದುಗೆಯನ್ನು ಹಿಡಿದಿರುವ ಕೋಮುವಾದಿ ಪಕ್ಷವೊಂದು ತನ್ನದೇ ಆದ ಹಿಡನ್ ಅಜೆಂಡಾವನ್ನು ಹೊಂದಿದ್ದು ಹಂತಹಂತವಾಗಿ ಅದನ್ನು ಚಲಾವಣೆಗೆ ತರಲು ಪ್ರಯತ್ನಿಸುತ್ತದೆ. ಹತ್ತು ಹಲವು ಆಸೆಗಳನ್ನು ಹೊತ್ತ ಜನ ಇಂತಹ ಪಕ್ಷವನ್ನು ತಾವು ಗೆಲ್ಲಿಸಿದ್ದು ತಪ್ಪು ಎಂಬ ಜ್ಞಾನೋದಯವಾಗುತ್ತಿದೆ.

ಬಿಜೆಪಿ ತಾನು ಅಧಿಕಾರಕ್ಕೆ ಬಂದರೆ ಏನು ಮಾಡಬಹುದು ಎಂದು ಜನ ನಿರೀಕ್ಷೆ ಇಟ್ಟುಕೊಂಡಿದ್ದರೋ ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಜನರಿಗೆ ಅರಿವಾಗುತ್ತಿದೆ. ಒಂದೆಡೆ ರೈತರು ಸಾಲಬಾಧೆಯಿಂದ ಆತ್ಮಹತ್ಯೆಯಂತಹ ವಿಧಾನ ಅನುಸರಿಸತೊಡಗಿದರೆ ಇನ್ನೊಂದೆಡೆ ಯಾವ ಗಳಿಗೆಯಲ್ಲಿ ತಮ್ಮ ಭೂಮಿಗೂ ಕುತ್ತು ಬರುವುದೆಂಬ ಆತಂಕ ರೈತಾಪಿಯನ್ನು ಕಾಡುತ್ತಿದೆ. ಮಗದೊಂದೆಡೆ ಸಾಲುಸಾಲು ಹಗರಣಗಳು. ಯಾರು ಈ ದೇಶ, ಧರ್ಮವನ್ನು ಗುತ್ತಿಗೆ ಹಿಡಿದವರಂತೆ ಮಾತನಾಡುತ್ತಿದ್ದರೋ ಇಂದು ಅವರೇ ಈ ನಾಡಿನ ಮಣ್ಣನ್ನು ಕದ್ದು ಮಾರುತ್ತಿದ್ದಾರೆ ಎಂಬುದು ಲೋಕಾಯುಕ್ತರ ವರದಿಯಿಂದ ಸಾಬೀತಾಗಿದೆ.

ಇಂತಹ ಸಂದರ್ಭದಲ್ಲಿ ಬಿಜೆಪಿ ಸರ್ಕಾರವು ಶಾಲೆಗಳಲ್ಲಿ ಕಡ್ಡಾಯವಾಗಿ ಭಗವದ್ಗೀತೆಯನ್ನು ಬೋಧಿಸಲು ಹೊರಟಿರುವುದು ನಾಚಿಕೆಗೇಡಿದ ಸಂಗತಿ. ಶಾಲಾ ಮಕ್ಕಳಿಗೆ ತಮ್ಮ ಬದುಕಿನ ಹಾದಿಯನ್ನು ಸುಗಮಗೊಳಿಸಿಕೊಳ್ಳುವಂತಹ ಸಾಮರ್ಥ್ಯವನ್ನು ಕಲಿಸಬೇಕೆ ಹೊರತು ಯಾವುದೋ ಒಂದು ಹಳೆ ಕಾಲದ ಶಾಸ್ತ್ರವನ್ನಲ್ಲ.




ಹಾಗೆ ನೋಡಿದರೆ ಇಂದು ಅತಿಹೆಚ್ಚು ಚರ್ಚೆಗೆ ಬರಬೇಕಾಗಿರುವುದು ಭಗವದ್ಗೀತೆಯ ಅಭಿಯಾನವಲ್ಲ ಬದಲಿಗೆ ಎಲ್ಲಾ ದೇವಸ್ಥಾನ, ಮಠಮಂದಿರಗಳಲ್ಲಿ ಎಲ್ಲ ಜಾತಿ ಜನಾಂಗದವರಿಗೆ ಮುಕ್ತ ಪ್ರವೇಶವನ್ನು ನೀಡುವುದು ಅಲ್ಲಿ ನಡೆಯುವ ಸಹಪಂಕ್ತಿ ಭೋಜನದಲ್ಲಿ ಸರ್ವರಿಗೂ ಒಂದೇ ಕಡೆ ಊಟ ಹಾಕಿಸಿ ಸರ್ವರೂ ಸಮಾನರು ಎಂಬ ಈ ದೇಶದ ಜಾತ್ಯತೀತ ಮೌಲ್ಯಗಳನ್ನು ಎ ಹಿಡಿಯುವುದು. ಇದರ ಬಗ್ಗೆ ಎಲ್ಲರೂ ಚಿಂತಿಸಬೇಕೆ ಹೊರತು ಪುರೋಹಿತಶಾಹಿಯ ಜಾತಿ ಶ್ರೇಷ್ಠತೆಯನ್ನು ಮೆರೆಯುವ ಭಗವದ್ಗೀತೆಯನ್ನಲ್ಲ. ಇಷ್ಟಕ್ಕೂ ಭಗವದ್ಗೀತೆಯಲ್ಲಿರುವ ಅಂಶಗಳನ್ನು ಮಕ್ಕಳಿಗೆ ತಿಳಿಸಲೇಬೇಕು ಎಂಬ ಬಿಜೆಪಿಗೆ ಬಯಕೆ ಇದ್ದರೆ ಅದನ್ನು ದೇವಾಲಯಗಳಲ್ಲಿ, ಮಠ ಮಂದಿರಗಳಲ್ಲಿ ಹೇಳಿಕೊಡಲಿ.

- ಮಂಜಣ್ಣ, ಸೊರಬ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.


ಟಾಕ್ ನಿಕ್



ಅಬ್ಬಬ್ಬಾ ಈ ನವೀನ್ ಕೃಷ್ಣ ಅನ್ನೋ ಹುಡುಗ ಸಿಕ್ಕಾಪಟ್ಟೆ ಚುರುಕು! ತನ್ನದೇ ಸಿನಿಮಾಕ್ಕೆ ತಾನೇ ಡೈಲಾಗು, ಹಾಡುಗಳನ್ನು ಬರೆದುಕೊಂಡು, ತಾನೇ ಹಾಡಿ, ಪುಟಗಟ್ಟಲೆ ಸಂಭಾಷಣೆಯನ್ನು ಒಂದೇ ಟೇಕಿಗೆ ಓಕೆ ಮಾಡುವ ಪ್ರತಿಭೆ. ಬೆರಳು ತೋರಿದರೆ ಹಸ್ತವನ್ನೇ ನುಂಗೋಹಾಗೆ, ಪ್ರಶ್ನೆ ಕೇಳೋಕೆ ಮುಂಚೇನೇ ಈ ಹುಡುಗ ಉತ್ತರ ಸಿದ್ಧಮಾಡಿಟ್ಟುಕೊಂಡವನಂತೆ ಕಾಣುತ್ತಾನೆ.

1. ಅಪ್ಪ ಅಂದ್ರೆ : ದೇವ್ರು
2. ಇವತ್ತಿನ ರಾಜಕೀಯ : ವೇಸ್ಟ್
3. ಹಿಟ್ ಸಿನಿಮಾ ಅಂದರೆ : ಅದೃಷ್ಟ
4. ಲವ್ ಸ್ಟೋರಿ : ಬೇಕಾಗಿತ್ತಾ?
5. ಮಸಾಲೆ ಯಾವುದರಲ್ಲಿರಬೇಕು ಅಂದ್ರೆ : ಆಹಾ... ಹುಡುಗಿಯಲ್ಲಿ!
6. ಆಕಾಶದಷ್ಟು ಎತ್ತರಕ್ಕೆ : ನಾನು ನವೀನ
7. ಸುಷ್ಮಾ ಸ್ವರಾಜ್ ಅಥವಾ ಸೋನಿಯಾ ಗಾಂಧಿ?: ಸೋನಿಯಾ
8. ಅಮ್ಮ ನಿನ್ನ ತೋಳಿನಲ್ಲಿ : ಫಾರ್ ಎವರ್
9. ಭಯ ಅಂದ್ರೆ : ಗೊತ್ತಿಲ್ಲ ಗುರೂ...
10. ಸಂತೋಷ್ ಹೆಗ್ಡೆ : ಸೂಪರ್

ಇದೇ ಪ್ರಶ್ನೆಗಳನ್ನು ಮತ್ತೊಬ್ಬ ಯಂಗ್ ಅಂಡ್ ಎನರ್ಜೆಟಿಕ್ ನಟ ಪ್ರಜ್ವಲ್‌ನನ್ನು ಕೇಳಿದಾಗ...



1. ಅಪ್ಪ ಅಂದ್ರೆ : ದೇವ್ರು
2. ಇವತ್ತಿನ ರಾಜಕೀಯ : ಬ್ಯುಸಿನೆಸ್
3. ಹಿಟ್ ಸಿನಿಮಾ ಅಂದರೆ: ಬಾಕ್ಸ್ ಆಫೀಸ್ ಕಲೆಕ್ಷನ್
4. ಲವ್ ಸ್ಟೋರಿ : ಪಾಸ್ಟ್, ಪ್ರೆಸೆಂಟ್ ಅಂಡ್ ಫ್ಯೂಚರ್
5. ಮಸಾಲೆ ಯಾವುದರಲ್ಲಿರಬೇಕು ಅಂದ್ರೆ: ಬಿರಿಯಾನಿಯಲ್ಲಿ!
6. ಆಕಾಶದಷ್ಟು ಎತ್ತರಕ್ಕೆ : ಕನಸು
7. ಸುಷ್ಮಾ ಸ್ವರಾಜ್ ಅಥವಾ ಸೋನಿಯಾ ಗಾಂಧಿ?: ಸುಷ್ಮಾ ಸ್ವರಾಜ್. ಇಬ್ರೂ ಒಳ್ಳೇ ಲೀಡರ್ಸ್. ಆದ್ರೆ ಸುಷ್ಮಾ ಸ್ವರಾಜ್ ಅವರ ಪಾಲಿಟಿಕ್ಸ್ ಅವರ ವರ್ಕಿಂಗ್‌ಸ್ ಸ್ಟೈಲ್ ಚೆನ್ನಾಗಿರುತ್ತೆ.
8. ಅಮ್ಮ ನಿನ್ನ ತೋಳಿನಲ್ಲಿ...: ಸದಾಕಾಲ
9. ಭಯ ಅಂದ್ರೆ: ತಪ್ಪು
10. ಸಂತೋಷ್ ಹೆಗ್ಡೆ: ಯಾರು ಸಿನಿಮಾದಲ್ಲಿ ವಿಲನ್ ರೋಲ್‌ನಲ್ಲಿ ಮಾಡ್ತಾರಲ್ಲ ಅವ್ರಾ? (ಲಂಕೇಶ್: ಅಲ್ಲ.. ಲೋಕಾಯುಕ್ತರು) ಓ ಸಾರಿ ಸಾರಿ... ಅವ್ರು ಒಳ್ಳೆ ಮೇಷ್ಟ್ರು...


ಕರ್ನಾಟಕ ಬಿಟ್ಟುಹೋಗಿ ಅಂದರು ಶಿವಣ್ಣ

"ಡಬ್ಬಿಂಗ್ ಚಿತ್ರಗಳನ್ನು ಮಾಡುವವರು ಕರ್ನಾಟಕ ಬಿಟ್ಟು ಬೇರೆ ರಾಜ್ಯಕ್ಕೆ ಹೋಗಬೇಕು" ಎಂದು ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಗುಡುಗಿದ್ದಾರೆ.

ಈ ಹಿಂದೆ ಡಬ್ಬಿಂಗ್ ಪ್ರಶ್ನೆ ಉದ್ಭವವಾದಾಗಲೆಲ್ಲ ಡಾ. ರಾಜ್‌ಕುಮಾರ್‌ರವರು ಡಬ್ಬಿಂಗ್ ವಿರೋಧಿ ನೇತೃತ್ವವನ್ನು ವಹಿಸಿಕೊಳ್ಳುತ್ತಿದ್ದರು. ಈಗ ರಾಜ್ ಅವರ ಸುಪುತ್ರ ಶಿವರಾಜ್‌ಕುಮಾರ್ ಕೂಡ ಡಬ್ಬಿಂಗ್ ಚಿತ್ರಗಳನ್ನು ಮಾಡುವವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರ ಸಿಟ್ಟು ಎಷ್ಟಿದೆಯೆಂದರೆ ಡಬ್ಬಿಂಗ್ ಚಿತ್ರ ಮಾಡುವವರು ಕರ್ನಾಟಕವನ್ನು ಬಿಟ್ಟು ಹೊರಗೆ ಹೋಗಬೇಕೆಂದು ಆರ್ಭಟಿಸಿದ್ದಾರೆ.

ಶಿವಣ್ಣನ ಈ ಆರ್ಭಟಕ್ಕೆ ಚಿತ್ರರಂಗದ ಡಬ್ಬಿಂಗ್ ವೀರರು ಹೇಗೆ ಸ್ಪಂದಿಸುತ್ತಾರೆ ನೋಡಬೇಕು.


'ಭಾಗೀರಥಿ'ಯೊಂದಿಗೆ ಬರಗೂರು




ಸಾಹಿತಿ ಮತ್ತು ನಿರ್ದೇಶಕ ಬರಗೂರು ರಾಮಚಂದ್ರಪ್ಪ ಮತ್ತೊಮ್ಮೆ ಅತ್ಯಂತ ಗುಟ್ಟಾಗಿ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ಎಂದಿನಂತೆ ಅವರು ಕಲಾತ್ಮಕ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ಈ ಹಿಂದೆ ಬರಗೂರ್ ನಿರ್ದೇಶನದ 'ಶಾಂತಿ' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದ ಭಾವನಾ ಈ ಹೊಸ ಚಿತ್ರದಲ್ಲೂ ನಾಯಕಿಯಾಗಿ ನಟಿಸುತ್ತಿದ್ದಾಳೆ. ಭಾವನಾ ಜೊತೆಗೆ ತಾರಾ ಕೂಡ ಅತ್ಯಂತ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಅಂದಹಾಗೆ ನಮಗೆ ತಲುಪಿರುವ ಮಾಹಿತಿ ಪ್ರಕಾರ ಈ ಚಿತ್ರದ ಹೆಸರು 'ಭಾಗೀರಥಿ'. ಆ ಹೆಸರಿನ ಕೆಳಗಡೆ 'ಕೆರೆಗೆ ಹಾರ' ಎಂದು ಸೇರಿಸಲಾಗಿದೆ. ಅಂದರೆ ಬರಗೂರ್ ಅವರು ಜನಪ್ರಿಯ ಜನಪದ ಕಥಾವಸ್ತುವನ್ನು ಕೈಗೆತ್ತಿಕೊಂಡಿದ್ದಾರೆ ಎಂದಾಯಿತು.

ಈ ಕಥೆಯನ್ನು ಕಮರ್ಷಿಯಲ್ ಚಿತ್ರವಾಗಿ ಮಾಡಬೇಕೆಂದು ಹಲವಾರು ನಿರ್ಮಾಪಕರು ವರ್ಷಾನುಗಟ್ಟಲೆ ಪ್ರಯತ್ನಿಸಿದ್ದರೂ ಅದು ಸಾಧ್ಯವಾಗಿರಲಿಲ್ಲ. ಈಗ ಅದನ್ನು ಕಲಾತ್ಮಕ ಚಿತ್ರ ನಿರ್ದೇಶಕ ಬರಗೂರ್ ತೆಗೆದುಕೊಂಡಿದ್ದಾರೆ. ಅವರಿಗೆ ಒಳ್ಳೆಯದಾಗಲಿ.



ನನಗೂ ಒಂದಿಷ್ಟು ಅವಕಾಶ ಕೊಡಿ....



ಪೋಷಕ ಪಾತ್ರಗಳಿಗಾಗಿ ಪಕ್ಕರಾಜ್ಯಗಳಿಂದ ನಮ್ಮ ಭಾಷೆ ಬಾರದವರನ್ನು ಕರೆತಂದು ರಾಯಲ್ ಟ್ರೀಟ್‌ಮೆಂಟು ನೀಡುವ ಕನ್ನಡ ಚಿತ್ರರಂಗದ ಇಲ್ಲೇ ಹುಟ್ಟಿ ಇಲ್ಲೇ ಬೆಳೆದವರನ್ನು ಅದೆಷ್ಟು ನಿರ್ಲಕ್ಷಿಸಿಬಿಡುತ್ತಾರೆ ಗೊತ್ತೆ?


ಇಲ್ಲೊಬ್ಬ ನಟ 'ನನಗೂ ಒಂದಿಷ್ಟು ಛಾನ್ಸು ಕೊಡಿ ಪ್ಲೀಸ್' ಎಂದು ಬೇಡುತ್ತಿದ್ದಾರೆ.

ಆ ವ್ಯಕ್ತಿ ಬೇರೆ ಯಾರೂ ಅಲ್ಲ, ಕನ್ನಡ ಸಿನಿಮಾ ಇತಿಹಾಸದ ಅತಿ ದೊಡ್ಡ ಶಿಖರ ಟಿ। ಉದಯ್ ಶಂಕರ್ ಅವರ ಪುತ್ರ ಟಿ। ಗುರುದತ್. ತುಂಬಾ ಸಣ್ಣ ವಯಸ್ಸಿಗೇ ಮುಖಕ್ಕೆ ಬಣ್ಣ ಹಚ್ಚಿದ ಗುರುದತ್ ಡಾ. ರಾಜ್ ಸಂಸ್ಥೆಯ ಬಹಳಷ್ಟು ಚಿತ್ರಗಳಲ್ಲಿ ನಟಿಸಿದ್ದಾರೆ. ಮಾಲಾಶ್ರೀ ಜಮಾನಾದಲ್ಲಿ ಒಂದಷ್ಟು ಚಿತ್ರಗಳಲ್ಲಿ ಹೀರೋ ಆಗಿಯೂ ಅವತಾರವೆತ್ತಿದ್ದರು. ಇತ್ತೀಚೆಗೆ 'ದತ್ತ', 'ಕಿಚ್ಚ', 'ಹುಚ್ಚ'ದಂಥ ಒಂದಿಷ್ಟು ಸಿನಿಮಾಗಳನ್ನು ನಿರ್ದೇಶಿಸಿರುವ ಗುರುದತ್ ಸದ್ಯ ನಿರುದ್ಯೋಗಿ. ಜಗ್ಗೇಶ್, ಶಿವರಾಜ್‌ಕುಮಾರ್ ನಟನೆಯ ಚಿತ್ರಗಳು ಬಿಟ್ಟರೆ ಬೇರೆಯವರಿಂದ ಗುರುದತ್‌ಗೆ ಆಫರ್‌ಗಳೇ ಬರಲ್ಲವಂತೆ. ಗುರುದತ್ ಆಗೊಂದು ಈಗೊಂದು ಸಿನೆಮಾಗಳನ್ನು ನಿರ್ದೇಶಿಸುವುದರಿಂದ ಸಿನಿಮಾ ಮಂದಿ ಇವರು ತುಂಬಾ 'ಬ್ಯುಸಿ' ಎಂದು ಕಲ್ಪಿಸಿಕೊಂಡಿದ್ದಾರೆ.




ಇತ್ತೀಚೆಗೆ ನಾಗೇಂದ್ರ ಪ್ರಸಾದ್ ನಿರ್ದೇಶಿಸಿರುವ 'ವಿನಾಯಕ ಗೆಳೆಯರ ಬಳಗ' ಚಿತ್ರದಲ್ಲಿ ರೇಜರ್ ರಾಜನ ಗೆಟಪ್ಪಿನಲ್ಲಿ ಗುರುದತ್ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಅಂತಹ ಅವಕಾಶಗಳಿಗಾಗಿ ಸದಾ ಕಾದಿರುತ್ತಾರೆ. ಈ ಕಾರಣಕ್ಕೇ ಗುರು 'ನನಗೂ ಒಂದಿಷ್ಟು ನಟಿಸೋ ಛಾನ್ಸು ಕೊಡಿ' ಎಂದು ಪ್ರಾರ್ಥಿಸುತ್ತಿದ್ದಾರೆ. ಪಾತ್ರ ಯಾವುದೇ ಆದರೂ ಸಹಜವಾಗಿ ಅಭಿನಯಿಸುವ ಗುರುದತ್ ಯಾವ ಪರಭಾಷಾ ವಿಲನ್‌ಗಳಿಗೇನೂ ಕಡಿಮೆಯಿಲ್ಲ, ನಮ್ಮ ಕನ್ನಡ ಚಿತ್ರರಂಗದವರು ಇವರಿಗೆ ಅವಕಾಶ ಕೊಡುವ ದೊಡ್ಡ ಮನಸ್ಸು ಮಾಡಬೇಕಷ್ಟೇ...

ಡ್ಯಾನಿಯನ್ನು ವಂಚಿಸಿದ ಪರಮಾತ್ಮ



ಕನ್ನಡದ ಪ್ರತಿಭಾನ್ವಿತ ಸಾಹಸ ನಿರ್ದೇಶಕ ಡಿಫರೆಂಟ್ ಡ್ಯಾನಿಗೆ 'ಪರಮಾತ್ಮ'ನಿಂದ ಅನ್ಯಾಯವಾಗಿದೆ!

ಕನ್ನಡ ಮಾತ್ರವಲ್ಲದೆ ನೆರೆಯ ತೆಲುಗು ಮತ್ತು ತಮಿಳು ಚಿತ್ರರಂಗಗಳಲ್ಲೂ ಬೇಡಿಕೆ ಹೊಂದಿರುವ ಡ್ಯಾನಿ ಅವರು ಯೋಗರಾಜ್ ಭಟ್ ನಿರ್ದೇಶನದ 'ಪರಮಾತ್ಮ' ಚಿತ್ರಕ್ಕೆ ಎರಡು ಸಾಹಸದೃಶ್ಯಗಳನ್ನು ನಿರ್ದೇಶಿಸಲು ಒಪ್ಪಿಕೊಂಡಿದ್ದರು. ಅದರಂತೆ ಒಂದನ್ನು ಸಂಯೋಜಿಸಿ ಚಿತ್ರೀಕರಣವನ್ನೂ ಮುಗಿಸಿದ್ದರು. ಮತ್ತೊಂದು ಫೈಟ್ ದೃಶ್ಯಕ್ಕೆ ಬೇರೊಂದು ದಿನದ ಕಾಲ್‌ಶೀಟ್ ನೀಡಿದ್ದರು.



ಆದರೆ ಚಿತ್ರತಂಡದವರು ಇದ್ದಕ್ಕಿದ್ದಹಾಗೆ "ಪುನೀತ್ ಅವರ ಡೇಟ್ಸ್ ಇದೆ. ಬಂದು ಶೂಟಿಂಗ್ ಮಾಡಿಕೊಡಿ" ಎಂದು ಡ್ಯಾನಿಯನ್ನು ಕೇಳಿದರು. ಆ ವೇಳೆಯಲ್ಲಿ ಡ್ಯಾನಿ ಹೈದರಾಬಾದಿನಲ್ಲಿದ್ದುದರಿಂದ "ಕ್ಷಮಿಸಿ, ನಾನು ಕೊಟ್ಟಿರುವ ಕಾಲ್‌ಶೀಟ್ ದಿನದಂದು ಬಂದು ನನ್ನ ಕೆಲಸ ಮುಗಿಸಿಕೊಡುತ್ತೇನೆ" ಎಂದು ವಿನಮ್ರವಾಗಿ ಹೇಳಿದರು. ಆದರೆ ಡ್ಯಾನಿಗಾಗಿ ಕಾಯದೆ ಮತ್ತೊಬ್ಬ ಸಾಹಸ ನಿರ್ದೇಶಕ ರವಿವರ್ಮನನ್ನು ಕರೆಸಿ ಶೂಟಿಂಗ್ ಮುಗಿಸಿತು.

ಇಷ್ಟೇ ಆಗಿದ್ದರೆ ಡ್ಯಾನಿಗೆ ಅಷ್ಟು ಬೇಸರವಾಗುತ್ತಿರಲಿಲ್ಲ. ಇವತ್ತು ಡ್ಯಾನಿ ಸಾಹಸ ದೃಶ್ಯವನ್ನು ಸಂಯೋಜಿಸಲು ಕಡಿಮೆಯೆಂದರೂ ಒಂದು ಲಕ್ಷ ರೂಪಾಯಿಗಳ ಸಂಭಾವನೆ ಪಡೆಯುತ್ತಾರೆ. ಆದರೆ 'ಪರಮಾತ್ಮ' ಚಿತ್ರದ ನಿರ್ಮಾಪಕ ಜಯಣ್ಣ ಬರೀ ಇಪ್ಪತ್ತು ಸಾವಿರ ರೂಪಾಯಿಗಳನ್ನು ಡ್ಯಾನಿ ಮನೆಗೆ ಕಳುಹಿಸಿಕೊಟ್ಟಿದ್ದಾರೆ. ಒಂದೆಡೆ ಪುನೀತ್ ರಾಜ್‌ಕುಮಾರ್‌ಗೆ ಮೂರೂವರೆ ಕೋಟಿ ಸಂಭಾವನೆ ನೀಡಿರುವ ಜಯಣ್ಣ ಮತ್ತೊಂದೆಡೆ ತಮ್ಮ ಜೀವವನ್ನೇ ಪಣಕ್ಕಿಟ್ಟು ರೋಮಾಂಚನ ಹುಟ್ಟಿಸುವ ಸಾಹಸಗಳನ್ನು ಸಂಯೋಜಿಸುವುದಕ್ಕಾಗಿ ಇಷ್ಟು ಕಡಿಮೆ ಹಣ ನೀಡಿರುವುದು ಅನ್ಯಾಯ ಅನ್ನೋದರಲ್ಲಿ ಎರಡು ಮಾತಿಲ್ಲ. ಈ ಕಾರಣಕ್ಕೇ ಡ್ಯಾನಿ, ಜಯಣ್ಣ ಕೊಟ್ಟ ಇಪ್ಪತ್ತು ಸಾವಿರ ರೂಪಾಯಿಗಳನ್ನು ಅವರಿಗೇ ವಾಪಾಸು ಕಳುಹಿಸಿಕೊಟ್ಟಿದ್ದಾರೆ...

ಹೀರೋಗಳಿಗೆ ರಾಜಮರ್ಯಾದೆ ನೀಡುವ ಜಯಣ್ಣನಂಥ ನಿರ್ಮಾಪಕರಿಗೆ ಮಿಕ್ಕ ತಂತ್ರಜ್ಞರ ಮೇಲೆ ಯಾಕಿಷ್ಟು ಅಸಡ್ಡೆ?

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 17-8-2011 RNI No. KARKAN2005/14

ಸುದೀಪ್ ಈಗ ರಾಜಮೌಳಿ ನಿರ್ದೇಶನದ 'ಈಗ' ಎಂಬ ತೆಲುಗು ಚಿತ್ರದಲ್ಲಿ ನಟಿಸುತ್ತಿರುವುದರಿಂದ ಹೆಚ್ಚಿನ ಸಮಯವನ್ನು ಹೈದರಾಬಾದ್‌ನಲ್ಲೇ ಕಳೆಯುತ್ತಿದ್ದಾರೆ. ಅಂದಹಾಗೆ ಸುದೀಪ್ ಆ ಚಿತ್ರದಲ್ಲಿ ನಾಯಕ ನಟನಾಗಿ ನಟಿಸುತ್ತಿಲ್ಲ, ಬದಲಾಗಿ ಅದರಲ್ಲಿ ಈತ ವಿಲನ್. ಈ ಹಿಂದೆ ಉಪೇಂದ್ರ ಕೂಡ ಇಲ್ಲಿ ನಾಯಕನಾಗಿದ್ದಾಗಲೇ ತೆಲುಗಿನಲ್ಲಿ ವಿಲನ್ ಆಗಿ ನಟಿಸಿದ್ದರು. ಅದಕ್ಕಿಂತ ಮೊದಲು ದೇವರಾಜ್ ಮತ್ತು ಟೈಗರ್ ಪ್ರಭಾಕರ್ ಕೂಡ ಅಲ್ಲಿ ವಿಲನ್‌ಗಳಾಗಿ ವಿಜೃಂಭಿಸಿದ್ದರು. ಈಗ ಅವರ ಹಾದಿಯಲ್ಲಿ ಸುದೀಪ್ ಸಾಗುತ್ತಿದ್ದಾರೆ.



'ಈಗ' ಚಿತ್ರ ಮುಗಿದ ನಂತರ ಸುದೀಪ್ ತೆಲುಗಿನಲ್ಲಿ ಹೊಸ ಚಿತ್ರವೊಂದನ್ನು ನಿರ್ದೇಶಿಸಲಿದ್ದಾರಂತೆ. ಅದಕ್ಕೂ ಮುನ್ನ ಅವರು ಹಿಂದಿ ಸಿನಿಮಾವೊಂದನ್ನು ನಿರ್ದೇಶಿಸಲಿದ್ದಾರೆ. ಇದೆಲ್ಲದರ ಮಧ್ಯೆ ಸುದೀಪ್ ನಟಿಸುತ್ತಿರುವ ಏಕೈಕ ಕನ್ನಡ ಸಿನಿಮಾ ದ್ವಾರಕೀಶ್ ನಿರ್ಮಾಣದ 'ರಾಜಾ ವಿಷ್ಣುವರ್ಧನ್.'

ಇದೆಲ್ಲದರ ಅರ್ಥ ಬರುವ ದಿನಗಳಲ್ಲಿ ಕನ್ನಡ ಸಿನಿಮಾಗಳಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಳ್ಳುವುದು ಇನ್ನಷ್ಟು ಕಡಿಮೆಯಾಗುತ್ತದೆಯೇ?

ರಮ್ಯಾ ರಿಟೈರಾಗ್ತಾಳಂತೆ!





ರಮ್ಯ ಅಭಿಮಾನಿಗಳಿಗೆ ನೋವು ಮತ್ತು ನಲಿವು ನೀಡುವ ಸುದ್ದಿ ಇಲ್ಲಿದೆ. ಅದೇನೆಂದರೆ ಆಕೆ ಬರುವ ವರ್ಷ ಮಾತ್ರ ನಟಿಸುತ್ತಾಳಂತೆ. ಆನಂತರ ಚಿತ್ರರಂಗಕ್ಕೆ ವಿದಾಯ ಹೇಳಿ ಗೃಹಸ್ಥಾಶ್ರಮಕ್ಕೆ ಕಾಲಿಡುತ್ತಾಳಂತೆ. ಹಾಗೆಂದು ಆಕೆಯೇ ಘೋಷಿಸಿದ್ದಾಳೆ.

ಕಳೆದ ಹತ್ತು ವರ್ಷಗಳಲ್ಲಿ ತನ್ನದೇ ಆದ ಶೈಲಿಯಲ್ಲಿ ನಟಿಸುತ್ತ, ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳನ್ನು ಗಳಿಸಿರುವ ರಮ್ಯ ಕನ್ನಡ ಚಿತ್ರರಂಗ ಇತ್ತೀಚಿನ ದಿನಗಳಲ್ಲಿ ಕಂಡ ಅತ್ಯಂತ ವರ್ಣರಂಜಿತ ಮತ್ತು ವಿವಾದಾತ್ಮಕ ತಾರೆ ಎಂಬುದರಲ್ಲಿ ಸಂಶಯವೇ ಇಲ್ಲ. ನಟನೆಯಲ್ಲಿ, ಸೌಂದರ್ಯದಲ್ಲಿ, ಫ್ಯಾಷನ್‌ನಲ್ಲಿ ಮಾತಿನಲ್ಲಿ, ವೈಯ್ಯಾರದಲ್ಲಿ, ಸುದ್ದಿ ಮಾಡುವುದರಲ್ಲಿ... ಎಲ್ಲದರಲ್ಲೂ ರಮ್ಯ ನಂಬರ್ ಒನ್ ಸ್ಥಾನ ಪಡೆದಿದ್ದಾಳೆ.

ರಮ್ಯ ಕೈ ಹಿಡಿಯಲಿರುವ ಪೋರ್ಚುಗಲ್ ಹುಡುಗ ಆರಡಿ ಎತ್ತರ ಇದ್ದಾನೆ. ಆದರೆ ಈಕೆ ಕೇವಲ ಐದಡಿ. ಆತನ ಪಕ್ಕದಲ್ಲಿ ಈಕೆ ನಿಂತರೆ ದಿಢೀರನೆ ಅಮಿತಾ ಬಚ್ಚನ್ ಮತ್ತು ಜಯಬಾಧುರಿ ಜೋಡಿಯನ್ನು ನೋಡಿದಂತಾಗುತ್ತದೆ. ಮದುವೆಯಾದ ನಂತರ ಈಕೆ ಬಣ್ಣದ ಜೀವನಕ್ಕೆ ವಿದಾಯವನ್ನು ಹೇಳುವುದೇನೋ ನಿಜ. ಆದರೆ ಕರ್ನಾಟಕಕ್ಕೇ ವಿದಾಯ ಹೇಳಿ ಪೋರ್ಚುಗಲ್‌ಗೆ ಹೋಗುತ್ತಾಳೋ ಅಥವಾ ಇಲ್ಲೇ ಇರುತ್ತಾಳೋ ಎಂಬುದು ಮಾತ್ರ ಗೊತ್ತಿಲ್ಲ.

ಅನ್ನ ತಿನ್ನದೆ ಪುನೀತನಾದ




ಸಾಫ್ಟ್‌ವೇರ್ ಉದ್ಯೋಗಿಗಳು, ಇಂಜಿನಿಯರ್‌ಗಳು ಇತ್ತೀಚೆಗೆ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಅಂತ ಹವರಲ್ಲಿ ಹೊಸ ಸೇರ್ಪಡೆ ನೀಲ್ ಕಮಲ್ ಎಂಬ ಯುವಕ. "ಇಂಜಿನಿಯರಿಂಗ್ ಓದಿರುವ ನೀನು ಮೋಟರ್ ಹಿಡಿದು ನೀರು ಬಿಟ್ಟರೂ ಸರಿ ಚಿತ್ರರಂಗದ ಸಹವಾಸಕ್ಕೆ ಹೋಗಬೇಡ ಅಂತಾ ಅಪ್ಪ ಅಮ್ಮ ಹೇಳಿದ್ದರು. ಆದರೆ ಇಲ್ಲಿ ಗೆಲ್ಲಬೇಕು ಅನ್ನೋ ಬಯಕೆಯಿಂದ ಸಿನಿಮಾ ನಿರ್ದೇಶಕನಾಗಿ ಬಂದಿದ್ದೀನಿ" ಎನ್ನುತ್ತಿರುವ ಈ ಯುವಕ 'ಪುನೀತ್' ಅನ್ನೋ ಸಿನಿಮಾವನ್ನು ಮಾಡಿಮುಗಿಸಿದ್ದಾನೆ. ಆದರೆ ಈ ಚಿತ್ರಕ್ಕೂ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್‌ಗೂ ಯಾವ ಸಂಬಂಧವೂ ಇಲ್ಲ. ಈ ಚಿತ್ರದ ನಾಯಕ 'ರೋಡ್ ರೋಮಿಯೋ' ಖ್ಯಾತಿಯ ದಿಲೀಪ್ ಪೈ.

ಇಂಜಿನಿಯರಿಂಗ್ ಓದಿರುವ ನೀಲ್‌ಕಮಲ್ ಸಿನೆಮಾ ಮಾಡಿರುವುದೇನೋ ಸರಿ. ಆದರೆ ಈತನ ಮೂಢ ನಂಬಿಕೆಯನ್ನು ಕಂಡು ಏನನ್ನಬೇಕೋ ಗೊತ್ತಾಗುತ್ತಿಲ್ಲ. "ನನ್ನ ಸಿನಿಮಾ ಮುಗಿದು ಬಿಡುಗಡೆಯಾಗುವ ತನಕ ನಾನು ಅನ್ನ ತಿನ್ನುವುದಿಲ್ಲ" ಎಂದು ಧರ್ಮಸ್ಥಳದ ಮಂಜುನಾಥಸ್ವಾಮಿಯಲ್ಲಿ ಈತ ಹರಕೆ ಹೊತ್ತಿದ್ದಾನಂತೆ. ಈ ಕಾರಣಕ್ಕೇ ಕಳೆದ ಒಂದೂವರೆ ವರ್ಷದಿಂದ ಈ ಮಹಾನುಭಾವ ಅನ್ನ ಮತ್ತು ಅಕ್ಕಿಯಿಂದ ತಯಾರಿಸಿದ ಯಾವ ಪದಾರ್ಥವನ್ನೂ ತಿಂದಿಲ್ಲವಂತೆ.

ಈ ಸಿನಿಮಾ ಅನ್ನೋ ಮಾಯಾಲೋಕ ವಿದ್ಯಾವಂತರನ್ನೂ ಹೇಗೆಲ್ಲಾ ಮೌಢ್ಯಕ್ಕೆ ತಳ್ಳಿಬಿಡುತ್ತದೆ ನೋಡಿ!



ಪುನೀತ್
ನಿಶಾ ಶೆಟ್ಟಿ



ಬಾಲಿವುಡ್ ಲೋಕ

ಮೊದಲ ಬಾರಿಗೆ ರವಿಚಂದ್ರನ್ ಮಹಿಳಾ ನಿರ್ದೇಶಕಿಯೊಬ್ಬರ ಸಿನೆಮಾದಲ್ಲಿ ನಟಿಸುತ್ತಿದ್ದಾರೆ. ಆ ನಿರ್ದೇಶಕಿಯ ಹೆಸರು ಕವಿತಾ ಲಂಕೇಶ್ ಮತ್ತು ಸಿನಿಮಾದ ಹೆಸರು 'ಕ್ರೇಜಿಲೋಕ'.

ಕವಿತಾ ಇದರ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಬರೆದಿದ್ದಾರಲ್ಲದೆ ಒಂದು ಹಾಡನ್ನೂ ಪ್ರಥಮ ಬಾರಿಗೆ ಬರೆದಿದ್ದಾರೆ. ವಾಸ್ತವಾಗಿ ಈ



ಚಿತ್ರವನ್ನು ಹಿಂದಿಯಲ್ಲಿ ಮಾಡುವ ಬಯಕೆ ಕವಿತಾ ಅವರದ್ದಾಗಿತ್ತು, ಈ ಕುರಿತು ಕವಿತಾ ಬಾಲಿವುಡ್‌ನ ಖ್ಯಾತ ನಿರ್ದೇಶಕ ಸುಭಾಷ್ ಘಾಯ್‌ರೊಂದಿಗೂ ಮಾತುಕತೆ ನಡೆಸಿದ್ದರು. ಆದರೆ ಈ ಚಿತ್ರದ ಸ್ಕ್ರಿಪ್ಟ್ ನೋಡಿದ ಘಾಯ್ "ಇದನ್ನು ನಮಗೇ ಕೊಟ್ಟುಬಿಡಿ. ನಾವೇ ನಿರ್ದೇಶನ ಮಾಡಿಕೊಳ್ಳುತ್ತೇವೆ" ಎಂದರು. ಆದರೆ ಇಂಥದೊಂದು ಸಬ್ಜೆಕ್ಟ್‌ಅನ್ನು ತಾವೇ ನಿರ್ದೇಶಿಸಬೇಕು ಅನ್ನೋದು ಕವಿತಾರ ಹಠ ಮತ್ತು ಬಯಕೆಯಾಗಿತ್ತು. ಹೀಗಾಗಿ ಹಿಂದಿಯಲ್ಲಿ ಸಿದ್ಧಗೊಂಡಿದ್ದ ಈ ಸ್ಕ್ರಿಪ್ಟ್ ಅನ್ನು ಕನ್ನಡೀಕರಿಸಿ 'ಕ್ರೇಜಿಲೋಕ'ವನ್ನಾಗಿಸಿದ್ದಾರೆ. ಈಗ ಮತ್ತೆ ಹಿಂದಿ ಮತ್ತು ದಕ್ಷಿಣ ಭಾರತದ ಹಲವಾರು ಭಾಷೆಗಳಿಂದ ಕವಿತಾರಿಗೆ ಆಫರ್ ಬರುತ್ತಿದೆಯಂತೆ. ಕನ್ನಡ ವರ್ಷನ್ ಮುಗಿಸಿದ ನಂತರ ಉಳಿದ ಭಾಷೆಗಳಿಗೂ ಈ ಚಿತ್ರವನ್ನು ರೀ ಮೇಕ್ ಮಾಡುತ್ತಾರಂತೆ.

ಐವತ್ತು ವರ್ಷದ ತಂದೆ ತನ್ನ ಮಗನೊಂದಿಗೆ ಕಾಲೇಜಿಗೆ ಸೇರುವ ಮತ್ತು ಅಲ್ಲಿ ನಡೆಯುವ ಭಾವನಾತ್ಮಕ ಅಂಶಗಳೇ ಚಿತ್ರದ ತಿರುಳು. ರವಿಚಂದ್ರನ್ 'ಪ್ರೇಮ ಲೋಕ'ದ ನಂತರ ಮತ್ತೆ ಈ ಚಿತ್ರದಲ್ಲಿ ಕಾಲೇಜು ಮೆಟ್ಟಿಲೇರಿದ್ದಾರಲ್ಲದೆ ಪ್ರಥಮ ಬಾರಿಗೆ ಯುವಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈ ಚಿತ್ರದ ವಿಶೇಷ.

ಏರ್‌ಪೋರ್ಟ್
ಸಿನಿಮಾ
ವಿವಿಧ
ಅನುಭವಗ
ಉದಾಹ
ಶಾರುಖ್
ಮುಸ್ಲಿಂ ಎಂಬ
ಆತನನ್ನು
ನಿಲ
ತಡೆಹಿಡಿಯಲ
ಹಾಗೆಯೇ
ಹಾಸನ್‌ರನ್ನು ಮುಸಲ್ಮಾನ
ಭಾವಿಸಿ ಅವರನ್ನು ಏರ್‌ಪೋ
ಒಳಗೆ ಬಿಡದೆ ಕಾಯಿಸಿದ್ದೂ ಆ
ತಮಿಳಿನ ಖ್ಯಾತ ಕಾಮಿ
ವಡಿವೇಲುನನ್ನು ಅಮೆರಿಕಾದ ಏರ್‌ಪೋ
ಅಧಿಕಾರಿಗಳು 'ಬ್ಲೇಡಿ ಬೆಗ್ಗರ್' ಎಂದು ಅವಮಾನಿ

ಇತ್ತೀಚೆಗೆ ಕನ್ನಡದ ನಿರ್ದೇಶಕ ಕೂಡ್ಲು ರಾಮಕೃಷ್ಣ
ಅಂಥದ್ದೇ ಒಂದು ಪ್ರಸಂಗದಲ್ಲಿ ಸಿಲುಕಿಕೊಂಡಿದ್ದರು.
ಮತ್ತು ದಿಗಂತ್ ಒಟ್ಟೊಟ್ಟಿಗೇ ನಟಿಸಿರುವ 'ಮಿ. ಡೂ
ಚಿತ್ರದ ಹಾಡಿನ ಶೂಟಿಂಗ್‌ಗಾಗಿ ಚಿತ್ರತಂಡ ಕಾಂಬೋಡಿ
ತೆರಳಿತ್ತು. ಕೂಡ್ಲು ತಮ್ಮ ಪಾಸ್‌ಪೋರ್ಟ್‌ನಲ್ಲಿ ಮುಖದ
ಹುತ್ತದಂಥ ಗಡ್ಡ ಬೆಳೆಸಿದ್ದ ಫೋಟೋವನ್ನು ಲಗತ್ತಿಸಿದ್ದರು.
ಗೆಟಪ್ಪಿನಲ್ಲೇ ಕಾಂಬೋಡಿಯಾಕ್ಕೆ ಹೋಗಿದ್ದರು ಕೂಡ.

ಆದರೆ ಅಲ್ಲಿಗೆ ಹೋದ ನಂತರ ನಾಯಕ ನಟ
"ಕೂಡ್ಲು ಅಂಕಲ್, ನೀವು ಇಷ್ಟೊಂದು ಸಿನೆಮಾಗಳನ್ನು ಮಾ
ನಿಮಗೆ ಲಕ್ಕು ಅನ್ನೋದೇ ಕುದುರಿಲ್ಲ. ನೀವು ನಿಮ್ಮ ಗ

ಕಾಂಬೋಡಿಯಾದಲ್ಲಿ ಕೂಡ್ಲು ಚೇಷ್ಟೆ!



ಒಮ್ಮೆ ತೆಗೆದು ನೋಡಿ, ನಿಮ್ಮ ಸ್ಟಾರು ತಿರುಗಿಬಿಡು
ಎಂಬ ಉಚಿತ ಸಲಹೆ ನೀಡಿದನಂತೆ. "ಹೌದಲ್ವಾ? ಒಂದು
ತೆಗೆದು ಟೆಸ್ಟ್ ಮಾಡೇಬಿಡ್ತೀನಿ...." ಎಂದು ಕೂಡ್ಲು ಮ
ಬ್ಲೇಡು ಹಾಕಿ ಗಡ್ಡ ಕೆರೆದುಕೊಂಡರಂತೆ.



ಶೂಟಿಂಗ್ ಮುಗಿಸಿ
ಭಾರತಕ್ಕೆ ಹಿಂದಿರುಗಲು
ಏರ್‌ಪೋರ್ಟ್‌ಗೆ ಬಂದು
ಚೆಕ್‌ಇನ್ ಲೈನ್‌ನಲ್ಲಿ ನಿಂ
ಅಲ್ಲಿನ ಅಧಿಕಾರಿಗಳು
'ಪಾಸ್‌ಪೋರ್ಟ್‌ನಲ್ಲಿರೋ
ನೀನಲ್ಲ' ಎಂದು ಕೂಡ್ಲುವ
ದರದರನೆ ಪಕ್ಕಕ್ಕೆಳೆದು
ನಿಲ್ಲಿಸಿದರಂತೆ. ಕಡೆಗೆ
ನಿರ್ಮಾಪಕ ಕಶ್ಯಪ್ ದಾಕೋಜು ಬಂದು ಗಡ್ಡ
ಕೆರೆಸಿಕೊಂಡ ವಿಚಾರವನ್ನು ಬಿಡಿಸಿಟ್ಟಮೇಲೆ ಅಲ್ಲಿನ
ಅಧಿಕಾರಿಗಳು ಕೂಡ್ಲುಗೆ ವಾಪಸ್ ಬರಲು ಅನುಮತಿ
ನೀಡಿದರಂತೆ.

ನಿರ್ದೇಶಕ ಕೂಡ್ಲುವಿನ ಮೇಲೆ ಪ್ರಜ್ವಲ್‌ಗೆ ಅದೇನು ಸಿಟ್ಟ
ಭಾರೀ ಐಡಿಯಾ ಕೊಟ್ಟು ಸರಿಯಾಗೇ ರಿವೇಂಜು ತೀರಿಸಿಕ
ದ್ದಾನೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4